ಉಚಿತ ಪುಸ್ತಕ




## ಡಾ।। ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೩

# ಹಾಲಕ್ಕಿ ಕಥೆಗಳು

ಸಂಪಾದಿಸಿದವರು: ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ



ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಉಚಿತ ಪುಸ್ತಕ

ಡಾ॥ ಎಲ್ ಆರ್ ಹೆಗಡೆ
ಅಪ್ರಕಟಿತ ಸಂಗ್ರಹ ಮಾಲೆ

೩

# ಹಾಲಕ್ಕಿ ಕಥೆಗಳು

**ಸಂಪಾದಿಸಿದವರು**
ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಈ ಪುಸ್ತಕವನ್ನು 'ಮಿತ್ರಮಾಧ್ಯಮ'ದ 'ಉಚಿತ ಪುಸ್ತಕ ಸಂಸ್ಕೃತಿ' ಅಭಿಯಾನದ ಭಾಗವಾಗಿ ಪ್ರಕಟಿಸಿದ್ದು, ಸಾಫ್ಟ್ ಪ್ರತಿಗಳನ್ನು **freebookculture.riverthoughts.com** ವೆಬ್‌ಸೈಟ್‌ನಲ್ಲಿ ಉಚಿತವಾಗಿ ಪಡೆಯಬಹುದು.

*This book is published as part of `Mitramaadhyama' Trust's campaign FREE BOOK CULTURE; people who wish to have their own copy can download it from freebookculture.riverthoughts.com*

# ಹಾಲಕ್ಕಿ ಕಥೆಗಳು

# Halakki Kathegalu

ಸಂಗ್ರಹಕಾರರು
ಡಾ॥ ಎಲ್ ಆರ್ ಹೆಗಡೆ

COLLECTED BY
**Dr. L R Hegde**

ಸಂಪಾದಕರು
ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

EDITED BY
**Smt. Renuka Ramakrishna Bhat**

ಇ - ಪ್ರಕಟಣೆ
ಮಿತ್ರಮಾಧ್ಯಮ
ಬೆಂಗಳೂರು

E-PUBLICATION BY
**MITRAMAADHYAMA (TRUST)**
Bangalore

ಮೊದಲ ಇ-ಪ್ರಕಟಣೆ : ಸೆಪ್ಟೆಂಬರ್ ೨೦೨೦
ಆಕಾರ: ೧/೮ ಡೆಮಿ
ಪುಟಗಳು: ೭೬+೪

First E-Edition: September 2020
Size: 1/8 Demy
Pages: 76+4

ಈ ಪುಸ್ತಕದ ಉಚಿತ ಅಕ್ಷರ ಜೋಡಣೆ ಮಾಡಿ ಸಹಕರಿಸಿದವರು
**ಶ್ರೀ ರವಿಕುಮಾರ್**
**ಶ್ರೀಮತಿ ಶಶಿದೀಪ್**
**ಕುಮಾರಿ ಅನಘಾ ನಾಗಭೂಷಣ**

ಮುಖಪುಟ ರಚನೆ: ಶ್ರೀ ಮುರಳೀಧರ

**This work is licensed under a Creative Commons Attribution-Non Commercial-NoDerivatives 4.0 International License.**

**ಈ ಪುಸ್ತಕವು ಕ್ರಿಯೇಟಿವ್ ಕಾಮನ್ಸ್ ಹಕ್ಕುಪದ್ಧತಿಯಲ್ಲಿ 4.0 ಅಂತಾರಾಷ್ಟ್ರೀಯ ಪರವಾನಗಿಯನ್ನು ಹೊಂದಿದ್ದು ಇದನ್ನು ಯಥಾವತ್ತಾಗಿ ವಾಣಿಜ್ಯೇತರ ಉದ್ದೇಶಗಳಿಗೆ ಮರುಮುದ್ರಿಸುವುದಕ್ಕೆ ಅನುಮತಿ ಇರುತ್ತದೆ.**

# ಪ್ರಕಾಶಕರ ಮಾತು

ಸುಮಾರು ಎರಡೂವರೆ ವರ್ಷದ ಹಿಂದೆ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ನನಗೆ ಕರೆ ಮಾಡಿ, ತಮ್ಮ ಪರಿಚಯ ಮಾಡಿಕೊಂಡರು. ನಾನು ಭಾರತವಾಣಿ ಬಹುಭಾಷಾ ಜ್ಞಾನಕೋಶ ಯೋಜನೆಯಲ್ಲಿ ಇರುವುದನ್ನು ತಿಳಿದುಕೊಂಡಿದ್ದ ಅವರು ತಮ್ಮ ತಂದೆ ದಿ. ಎಲ್ ಆರ್ ಹೆಗಡೆಯವರ ಅಪ್ರಕಟಿತ ಜಾನಪದ ಸಂಗ್ರಹಗಳ ಹಸ್ತಪ್ರತಿಗಳನ್ನು ಗಮನಿಸಬಹುದೇ ಎಂದು ಕೇಳಿದರು.

ನಾನು 1990-92ರ ಅವಧಿಯಲ್ಲಿ ಶಿರಸಿಯಲ್ಲಿದ್ದಾಗ ಒಂದೆರಡು ಸಲ ಶ್ರೀ ಎಲ್ ಆರ್ ಹೆಗಡೆಯವರನ್ನು ಬಸ್ ನಿಲ್ದಾಣದಲ್ಲಿ ಕಂಡಿದ್ದೆ. ಮಾತನಾಡಿಸಲು ಧೈರ್ಯ ಇರದವನಾಗಿದ್ದೆ. ಈಗ ಅವರ ಅಪ್ರಕಟಿತ ಸಂಗ್ರಹವೇ ಇದೆ ಎಂದು ತಿಳಿದಾಗ ಕುತೂಹಲ ಹೆಚ್ಚಾಯಿತು. ಶ್ರೀಮತಿ ರೇಣುಕಾ ಭಟ್ ಅವರ ಮನೆಗೇ ಹೋದೆ. ಅಲ್ಲಿರುವ ಅಪಾರ ಸಂಗ್ರಹವನ್ನು ನೋಡಿ ಅಚ್ಚರಿಯಾಯಿತು. ಅದಾಗಲೇ ಶ್ರೀ ಎಲ್ ಆರ್ ಹೆಗಡೆಯವರು 83 ಪುಸ್ತಕಗಳನ್ನು ಪ್ರಕಟಿಸಿದ್ದವರು. ಆದರೂ ಇಷ್ಟೆಲ್ಲ ಉಳಿದುಕೊಂಡಿದ್ದವು!

ಈಗ ಅವುಗಳಲ್ಲಿ ಆಯ್ದ ಸಂಗ್ರಹಗಳನ್ನು ಒಂದು ಸರಣಿಯಾಗಿ, ಮುಕ್ತ ಮಾಹಿತಿಯಾಗಿ ಪ್ರಕಟಿಸಲಾಗಿದೆ. ಇದನ್ನು ಕ್ರಿಯೇಟಿವ್ ಕಾಮನ್ಸ್ ಹಕ್ಕಿನಡಿಯಲ್ಲಿ ಪ್ರಕಟಿಸಿರುವುದರಿಂದ ಇವುಗಳ ಮುದ್ರಿತ ಪ್ರತಿಗಳನ್ನು ಯಾವುದೇ ಆಸಕ್ತರು ಯಾವ ಅನುಮತಿಯೂ ಇಲ್ಲದೆ, ಇದ್ದ ಹಾಗೆಯೇ ಮುದ್ರಿಸಬಹುದು!

**ಆನ್‌ಲೈನ್‌ನಲ್ಲಿ ಕೇಂದ್ರ ಸರ್ಕಾರದ `ಭಾರತವಾಣಿ' ಯೋಜನೆ, ರಾಜ್ಯ ಸರ್ಕಾರದ `ಕಣಜ' ಯೋಜನೆಗೆ, ಇನ್ನಾವುದೇ ಮುಕ್ತ ಮಾಹಿತಿಯ ಜಾಲತಾಣಕ್ಕೆ ಉಚಿತವಾಗಿ ಈ ಪ್ರತಿಗಳನ್ನು ನೀಡಲಾಗುತ್ತಿದೆ.**

ಜಾನಪದ ಸಾಹಿತ್ಯದ ಮೌಲ್ಯಮಾಪನ ಆಗುವ ಮಾತಿರಲಿ, ಇದ್ದುದನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕಾಲ ಈಗ ಎದುರಾಗಿದೆ. ಆಧುನಿಕತೆ, ನಗರೀಕರಣದ ಪ್ರಭಾವದಿಂದ ಭಾಷೆ - ಲಿಪಿ - ಪರಂಪರಾಗತ ಅರಿವು ಎಲ್ಲವೂ ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸಿಕ್ಕಿದ್ದನ್ನು ಉಳಿಸಿಕೊಂಡು ಹೋಗುವ ತರಾತುರಿಯಲ್ಲಿ ಇದನ್ನು ಪ್ರಕಟಿಸಲಾಗಿದೆ ಎಂಬುದನ್ನು ಓದುಗರು ಗಮನಿಸಬೇಕಿದೆ.

**ಈ ಪುಸ್ತಕದ ಅಕ್ಷರಜೋಡಣೆಗೆ ಸಹಕರಿಸಿದ, ಮುಖಪುಟ ರಚಿಸಿಕೊಟ್ಟ ಫೇಸ್‌ಬುಕ್ ಮಿತ್ರಲೋಕಕ್ಕೆ ಮಿತ್ರಮಾಧ್ಯಮದ ಅನಂತ ವಂದನೆಗಳು. ಡಿಜಿಟಲ್ ಜನಪದವು ಪರಂಪರಾಗತ ಜನಪದವನ್ನು ಉಳಿಸಿಕೊಳ್ಳಲು ಮುಂದಾಗಿರುವುದು, ಅದರಲ್ಲೂ ಹಲವು ಯುವ ವಯಸ್ಕರೇ ಈ ಕೆಲಸ ಮಾಡಿರುವುದು ಕೊಂಚ ಸಮಾಧಾನದ ಸಂಗತಿ. ಇಂತಹ ಜೀವನ್ಮುಖಿ ಯುವಸಮುದಾಯ ವಿಸ್ತಾರವಾಗಲಿ ಎಂದು ಹಾರೈಸುತ್ತೇವೆ.**

**ಮುಕ್ತಮಾಹಿತಿಗೆ ಪುಟ್ಟ ಹೆಜ್ಜೆ ಇಡುವ ಮಿತ್ರಮಾಧ್ಯಮದ ಘೋಷವಾಕ್ಯವನ್ನು ಬೆಂಬಲಿಸುವ ಎಲ್ಲರಿಗೂ ವಂದನೆಗಳು.**

**- ಬೇಳೂರು ಸುದರ್ಶನ ಮತ್ತು ಕೃಷ್ಣನ್**

ಜುಲೈ 2019

# ಸಂಗ್ರಾಹಕರ ಮಾತು

ನಮ್ಮ ಪೂಜ್ಯ ತಂದೆಯವರಾದ ಡಾ॥ ಎಲ್. ಆರ್. ಹೆಗಡೆಯವರು ಕನ್ನಡ ಜಾನಪದ ಸಾರಸ್ವತಲೋಕದಲ್ಲಿ ಚಿರಪರಿಚಿತರು. ಅವರು ತಮ್ಮ ಪೂರ್ತಿ ಜೀವನವನ್ನು ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿದ, ತಮ್ಮ ಕೊನೆಯ ದಿನಗಳಲ್ಲಿ ಅವರೇ ಬರೆದ- 'ಕ್ಷೇತ್ರದಲ್ಲಿ ಕಾರ್ಯದ ನೆನಪುಗಳು' ಗ್ರಂಥವನ್ನು ಓದಿದರೆ ಜಾನಪದ ಕ್ಷೇತ್ರದಲ್ಲಿ ಅವರ ಅಪೂರ್ವ ಸಾಧನೆಯ, ಪಟ್ಟ ಕಷ್ಟಗಳ ಪರಿಚಯವಾಗುತ್ತದೆ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆಗಳು, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಅಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ತುಲನಾತ್ಮಕ ವಿಶ್ಲೇಷಣೆಗಳು ನಿಜವಾಗಿಯೂ ಶ್ಲಾಘನೀಯ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅಧ್ಯಯನಗಳು ಅನನ್ಯವಾಗಿದೆ. ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಉಲ್ಲೇಖನೀಯ.

ಜಾನಪದ ಅಧ್ಯಯನದ ಜೊತೆಗೆ ಹೋಮಿಯೋಪಥಿ, ಆಯುರ್ವೇದ, ಹಳ್ಳಿಯ ಚಿಕಿತ್ಸಾ ಪದ್ಧತಿಗಳಲ್ಲಿಯೂ ಕೂಡ ಅಪಾರ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಂಡಿದ್ದರು. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದರು. ಕೆಲಸ ಮಾಡುವ ವೈಖರಿಯನ್ನು ನೋಡಿದಾಗ ಇಂಗ್ಲೀಷಿನ 'One man army' ನೆನಪಾಗುತ್ತದೆ.

ನಾವು ನಾಲ್ಕು ಮಕ್ಕಳು ರೇಣುಕಾ, ರಾಮಕೃಷ್ಣ, ಸುನಂದಾ ಹಾಗು ಸವಿತಾ. ನಾವು ಚಿಕ್ಕವರಿರುವಾಗ, "ಯಾಕಪ್ಪಾ ಈ ಹಳ್ಳಿಗರ ಹಾಡು, ಕಥೆ, ಸಾಹಿತ್ಯಗಳನ್ನಾದರೂ ಸಂಗ್ರಹಿಸುತ್ತಾರೋ" ಏನೂ ಪ್ರಯೋಜನವಿಲ್ಲದ ಉಪಯೋಗವಿಲ್ಲದ ಕೆಲಸವೆಂದೂ, ವೇಳೆ ಹರಣವೆಂದೂ ಅನ್ನಿಸುತ್ತಿತ್ತು. ಆದರೆ, ಈಗ ಕಷ್ಟಪಟ್ಟು ಸಂಗ್ರಹಿಸಿದ್ದರಲ್ಲಿ ಕೆಲವನ್ನಾದರೂ ಉಳಿಸಬೇಕೆಂಬ ಹಂಬಲದಿಂದ ಕೆಲಸ ಮಾಡತೊಡಗಿದಾಗ ಇದೆಷ್ಟು ಕಷ್ಟತರವಾದ, ಕ್ಲಿಷ್ಟವಾದ ಕೆಲಸವೆಂದು ತಿಳಿಯಹತ್ತಿದೆ. Absent minded professor ಆದರೂ ಜಾನಪದ ವಿಷಯಗಳನ್ನು ಸಂಗ್ರಹಿಸುವಾಗ ಹೇಳಿದವರ ಹೆಸರು, ಬರೆಸಿಕೊಂಡ ದಿನಾಂಕ, ವಿವಿಧ ವಿಷಯಗಳ ವಿಂಗಡಣೆ, ಸಂಸ್ಕರಣೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಂದಿನ ದಿನಗಳಲ್ಲಿ ಅಷ್ಟೊಂದು ಶ್ರಮ ವಹಿಸದಿದ್ದಾರೆ. ಸಂಗ್ರಹಿಸಿದ್ದೆಲ್ಲವೂ ನಶಿಸಿಹೋಗುತ್ತಿದ್ದವೆಂಬ ಅನುಭವವಾಗುತ್ತದೆ. ದೂರದೃಷ್ಟಿ ಮೆಚ್ಚುವಂಥದ್ದು. ಬಹುಶಃ ನಿರೂಪಕರಾರೂ ಈಗಿಲ್ಲ. ಅವರ ಸಂಗ್ರಹಗಳೂ ಅವರ ಜೊತೆಯೇ ಆಧುನಿಕತೆಯ

ಜೀವನಶೈಲಿಯಲ್ಲಿ ಅಡಗಿಹೋಗಿದೆ. ಈಗಿನ ತಲೆಮಾರಿನವರ ಹತ್ತಿರ ಸ್ವಲ್ಪವೂ ಸಿಗುವ ಆಸೆಯಿಲ್ಲ. ಮಾಡಿದ ಸಂಗ್ರಹವನ್ನು ಅವಲೋಕಿಸಿದಾಗ ಜನಪದರ ಮುಗ್ಧ ಮನಸ್ಸು, ಸ್ವಚ್ಛಂದ ವಾತಾವರಣ, ಆಗಿನ ಸಾಮಾಜಿಕ ರೀತಿ-ನೀತಿಗಳ ಕಲ್ಪನೆ, ಜೀವನದ ಸರಳತೆ, ಸರಳ-ಸುಲಭ ಚಿಕಿತ್ಸಾಪದ್ಧತಿ ಎಲ್ಲ ತಿಳಿಯ ಹತ್ತಿದೆ.

ತಂದೆಯವರೇ ಹೇಳಿಕೊಂಡಂತೆ ಅವರಿಗೆ ಹಳ್ಳಿಯ ಹಾಡುಗಳನ್ನು ಕಲಿತು, ಹೇಳುವ ಹವ್ಯಾಸ ಚಿಕ್ಕಂದಿನಿಂದೇ ಇತ್ತು. ಧ್ವನಿ ಬಹಳ ಮಧುರವಾಗಿತ್ತು; ಸುಶ್ರಾವ್ಯವಾಗಿ ಹೇಳುತ್ತಿದ್ದರು. ಹವ್ಯಕ ಹೆಂಗಸರಲ್ಲಿ ಹಬ್ಬ-ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಮುಂಜಾನೆ, ಸಂಜೆ ಕೆಲಸ ಮಾಡುವಾಗ ಹಾಡುಗಳನ್ನು ಹೇಳುವ ಪರಿಪಾಠವಿತ್ತು. ಹೀಗಾಗಿ ಅರಿವಿಲ್ಲದಂತೆ ಜಾನಪದದತ್ತ ವಾಲಿದ್ದರು. ಮೊದಮೊದಲು ಸಮಯದ ಅಭಾವದಿಂದ, ಹೋಮಿಯೋಪಥಿ ಔಷಧಗಳ ಅಭ್ಯಾಸ, ದಿನಾಲೂ ಬರುವ ರೋಗಿಗಳ ಉಪಚಾರ, ಕಾಲೇಜಿನ ಕೆಲಸಗಳ ಮೂಲಕ ಹೆಚ್ಚು ಸಮಯ ಸಿಗುತ್ತಿರಲಿಲ್ಲ. ಕೆನರಾ ಕಾಲೇಜಿಂದ ಅಧ್ಯಾಪಕ ಕೆಲಸದಿಂದ ನಿವೃತ್ತಿಯ ನಂತರ ಉಳಿದ ಪೂರ್ತಿ ಆಯುಷ್ಯವನ್ನು ಜಾನಪದಕ್ಕಾಗಿಯೇ, ಆದರ ಸಂಗ್ರಹ, ಉಳಿಸುವ ಕೆಲಸಕ್ಕೇ ಮೀಸಲಿಟ್ಟಿದ್ದರು. ಉತ್ತರ ಕನ್ನಡದ ಬಹುತೇಕ ಎಲ್ಲ ಹಳ್ಳಿಗಳನ್ನು ತಿರುಗಿ ಸಾಕಷ್ಟು ವೈವಿಧ್ಯಪೂರ್ಣ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದ್ದರು. ಸಾಧ್ಯವಾದಷ್ಟು ಪ್ರಕಟಣೆ ಕಂಡಿವೆ.

ಈ ಕ್ಷೇತ್ರದಲ್ಲಿ ಅವರ ಏಳ್ಗೆಯನ್ನು ಕಂಡು ಪ್ರಕಟಣೆಗಳಿಗೆ ತೊಡಕನ್ನು ತಂದು ಒಡ್ಡುವವರೂ ಇದ್ದರು. ಗಮನಕ್ಕೆ ಬಂದರೂ ಅಷ್ಟಾಗಿ ಹಚ್ಚಿಕೊಳ್ಳದೆ ತಮ್ಮ ಕೈಯಿಂದ ಖರ್ಚು ಮಾಡಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದರು. ಜಾನಪದ ವೈದ್ಯಕೀಯದಲ್ಲಿ, ಅಂದರೆ- ಹಳ್ಳಿಯ ಚಿಕಿತ್ಸಾಪದ್ಧತಿಗಳನ್ನು ಅವರಷ್ಟು ಸಂಗ್ರಹಿಸಿ ಪ್ರಕಟಿಸಿದವರು ವಿರಳವೆಂದೇ ನನ್ನ ಭಾವನೆ. ಆದರೆ, ಕೊನೆಗಾಲದಲ್ಲಿ ಪರಿಷ್ಕರಿಸಿ, ವಿಂಗಡಿಸಿ, ನಾವಿಬ್ಬರೂ ಕೂಡಿ ತಯಾರಿಸಿದ ಹಸ್ತಪ್ರತಿಗಳು– ಸುಮಾರು ಮೂವತ್ತೈದು ಹಸ್ತಪ್ರತಿಗಳು. ನಮಗಾರಿಗೂ ಅರಿವಿಲ್ಲದಂತೆ ಅವೆಲ್ಲವೂ ಯಾರದೋ ಕೈ ಸೇರಿದೆ; ಅವೆಲ್ಲ ಅತ್ಯಮೂಲ್ಯವಾಗಿದ್ದವು. ಎಷ್ಟು ಪ್ರಯತ್ನಿಸಿದರೂ ಲಭ್ಯವಾಗಲಿಲ್ಲ. ಆದರೆ, ಒಂದು ಮಾತು– ಪರಿಷ್ಕರಿಸಿ, ವಿಂಗಡಿಸುವ ಮೊದಲು ಅವುಗಳ ಎರಡು-ಮೂರು ಮೂಲಪ್ರತಿಗಳು ಇರುತ್ತಿದ್ದವು. ಆ ಸಂಗ್ರಹಗಳನ್ನು ನಮ್ಮ ಮನೆಗೆ ತಂದು, ಆ ಮೂಲಪ್ರತಿಗಳಿಂದ ಸುಮಾರು ೧೪-೧೫ ಹಸ್ತಪ್ರತಿಗಳನ್ನು ತಯಾರಿಸಿ ಅದನ್ನು ಇ-ಪ್ರಕಟಣೆಯ ಮೂಲಕ ಜಾನಪದ ಪ್ರೇಮಿಗಳಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ.

ನಾವಂತೂ ಈ ಕೆಲಸದ ಆಶೆಯನ್ನೇ ಬಿಟ್ಟಿದ್ದೆವು. ಅನೇಕ ಜಾನಪದ ಕ್ಷೇತ್ರದಲ್ಲಿದ್ದವರ ಸಂಪರ್ಕ ಮಾಡುವ ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ಹೆಗಡೆಯವರ ಬಗ್ಗೆ ಗೌರವದ ಮಾತನಾಡುವವರೇ ಹೊರತು ಸಹಾಯಕ್ಕೆ ಅಥವಾ

ಮಾರ್ಗದರ್ಶನಕ್ಕೆ ಯಾರೂ ಮುಂದೆ ಬರಲಿಲ್ಲ. ಕೊನೆಯಲ್ಲಿ ಶ್ರೀಯುತ ನಂದಕುಮಾರರ ಪರಿಚಯವಾಗಿ ಅವರು ಶ್ರೀಯುತ ಬೇಳೂರು ಸುದರ್ಶನರ ಬಗ್ಗೆ ಹೇಳಿದರು. ನಾನು ನಿರಾಸೆಯಿಂದಲೇ ಕೊನೆಯ ಪ್ರಯತ್ನವೆಂದು ಅವರಿಗೆ ಫೋನ್ ಮಾಡಿದೆ. ಅವರು ಸಹಾಯ ಹಾಗೂ ಮಾರ್ಗದರ್ಶನ ಮಾಡಲು ಮುಂದೆ ಬಂದರು. ಇಂದು ಅವರ ಜೊತೆಯಲ್ಲಿ ಅವರ ಅನೇಕ ಸ್ನೇಹಿತರೂ ಕೈ ಜೋಡಿಸಿದ್ದಾರೆ. ತಂದೆಯವರೇ ಹೇಳಿಕೊಂಡಂತೆ ೧೫ ಸಾವಿರ ಪುಟಗಳ ಸಂಗ್ರಹದಲ್ಲಿದ್ದ ಸ್ವಲ್ಪ ಭಾಗವನ್ನು ಉಳಿಸುವ ಪ್ರಯತ್ನ ಸಾಗಿದೆ. ಇಷ್ಟು ಉಳಿದರೂ ನಮ್ಮೆಲ್ಲರ ಪ್ರಯತ್ನ ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಈ ನಿಟ್ಟಿನಲ್ಲಿ ಸಹಾಯ ಮಾಡಿದ (ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ) ಎಲ್ಲರಿಗೂ ನಾವು ಚಿರಋಣಿಗಳು.

**ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ**

9535192074 / 8660421309

# ಡಾ॥ ಎಲ್ ಆರ್ ಹೆಗಡೆ ಕೃತಿಗಳು

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | | |
|---|---|---|
| ೧ | ಮೂಢನಂಬಿಕೆಗಳು | (ಪ್ರಚಾರೋಪನ್ಯಾಸ) |
| ೨ | ಜಾನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೩ | ಪುರಾಣ ಜಿಜ್ಞಾಸೆ | (ಪ್ರಚಾರೋಪನ್ಯಾಸ) |
| ೪ | ಜನಪದ ಸಾಹಿತ್ಯದಲ್ಲಿ ಮದುವೆ | (ಪ್ರಚಾರೋಪನ್ಯಾಸ) |
| ೫ | ಬತ್ತಲೇಶ್ವರ ರಾಮಾಯಣ | (ಪ್ರಚಾರೋಪನ್ಯಾಸ) |
| ೬ | ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ | (ಪ್ರಚಾರೋಪನ್ಯಾಸ) |
| ೭ | ಪರಮೇಶ್ವರಿಯ ಪದಗಳು | (ಕಥನಗೀತೆಗಳು) |
| ೮ | ಗುಮ್ಮನ ಪದಗಳು | (ಕಥನಗೀತೆಗಳು) |
| ೯ | ಉತ್ತರ ಕನ್ನಡ ಜನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೧೦ | ಹಾಲಿನ ತೆನೆ | (ಜಾನಪದ ತ್ರಿಪದಿಗಳು) |
| ೧೧ | ಕುಮಾರವ್ಯಾಸನ ಪಾತ್ರಸೃಷ್ಟಿ | (ಮಹಾಪ್ರಭಂಧ) |
| ೮೦ | ಗಾಮೊಕ್ಕಲ ಕಥೆಗಳು | |

## ಮೈಸೂರು ವಿಶ್ವವಿದ್ಯಾಲಯ

| | | |
|---|---|---|
| ೧೨ | ತಿಮ್ಮಕ್ಕನ ಪದಗಳು | (ಕಥನಗೀತೆಗಳು) |
| ೧೩ | ಕೆಲವು ಲಾವಣಿಗಳು | (ಕಥನಗೀತೆಗಳು) |
| ೧೪ | ನಮ್ಮ ಜನಪದ ಕಥೆಗಳು | (ಕಥನಗೀತೆಗಳು) |
| ೧೫ | ಮಲೆನಾಡಿನ ಸೆರಗಿನ ಕಥೆಗಳು | (ಕಥನಗೀತೆಗಳು) |

## ಬೆಂಗಳೂರು ವಿಶ್ವವಿದ್ಯಾಲಯ

| | | |
|---|---|---|
| ೧೬ | ಹಾಡುಂಟೇ ನನ್ನ ಮಡಿಲಲ್ಲಿ | (ತ್ರಿಪದಿ ಸಂಕಲನ) |
| ೧೭ | ಗುಮಟೆಯ ಪದಗಳು | (ಜನಪದ ಗೀತೆಗಳು) |
| ೧೮ | ಮುಕ್ರಿ ಮತ್ತು ಹೊಲೆಯರ ಪದಗಳು | (ಜನಪದ ಗೀತೆಗಳು) |

## ಗ್ರಾಮಜೀವನ ಕಾರ್ಯಾಲಯ ಕುಮಟಾ

| | | |
|---|---|---|
| ೧೯ | ಬಾಳ ದೀಪಾವಳಿ | (ಕವನ ಸಂಕಲನ) |

## ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ

| | | |
|---|---|---|
| ೨೦ | ಜೈನಭಾರತ ಕಥೆಗಳು | |

## ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

| | | |
|---|---|---|
| ೧೧ | ಜನಪದ ಸಾಹಿತ್ಯ | (ವಿಮರ್ಶಕ ಗ್ರಂಥ) |
| ೧೨ | ಗೊಂಡರ ಪದಗಳು | (ಜನಪದ ಗೀತೆಗಳು) |
| ೧೩ | ಮಾಚಯ ಕಥನ ಗೀತಗಳು | ಕ.ಸಾ.ಪ., ಬೆಂಗಳೂರು ೨೦೦೨ |
| ೧೪ | ಕತೆ ಗಾದೆಗಳು | ಕ.ಸಾ.ಪ., ಬೆಂಗಳೂರು ೨೦೦೪ |

## ಸಮಾಜ ಪುಸ್ತಕಾಲಯ, ಧಾರವಾಡ

| | | |
|---|---|---|
| ೧೫ | ಕಾವ್ಯ ವ್ಯಾಸಂಗ | (ಕಾವ್ಯವಿಮರ್ಶೆ) |
| ೧೬ | ಸುವ್ವೀ ಸುವ್ವೀ ಸುವ್ವಾಲೆ | (ಜಾನಪದ ತ್ರಿಪದಿಗಳು) |
| ೧೭ | ಬೆಳಿಯಮ್ಮನ ಹಾಡುಗಳು | (ಕಥನಗೀತೆಗಳು) |
| ೧೮ | ಜನಪದ ಜೀವನ ಮತ್ತು ಕಲೆ | (ಲೇಖನಗಳು) |
| ೧೯ | ಗಾಂವಠಿ ಚಿಕಿತ್ಸೆ | |
| ೨೦ | ಪಾಕರಸಾಯನ | (ಅಡಿಗೆ ಗ್ರಂಥ) |

## ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

| | | |
|---|---|---|
| ೨೧ | ಕರ್ನಾಟಕದ ಕರಾವಳಿಯ ಜನಪದ ಗೀತೆಗಳು | |
| ೨೨ | ಕರ್ನಾಟಕ ಕರಾವಳಿಯ ಜನಪದ ಕಥೆಗಳು | |
| ೨೩ | ಗೇಣುಗುಡ್ಡದ ಕುಳ್ಳ | (ಮಕ್ಕಳ ಕಥೆಗಳು) |
| ೨೪ | ಉತ್ತರ ಕನ್ನಡದ ಗೊಂಡರು | |
| ೨೫ | ಉತ್ತರ ಕನ್ನಡದ ಸಿದ್ದಿಯರು | (೨ನೇ ಆವೃತ್ತಿ) |
| ೨೬ | ಜನಪದ ಸಾಹಿತ್ಯ | (ಇತರರೊಡನೆ ಬರೆದುದು) |
| ೨೭ | ಗೇಣುಗಡ್ಡದ ಕುಳ್ಳ ಮತ್ತು<br>ಇತರ ಕಥೆಗಳು - ೧೯೮೦ | |

## ಸಾಹಿತ್ಯ ಭಂಡಾರ, ಹುಬ್ಬಳ್ಳಿ

| | | |
|---|---|---|
| ೨೮ | ಲಂಕಾದಹನ | (ಬತ್ತಲೇಶ್ವರ ರಾಮಾಣದ ಭಾಗ) |
| ೨೯ | ಅನುಭವ ಚಿಕಿತ್ಸೆ | (ವೈದ್ಯಗ್ರಂಥ) |
| ೪೦ | ಆರೋಗ್ಯ ಧರ್ಮ ಪಾಲನೆ | (ವೈದ್ಯಗ್ರಂಥ) |
| ೪೧ | ದನಗಳ ವೈದ್ಯ | (ವೈದ್ಯಗ್ರಂಥ) |
| ೪೨ | ರೂಢಿಯ ಚಿಕಿತ್ಸೆ | (ವೈದ್ಯಗ್ರಂಥ) |

## ವಿಶ್ವ ಪ್ರಕಾಶನ, ಹುಬ್ಬಳ್ಳಿ

೪೩ ಸುಲಭ ಚಿಕಿತ್ಸೆ (ವೈದ್ಯಗ್ರಂಥ)

---

## ಜ್ಞಾನಸಾಧನ ಗ್ರಂಥಮಾಲೆ ಹೆಗಡೆ, ಕುಮಟಾ/ಸಿದ್ದಾಪುರ

೪೪ ಹಕ್ಕಿ ನರಸಣ್ಣ (ಕಥಾ ಸಂಕಲನ)

೪೫ ಸಿದ್ದಿಯರ ಕಥೆಗಳು (ಜನಪದ ಕಥೆಗಳು)

೪೬ ಕರಾವಳಿಯ ಕಥೆಗಳು (ಜನಪದ ಕಥೆಗಳು)

೪೭ ಜನಪದ ಭಾರತದ ಕಥೆಗಳು (ಜನಪದ ಕಥೆಗಳು)

೪೮ ಕುಮರಿ ಮರಾಟಿಗರ ಕಥೆಗಳು (ಜನಪದ ಕಥೆಗಳು)

೪೯ ಜನಪದ ವೈದ್ಯ (ಜನಪದ ಕಥೆಗಳು)

೫೦ ಹೆಂಗಸರ ಗೀತಗಳು

೫೧ ಕುಮಾರವ್ಯಾಸ (ವಿಮರ್ಶೆ)

೫೨ ಮಂಗಲ ಗೀತಗಳು

೫೩ ಪೂಜಾ ಗೀತಗಳು

೫೪ ಒಗಟುಗಳು ಮತ್ತು ಕಥೆಗಳು

೫೫ ಅಪೂರ್ವ ಮೃದಂಗ (ಜನಪದ ಕಥೆಗಳು)

೫೬ ಹೋಮಿಯೋಪಥಿ ಚಿಕಿತ್ಸೆ

---

## ಕದಂಬ ಪ್ರಕಾಶನ, ಸಿರ್ಸಿ

೫೭ ಹಾಲಕ್ಕಿ ಹೆಂಗಸರ ಮದುವೆ ಹಾಡುಗಳು

---

## ಸಾಹಿತ್ಯ ಅಕಾಡೆಮಿ, ನವದೆಹಲಿ

೫೮ ಜಾನಪದ ಗಿರಿಜನರ ಕಥೆಗಳು

---

## ಶ್ರೀ ರಾಜು ಶೆಟ್ಟಿ, ಕುಮಟಾ

೫೯ ಆಹಾರ ಉಪಾಹಾರ

೬೦ ಆರೋಗ್ಯವೇ ಭಾಗ್ಯ

---

## ಜ್ಞಾನಜ್ಯೋತಿ ಪ್ರಕಾಶನ, ಸಿದ್ದಾಪುರ (ಉ.ಕ)

೬೧ ಊರೌಷಧಿಗಳ ಚಿಕಿತ್ಸೆ

---

## ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೬೨ ಪಶುವೈದ್ಯ ರತ್ನಾಕರ

## ಜ್ಞಾನಸಾಧನ ಗ್ರಂಥಮಾಲೆ, ಸಿದ್ದಾಪುರ (ಉ.ಕ)

| | | |
|---|---|---|
| ೬೩ | ಕನ್ನಡ ಗಾದೆಗಳು | |
| ೬೪ | ಹಳಗನ್ನಡದ ಕವಿಗಳು | |
| ೬೫ | When The Indicated Remedy Fails in Homeopathic Practice | |
| ೬೬ | ಗರ್ಭಿಣಿ, ಬಾಣಂತಿ ಉಪಚಾರ | ಸಂಗ್ರಾಹಕಿ ಸೌ. ರೇಣುಕಾ ಭಟ್ಟ |
| ೬೭ | ಮಧುರ ಗೀತಗಳು | ಸಂಗ್ರಾಹಕಿ ಸೌ. ರೇಣುಕಾ ಭಟ್ಟ |

## ಡಾ. ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಸಿರ್ಸಿ

| | | |
|---|---|---|
| ೬೮ | ಡಾ. ಎಲ್. ಆರ್. ಹೆಗಡೆ ಕೃತಿ ಸೂಚಿ | |
| ೬೯ | ಬಿಂಬ ಪ್ರತಿಬಿಂಬ | |
| ೭೦ | ಗಾದೆ ಕಥೆಗಳು | |
| ೭೧ | ಹೊನ್ನಮ್ಮನ ಮನೆಯ ಕಥೆಗಳು | |
| ೭೨ | ಮಾತಿನರಗಿಣಿಯೇ ನುಡಿದಾವೋ | |
| ೭೩ | ನಾಡ ಮದ್ದು | |
| ೭೪ | ಜಾನಪದ ಕ್ರೀಡೆ | |
| ೭೫ | ಆರೋಗ್ಯ ದರ್ಶನ | |
| ೭೬ | ಸಣ್ಣ ಕೂಸ ಹೇಳಿದ ಕಥೆಗಳು | |
| ೭೭ | ಪಡುವಣದ ಬೆಡಗು | (ವಿದ್ವಾಂಸರ ಉಪನ್ಯಾಸಗಳು) |
| ೭೮ | ನಾಮಧಾರಿ ಕತೆಗಳು | ಡಾ.ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಕುಮಟಾ |

## ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು

| | | |
|---|---|---|
| ೭೯ | ಅವರಿವರು ಹೇಳಿದ ಕಥೆಗಳು | |

## ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೨೦೦೨

| | | |
|---|---|---|
| ೮೦ | ಲೋಕಗೀತ ಮಂಜರಿ | ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ, ೨೦೦೨ |
| ೮೧ | ಸಾಂಪ್ರದಾಯಿಕ ಅಡುಗೆಗಳು | ಸಂಗ್ರಾಹಕಿ ಸೌ.ರೇಣುಕಾ ಭಟ್ಟ |

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

| | | |
|---|---|---|
| ೮೨ | ಡಾ|| ಎಲ್. ಆರ್. ಹೆಗಡೆಯವರ ಕ್ಷೇತ್ರ ಕಾರ್ಯದ ನೆನಪುಗಳು | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು |

**ಸಪ್ನ ಬುಕ್ ಹೌಸ್**

೮೩ ಆರೋಗ್ಯಕರ ಚಿಕಿತ್ಸೆ (ವೈದ್ಯಗ್ರಂಥ)

೮೪ ಹೋಮಿಯೋಪಥಿ ಔಷಧಿ ಗುಣಧರ್ಮ
ಮತ್ತು ಚಿಕಿತ್ಸಾಸಾರ

---

- ಇವುಗಳಲ್ಲಿ 'ಹಾಲಕ್ಕಿ ಹೆಂಗಸರ ಮದುವೆಯ ಹಾಡುಗಳು' ಎಂಬ ಗ್ರಂಥಕ್ಕೆ ೧೯೮೮ನೇ ಸಾಲಿನ 'ಉತ್ತಮ ಜನಪದ ಗೀತ ಸಂಕಲನ' ಎಂದು ಮತ್ತು 'ಜನಪದ ಮತ್ತು ಗಿರಿಜನರ ಕಥೆಗಳು' ಎಂಬ ಗ್ರಂಥಕ್ಕೆ ಗದ್ಯ ಪ್ರಕಾರದಲ್ಲಿ ೧೯೯೦ನೇ ಸಾಲಿನ ಉತ್ತಮ ಗ್ರಂಥವೆಂದೂ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ ದೊರೆತಿವೆ.
- ೧೯೮೯ ಜಾನಪದ ಅಕಾಡೆಮಿ ಪ್ರಶಸ್ತಿ- ಹೊಸಪೇಟೆಯಲ್ಲಿ ಹಾ.ಮಾ. ನಾಯ್ಕರಿಂದ ಪ್ರಶಸ್ತಿ ಪ್ರಧಾನ.
- ೨೦೦೧ ನವಂಬರ್ ೧, ಮಾನ್ಯ ಮುಂತ್ರಿ ಎಸ್.ಎಂ.ಕೃಷ್ಣರಿಂದ ರಾಜ್ಯ ಪ್ರಶಸ್ತಿ ಪ್ರಧಾನ.

# ಪರಿವಿಡಿ

1. ಅಬ್ಬಾ ಮಂಜೂರಿ

- **ದಿ. ದೇವು ನಾಗು ಗುನಗ (ಗೌಡ),** ಅಡಲೂರು, ಅಂಕೋಲಾ ತಾಲೂಕು......15

2. ಅನುಗ್ರಹ

- **ದಿ. ಪುಟ್ಟು ನಾಗು ಗೌಡ,** ದುಗ್ಗೂರು, ಹೊನ್ನಾವರ ತಾಲೂಕು..................17

3. ಉದಾರ ರಾಜ

- **ದಿ. ಬುದ್ದು ಶೇರುಗೌಡ,** ಬಿಣಗಾ, ತಾ. ಕಾರವಾರ............................20

4. ಚಮತ್ಕಾರ

- **ದಿ. ಪುಟ್ಟ ನಾಗು ಗೌಡ,** ವಂದೂರು, ತಾ. ಹೊನ್ನಾವರ.........................21

5. ಶಿನ್ನದ ನವಿಲು ..................................................................24

6. ಚೌಡಿವೇಷ

- **ದುಗ್ಗೂರು ಕುಪ್ಪಗೌಡ**.......................................................... 29

7. ತಾಯೀ, ಹಣ್ಣಲ್ಲ, ಹೆಣ್ಣು

- **ದುಗ್ಗೂರು ಕುಪ್ಪಗೌಡ**..........................................................30

8. ಧರ್ಮ ಹೆಚ್ಚೋ ಪುಣ್ಯ ಹೆಚ್ಚೋ ?

- **ಶ್ರೀ ಚೇಪ ತೊಳಶು ಗೌಡ ಅಘನಾಶಿನಿ** ........................................ 32

9. ದಾನ ಅಂದರೇನು? ಧರ್ಮ ಅಂದರೇನು?

- **ದಿ. ಗಣಪಿ ಶಂಕರಗೌಡ,** ಶಿರಗುಂಜಿ, ಕುಮಟಾ ತಾಲೂಕು.................... 33

10. ದೀಪದ ಗುಡ್ಡ ದೇವರು

- **ಕರಿಯಮ್ಮ, ರಾಮಕೃಷ್ಣ ಗೌಡ,** ಕಲ್ಕೋಡು, ಹೆಗಡೆ........................... 39

11. ಧೀರ, ಜಾಣ, ರಾಜಕುಮಾರಿ

- **ಸಣ ಕೂಸ ಗೌಡ,** ಕರ್ಕಿ ..........................................................40

12. ಮದುವಣಗಿತ್ತಿ

- **ದಿ. ರಾಮಕೃಷ್ಣ ಮಾರು ಗೌಡ,** ಕಲ್ಕೋಡು, ಹೆಗಡೆ ಊರು.................... 45

13. ಮಾತಿಗೆ ತಪ್ಪಿದ ನರಿ

- **ದೇವು ನಾಗ ಗುನಗ** (ಗೌಡ)........................................................ 47

14. ಯಮನ ಬೆಳ್ಳಿಯ ತೊಟ್ಟಿಲು

- **ಜಂಗ (ಗಣಪು) ನಾಗ ಗೌಡ**, ಉಪ್ಪಿನ ಪಟ್ಟಣ..................................49

15. ರಕ್ಕಸನ ಮೇಲಿನ ಬೊಕ್ಕಸ

- **ದಿ. ಪುಟ್ಟು ನಾಗು ಗೌಡ**, ದುಗ್ಗೂರು, ತಾ. ಹೊನ್ನಾವರ ........................54

16. ಶಿದ್ದಕ್ಕಿ ಬಟ್ಟನ ಮಗ

- **ನಾಗು ಗೌಡ, ದುಗ್ಗೂರು**, ತಾ. ಹೊನ್ನಾವರ.................................... 59

17. ಸೂಳೆ ಸಂದದ ಹೆಣ್ಣು

-**ದಿ. ರಾಮಕೃಷ್ಣ ಮಾರು ಗೌಡ**, ಕಲ್ಕೋಡು, ಹೆಗಡೆ ಊರು......................61

18. ಹತ್ತುಂಡೆ -ಬಿಟ್ಟುಂಡೆ

- **ದಿ. ಪುಟ್ಟು ನಾಗು ಗೌಡ,** ದುಗ್ಗೂರು............................................. 65

19. ಹುಲಿ ಗಲಿಬಿಲಿ

- **ಬುದ್ದು ಶೇ ಶುಗೌಡ**, ಬಿಣಗಾ ತಾಲೂಕು, ಕಾರವಾರ. ......................... 66

20. ಹೊಸಬಂಟ

- **ದಿ. ಪುಟ್ಟು ನಾಗು ಗೌಡ**, ದುಗ್ಗೂರು.............................................69

# ಅಬ್ಡಾ ಮಂಜೂರಿ

ಅಬ್ಡಾ ಮಂಜೂರಿ ರಾಜನ ಮಗಳು. ನಗ್ನಕೆ ನೆರದಾಳೆ. "ಹೀಗೇ ನಗ್ನಾಗುದಿಲ್ಲ. ಮೂರ್ ಪಣ, ಮೂರ್ ಮಾತಿಗೆ ಯಾರು ಜವಾಬ ಕೊಟ್ಟಿರೊ ಅವರಿಗೆ ನಗ್ನಾಗತ್ತೇನೆ" ಹೇಳಿ ಪಣ, ರಾಜರಾಜರೆಲ್ಲಾ ಬಂದರೂ ಮೂರಕ್ಕೆ ಜವಾಬ ಕೊಡೂಕಾತಿದೋ? ಒಂದಕ್ಕೂ ಆಗೂದಿಲ್ಲ. ಒಬ್ಬರ ಕೂಡು ಆಗದೆ ಸೋತು ಬಿದ್ದರು.

ಗುರುಗಳೇ ಒಂದಿವ್ಸ ಹೋದರು. ಅವರ ಕೂಡೂ ಆಗಲಿಲ್ಲ. ಅವರ ಶಿಶ್ಯ ಒಂದಿವಶ ಹೋಗಿದ್ದ. ಅವನಿಗೆ ಹೇಳಿತು, ಹೇಳಿದ ಕೊಡಲೆ, "ಒಂದು ತಿಂಗಳ ಮೇಲೆ ಹೇಳ್ವೆ" ಎಂದ. ಅದಕ್ಕೆ, "ಇವ್ ನಗ್ನಕೆ ಆಗತಿತ್ತು" ಅಂತು.

ನೆಟ್ಟಗೆ ಬಂದ. ಊರಲ್ಲಿ ಶೋಪ ಕಳ್ಳ ಇದ್ದ. ಕಳ್ಳನ ಮನೆಗೆ ಬಂದ. ಅವ ಶಾಪ ಮುದುಕ. ಅವ ಕಳ್ಳತನ ಯೇಲ್ಲಾ ಬಿಟ್ಟಿ ಸುರಂಗದ ಹಾರೆ, ಕನ್ನಕತ್ರದ ಜೋಡು, ಇಕ್ಕ, ಪಿಕಾಸಿ, ಹಾರೆ, ಯೆಲ್ಲ ಬಾವಿಲ್ ಹೊತಾಕ್ ಬಿಟ್ಟ. 'ನನಗೆ ಕಳ್ಳತನ ಕಲ್ಸಿ ಕೊಡಬೇಕು' ಅಂದ. ಶಿಶ್ಯ, 'ಹತ್ಯಾರ ಎಲ್ಲಾ ಬಾವೀಲೀತು. ತೆಗೆತಿ, ಕಲಿಸ್ಸಿ ಕೊಡುವೆ' ಎಂದ; "ಕಲಿಸಿದರೆ ಕಿರಿಕರ್ಮ ನಂದ ಮಾಡ್ಯೋ" ಅಂದ. "ತಾ ಮಾಡತಿ" ಅಂದ. ಬಾವಿ ಮುಳಕಿದ ಶಿಶ್ಯ. ಆಯುದನ ತಂದ.

"ಈಗ್ ಕಳೂಕ್ ಹೋಪೇಕು. ಯಾರ ಮನೆ?" "ಅಬ್ಡಾ ಮಂಜೂರಿ ಮನೆಗೇ ಹೋಗಬೇಕು" ಅಂದ ಶೋಪ. ಅಪ್ಪನ ಹೆಸರ ಏನಾದರೂ ಹಾಕ್ಕಳಬೇಕು.

ಅಪ್ಪ ಪಲ್ಲಂಗದ ಮೇನೆ ಮನಗೂದು. ಅವನ ಕಯ್ಯಲ್ಲಿ ತಲವಾರ ಅದೆ. ಅಟ್ಟಟ್ ಹೊತ್ತೆ ನಿದ್ರೆಗಣ್ಣಲ್ಲಿ ತಲವಾರ ತಿರಗಿಸುವದು. ಒಳಹೊಕ್ತ. ಎರಡೂ ಜನ ಹೊಕ್ಕಿದರು. ನಿದ್ರೆಗಣ್ಣಲ್ಲಿ ತಲವಾರ ತಿರುಗಿಸಿಬಿಟ್ಟ. ಕಣ್ಣು ಕಾಣದ ಮುದ್ಕ ನಿಂತಲೆ ಉಳಿದ. ಶಿಶ್ಯ ತಲವಾರ ಬರವಾಗ ಹಣಕಿದ. ತಲವಾರ ಮುದ್ಕನ ರೊಂಡ ಹಾರಿಸಿತು. "ಒಂದೆ ಕಲ್ ಹಳಶಿದ್ದು" ಅಂದ. ತಲೆ ಹೆಕ್ಕಂಡ್ ನೆಡದ ಬಿಟ್ಟ ಹುಡುಗ– ಮುಂಡ ಅಲ್ಲೇ ಬಿತ್ತು. ದೊಡ್ಡ ಗೌಜಿ ಬಿತ್ತು. ಯಾರಂಬೂದು ಪತ್ತಿಲ್ಲ. ಮುದ್ಕನ ತಕಂಡ್ ಹೋಗಿ ರಾಜನೇ ಸುಟ್ಟ.

ಹ್ಯಾಗೆ ಮಾಡಬೇಕು? ರಾಜ ಕಳ್ಳನ ಹಿಡುಸುವಂಥ ಪೋಲ್ಲಿಸರ ಬಿಟ್ಟ. ಮಸಣ ಕಾಯೂಕ್ ಹೋದ್ರು. ತಲೆ ಹಾಕಿಕ್ ಹೋಪೇಕ್ ಹೇಳಿ, ಅವ ಶಿಮಣಿ ಎಣ್ಣೆ ಡಬ್ಬದಲ್ಲಿ ಇಕ್ಕಂಡಿ ಹೊತ್ಕಂಡ್ ಮಶಣದ ಗುಂಡಿಗೆ ಬಂದ. "ಯಾರ್ ನೀನು?" ಪುಲಿಸರು ಹಿಡೂಕ್ ಬಂದ್ರು. "ನಾನು ಅಬ್ಡಾ ಮಂಜೂರಿ ಮನೆಗೆ ಶಿಮಣಿ ಎಣ್ಣೆ ತಕಂಡ್ ಹೋಗ್ತಿ. ಡಬ್ಯೇ ಬೇಡ" ಅಂದಿ ಶಿಟ್ಟಿನಿಂದ ಹೊತಾಕ್ ಬಿಟ್ಟ. ಅದು ಸುಟ್ ಹೋಯ್ತು.

ಪುಲ್ಲಿಸರು ಬಂದರು ಬೆಳ್ಗಾಗ. "ಯಾರು ಬರಲಿಲ್ಲವೇನು?" "ನಿಮ್ಮನೆಗೆ ಒಬ್ಬ ಶಿಮಣಿ ಯೆಣ್ಣಿ ಡಬ್ಬಿ ಹೊತ್ಕ ಬಂದಿದ್ದ."

"ಅವನೇ ಕಳ್ಳ. ಯಾಕೆ ಬಿಟ್ರಿ?" ಹೇಳಿ ರಾಜ ದೊಡ್ಡ ಇದ್ ಮಾಡಿ ಬಿಟ್ಯ. "ಅವ ಬೂದ್ಯ ಕೈ ಹಾಕಿ (ತೆಗೂಕ್) ಬರವ. ನಾನೇ ಹೋಗ್ತೇನೆ" ಅಂದ ಅಪ್ಪ ಅರಸ. ಅವ ಹೋದ ಕೂಡ್ಲೆ, ಇವ ಒಳಗೆ ಹೊಕ್ಕಿ ಶಿನ್ನ ಬಣ್ಣ ಉಟ್ಕಂಡ್ ಅಬ್ದಾ ಮಂಜೂರಿ ತಾಯಾಗ್ [ತಾಯ ವೇಶದಲ್ಲಿ] ಹೋದ. "ಮಶಣಕ್ಕೆ ಒಬ್ಬರು ಬಂದೀರಿ ಹೆದರಿಕೆಯಾಗಿ ಹೋಯ್ತು". ಹೇಳ್ತ, "ತಡೆ. ಕಳ್ಳ ಬಂದ್ಯ ಸುಮ್ನಿರು" ದೊಡ್ಡಕ್ ಕೂಗ್ದ. ಕಾಜುಮಣಿ ಹರಿದು ಒಗೆದ ಬಿಟ್ಟ. ಒಗೆದ ಕೂಡ್ಲೆ, "ಎಲ್ಲ ಬರೆಕಂಡ್ ಹೋಗು" ಅಂದ. ಕಾಜುಮಣಿ ಬೂದಿಯೆಲ್ಲಾ ಬರೇಕಂಡ್ ಕೊಟ್ಟ ಹೋದ. ಮನೆಗೆ ಬಂದ ನೋಡಿದ ರಾಜ. ಯಾರು ಇಲ್ಲ... ಚೆನ್ನವಿಲ್ಲ, ಬಣ್ಣವಿಲ್ಲ. "ಅಂತ್ಯ ಕಯ್ಯ್ಯಲೆ ಕೊಟ್ನಲ್ಲ" ಅಂದ.

ಪರ್ದಾನಿ, "ನಾ ಇಂದೇ ಹೋಗ್ತಿ. ಅವನ ಹಿಡುಕೆ" ಅಂದ. ಅವ ಅಜ್ಜಿ ಮುದ್ಕಿ ಮನೇಲೀವ. ಅಜ್ಜಿ ಮುದ್ಕಿ ಹೇಳ್ತು, "ಇಂದು ಇವ (ಪರ್ದಾನಿ) ಹೋಗ್ತೀನ್ಕಂಡ" ಹೇಳಿ– ಶಮದರ ದಂಡಿ ಮೇನೆ ಮಡಿವಾಳರವನಾಗಿ ನಿಂತ್ಕಂಡ್ಯ. ವಗೇತ ಮಡಿವಾಳವನಾಗಿ ನಿಂದ್ರೆ ಪರದಾನಿ, "ಯಾರು ನೀನು ? ರಾತ್ರಿಗೆ ಒಗೆವವ ನೀನಾರು?" "ಕಳ್ಳರ ವಶ್ತ್ರ ವಗೆದರೆ ರೂಪಾಯಿ ಕೊಡ್ತಿರು" ಅಂದ. 'ಬರೂರೂ ಕಳ್ರೂ? ಬತ್ತಿರು' ಅಂದ.

"ಯೆಯ್ಡ್ ಜನ ಇದ್ರೆ ಅವ್ರೇನು ಬರವಾಂಗಿಲ್ಲ. ನೀವು ಒಬ್ಬರೇ ಒಗೇತ ಉಳೀರಿ, ನಾನು ಹೆರಗೆ ಕದ್ದ ಬೀಳತೇನೆ (ಮರೆಯಾಗಿರುತ್ತೇನೆ)' ಅಂದ.

ಪರದಾನಿ ಮಡಿ ಒಗೆತುಳಿದ. ಇವ ಅಬ್ದಾ ಮಂಜೂರಿ ಮನೆಗೆ ಬಂದ. "ಕಳ್ಳನ ನಾ ಕಾಣೀವೆ. ಶಮುದ್ರ ದಂಡೆ ಮೇನೆ ಒಗೀತೇ ಈವ ಅವನೇ ಕಳ್ಳ" ಅಂದ.

ಪುಲ್ಲಿಸರು ಹೋಗಿ ಪರದಾನಿನ್ ಜೈಲಲ್ಲಿ ಹಾಕಿಬಿಟ್ಟರು. ಬೆಳಗಾಯ್ತು. ಪರದಾನಿಲ್ಲ ಹುಡುಕೂಕ್ ಬಿದ್ದರು. ಮರ್ಯಾದೆ. ಮಾತಾಡುದಿಲ್ಲ (ಪರದಾನಿ). "ಆಗೆ ಕಳ್ಳನ ಹಿಡೂಕಾಗ ಸಾದಾರಣಕೆ" ಅಂದ.

ಇಂದೆ ಪೌಜುದಾರ ತಾ ಹೋಗ್ತೇನೆ ಅಂದ. ಮುದ್ಕಿ, "ಪೌಜುದಾರ ಹೋಗ್ತನಕಂಡ ಮಗನೆ" ಅಂತು. ಇವ ನಾಕು ಎಲೆ ಬತ್ತಿ ಕಟ್ಟಿ, ಸಣ್ಣ ಲೇಂಪ್ ಹಚ್ಚಕಂಡಿ ಅಂಗಡಿ ಯಾಪಾರ ಮಾಡ್ತ ವಳ್ದ. ಪೌಜುದಾರ, "ಯಾರು ನೀನು?" ಕೇಳಿದ. ಇವ, "ನಾನು..." "ಎಲ್ಲ ಅಂಗಡಿ ಬಂದ್ ಮಾಡಿ ಹೋದರು. ಯಾಕೆ ತೆಕ್ಕಂಡಿದ್ದೆ?" "ಕಳ್ಳರು ಯಾಪಾರ ಮಾಡತರು. ಕೂತ್ಕಂಡೆ" ಅಂದ. "ಏನು ಮಾಡಬೇಕು, ಯೆಯಡ್ ಜನ ಕೂತ್ಕಂಡ್ರೆ ಬತ್ತಿರೋ ಹೇಗೆ?" "ನೀನು ದೇವದಾರಿ ಪೆಟ್ಗೇಲ್ ಹೊಕ್ಕ" ಅಂದ. "ಆಗೊದು" ಅಂದ. ದೇವದಾರಿ ಪೆಟ್ಗೇಲ್ ಪೌಜುದಾರ ಹೊಕ್ಕಂಬಿಟ್ಟ. ಇವ ಮೇನೆ ಮುಚ್ಲ ಹಾಕಿ ಹಳ್ಳದಲ್ಲಿ ಹಾಕಿದ. ಪೌಜುದಾರನೇ ಇಲ್ಲ! ನಾಶಿಕೆಯಲ್ಲ. ಆಗ ಮಡಿ ಶಳೂಕ್ ಹೋದೂರು ಪೆಟ್ಗಿ ತೆಗೆದರು. ಪೌಜುದಾರ, "ಇನ್ನು ಹಿಡೂಕಾಗ್ವಾಗಿಲ್ಲ" ಹೇಳ್ದ.

ಮರುದಿನ ಅರಸರ ಸೂಳೆ ಹೋಯ್ತು. ಅದ್ಕೆ ಅಲ್ಲಿ ಬರೂದ ಕಂಡ್ ಕಂಡಿ ಮಲ್ಗೆ ಹೂಗಿನ ಪೊಟ್ಲೆ ಮಾಡಿದ. ಅತ್ಲಾಕಿಂದ ಹೂಗ್ ಇರ್ಕ್ದ... ಕೊಡಾ ಇರ್ಕ್ದ... "ಯಲ್ ಹೋತಿ?" "ಕಳ್ಳನ ಹಿಡೂಕ್ ಹೋತಿ." ಹಬ್ಬರಿಗೆ ಹೂ ತೋಟಕೆ ಬಂದ. "ಹಾಗೇ... ನನ್ಗೆ ಬಯಲಕಡೆ ಹಾಗೆ" ಅಂದ. "ನನ್ನ ತಲೆ ಮೇಲೆ ಮಾಡ್ ಬಿಡು" ಅಂತು. ಹಾಗೇ ಮಾಡಿದ. ಹೊರಕಡೆ ತೊಲೆ ಬೇಕಂದ್, ತಕಂಡ್ ಹೋಗಿ ಹಗ್ಗ ಹಾಕಿ ಅಟ್ಟಕಾಯಿ ನೊರೆಯಿಂದ ತಿಕ್ಕಿ ಸೊಕ್ಕ ಮಾಡಿ ಬಂದ.

ಅಬ್ದಾ ಮಂಜೂರಿ ಮನೆಗೆ ಹೋಗಿ ಶಿನ್ನಬಣ್ಣ ವಟ್ಟೂ ಕೊಟ್ಟ ಮೂರ್ ಮಾತಿಗೂ ಜವಾಬು ಕೊಟ್ಟು, ಕಳ್ಳತನದ್ದು ಮೂರನೆ ಮಾತು. ಬಂದ ಅಲ್ಲೇ ನಗ್ನಾದ.

- **ಕೆಲವು ಪದಗಳ ವಿವರಣೆ**

| | |
|---|---|
| ಪಣ =ಶರ್ತ | ಶಾಪ್ = ಪೂರ್ತಿ |
| ಯೆಗೆಲ್ಲ = ಈಗ | ಕಿರಿಕರ್ಮ = ಕ್ರಿಯಾಕರ್ಮ |
| ಮಶಣ = ಸ್ಮಶಾನ | ಕಾಜುಮಣಿ = ಕರಿಮಣಿ |
| ಶಮದರ = ಸಮುದ್ರ | ಕಾಣೀನೆ = ನೋಡೀನೆ |

▪ ಹೇಳಿದವರು : **ದಿ. ದೇವು ನಾಗು ಗುನಗ (ಗೌಡ),** ಅಡಲೂರು, ಅಂಕೋಲಾ ತಾಲೂಕು.

❖

# ಅನುಗ್ರಹ

ವಂದು ಅರಾಣ್ದಲ್ಲಿ ಮಾಮಾದೊಡ್ ಕಡಚಗ್ಯ (ಹೆಬ್ಬಾವು) ಈತು. ನರಲೋಕದ ಜನ್ರು ಹೋತ್ರು. ಅಲ್ಲಿ ಅಡವಿಗ ಹೋದ ನಂತ್ರವ ಕಡಚಗ ಯೇನ್ ಮಾಡ್ತು? ವಬ್ನೇ ಹೋದವಾಗಿತ್ತು. ಅವ್ನ ನುಂಗ್ ಬಿಟ್ತು. ನಂತ್ರವ, ಅವ ಬಾಯಿಗೆ ಶೂರಿ ಹಾಕ್ದ. ಶೂರಿ ಹಾಕ್ದ ಹೊಡ್ತಕೆ, ಅದು ಶಿಗೀತೇ ಬಂತು. ನಂತ್ರವ, ಅದು ಬಾಗಾಗ್ ಬಿತ್ತು.

ಮುಂದ್ ಕಲ್ದ್ ಶತ್ ಹೋದ. ನಂತ್ರವ, ಅವ್ನ್ ಹಿಂಡ್ತಿ, ಗಂಡನ ಪಿರ್ತಿ ಮೇನೆ, ಗಂಡ್ನ ನೋಡಬೇಕಾಯ್ತು ಹೇಳಿ ಬಂತು. ಬಂದ್ ನಂತ್ರ ಯೇನಾಯ್ತವ? "ಹರಹರಾ, ನನ್ ಪುರುಶರೇ ಹೋದ್ರು. ನಾನ್ಯೆಂತಕ್ಕೆ ಇಪ್ಪುದು?" ಹೇಳಿ ಮರ್ಗ್ತು. "ನನ್ ಜಲ್ಮ ಹೊರೆವೋರ್ ಯಾರಪ?" ಹೇಳಿ ಮರ್ಗ್ತು. "ನಾನೂ ನನ್ನ ಗಂಡ ಕರ್ಕ ಹೋದಲ್ಲೇ ಹೋಗಬೇಕು. ಗಂಡ್ ಯೆಲ್ ಶತ್ತಿದರೇ, ಅಲ್ಲಿ ಜೀವ ಕಲ್ಕಂಬೇಕು" ಹೇಳಿ ಮರ್ಗ್ ಬಿಟ್ತು.

ಆವಾಗೇ, ವಂದ್ ಕಯಿಡಿ, ಹೀಗೇ ಮಾದೊಡ್ ಗುಡ್ಡ, ಮೇನಿದ್ದವ ಗುಡ್ಡೆ ಕೆಲ್ಗೆ ನೀರು ಕುಡಿಲಿಕ್ಕೆ ಹೇಳ್ ಬಂತು. ಬರ್ವರೆಗೆ ಇದು ಮರ್ಗ್ತೇ ವಲಿತು.

"ನನ್ಗೆ ವಂದು ಯೆಲೆ ಶಾಂತಿ ಸಿಕ್ತು" ಹೇಳಿ, "ಕಯ್ದಿ ತಿಂದ್ ತೇಗ್ ಬಿಡ್ಲಿ." ಹೇಳಿ, ಗುಡ್ಡೆ ಕೆಲ್ಗಿದ್ ಆದ್ರ ಬುಡ್ಕೇ ಬಂತು. ಬರ್ವರೆಗೆ, ಇದು ಮರ್ಗ್ತೇ ವಲಿತ್ತು. ಬಂದದ್ದು ಅದ್ ಮರ್ಗು ವ್ಯಾಲೆದಲ್ಲಿ, ಆದ್ರ ರಗ್ತಾ ಮೋರೇ ಬಿಡ್ತು ಕಯಿಡಿ. ಆಗ ಗಂಡ-ಹಿಣತಿ ಪರಾಣ ಕಲ್ದ್ ಹೋಯ್ತು. ಗಂಡ ಹಾವ್ ನುಂಗಿ ಜೀಮ್ ಪಡ್ಜಾಗಿ ಕಲ್ದ್ ಹೋದ. ಕಯ್ದಿ ತಿಂದಿ ಇದ್ನೂ ಹೋಯ್ತು.

ಹುಟ್ದ್ ಹುಡ್ಗರು, 'ತಾಯ್ತಂದೆ ಬರ್ಲಿಲ್ಲಾ' ಹೇಳಿ, ಅವರು ಗರ್‌ಶಾಟಕೆ ಬಿದ್ದರು. ಅವರೂ ಗರ್‌ಶಾಟಕೆ ಬಿದ್ದಿ, ತಾಯ್ ತಂದೆ ನೆತ್ರ ಕೂಡಿದ್ದಲ್ ವಬ್ಬ ಹುಡ್ಗ ಹೋದ. ಹೋಗಿ ಆ ದಾರಿಲ್ಲೇ ಹೋದ. ತಾಯಿ-ತಂದೆ ರಗ್ತ ನೋಡ್ದ. ನೋಡಿ, "ಹರಹರಾ... ನಾವು ಹುಟ್ದರ್ ವಂದ್ ನಗ್ನಾಲಿಲ್ಲ. ತಾಯಿ ತಂದೆ ಕಲ್ಕಂಡ್ರು. ನಮ್ ಗತಿ ಯೇನಪಾ?" ಅಂತ ಹೇಳ್ ಮರ್ಗದ. ಹುತ್ತಿನಲ್ಲಿದ್ದ ಯಪ್ಪತ್ತೇಳ್ ಹೆಡೆ ಶರ್ಪಾನೂ ಬಂತು. ಬಂದಿ ಅವನ ಮೂರಂಬ್ ಶುತ್ ಗರಗರಗರನೆ ಶುತ್ರಿರಗವಡುದು. ಶುತ್ ತಿರಗಿ ಅವನ ಬುಡಕೆ ನಿಲ್ವದು. ಬುಡಕೆ ನಿಲ್ಲುವರಿಗೆ ಕಯ್ಯಾ ಮುಗದಿ– ಗಡಗಡನೆ ನೆಡ್ಗಿದಾನೆ ಅಮ.

ಗಡಗಡನೆ ನೆಡಗವಾಗೆ, "ಯೇನು ಶರ್ಪು? ತಾಯ್ ತಂದೆ ಕಲ್ಕಂಡರು. ನನ್ಗೆ ಈ ಜೀಮ ಬೇಡಾ." ಅಂಬೂತ್ನವ ಹಡೆಯೆತ್ತಿ ಹೊಡ್ದ್ ಬಿಟ್ತು. ಹೊಡೂರೊಳಗಾಗಿ ಹುಡುಗನ್ ಪರಾಣ ಕಲದಿತ್ತು. ಪರಾಣ ಕಲುವರೆಗೆ ಮನೆವಳಗೆ ತಂಗಿ ಹುಡ್ಗರು ಯೆಯಡಾಲು ಉಂಟು. ಹೆಣ್ಣ ಹುಡಗಿರು ಮರುಗುತೆ ವಲಿದರು.

"ಅಣ್ಣ ಕಲಕಂಡ್ ಹೋದ. ನಾಮು ಯಾಕೆ ವಲೀಬೇಕು?" ಹೇಳಿ, ಮರಗುತೆ ವಲಿದರು. "ನಾಮು ಅವರಿದ್ದಲ್ಲಿ ಹೋಗಿ ಬರವ ಅಕ್ಕಾ" ಹೇಳಿದರು. ಅವಾಗೆ, "ಈ ಮನೆ ಯಾರಿಗೆ ಬೇಕು?" ಹೇಳಿ ಮರಗಿದರು. "ನಮ್ಮ ಪರಾಣ ಹೇಗೆ ಕಲದಿ ಹೋಗುವದು?" ಅಂದರು. "ಶಿಮನ ರಾಜಿಗೆ ಹೋಗುವ ನಾಮು" ಅಂದರು. "ಅಕ್ಕಾ, ಅವರು ಹುಲಿಕರಡಿ ಪಾಲು ಆದರು. ನಾಮು ಶಿಮನ ರಾಜಿಕೆ ಕೂಡಿ ಹೋಗುವ" ಅಂದರು. "ನಮಗೆ ಈ ಮನೆಯ ಆಯುತಿ ಇಲ್ಲ" ಹೇಳಿ ಉಟ್ಟ ಉಡಗೀನೂ ಬಿಚ್ಚಿ ವಗದರು. ನಡದಿ, ಶಿಮನ ರಾಜಿಕೆ ಹೋಗುವರು.

"ಅಕ್ಕಾ, ನೀನ್ ಹೋದಲ್ಲೇ ನಾನ್ ಬರತೆ." ಅಕ್ಕ-ತಂಗಿ ಇಬರಾಲು ಜೋಡಿಗೆ ಹೋಗುವಂತರಾದರು. ಹೋಗುವಾಗ, "ಹರಹರ" ನಂದು ಮರುಗರು. ಆರಾಣದಲ್ಲಿ ಹೋಗುವಾಗೆ ಪಾರ್ವತ-ಪರಮೇಶ್ವರರು ವಲಿದರು. "ಯಲಾ ಹುಡಗಿರ್ಯಾ ನಿಮಗೆ ಯಂತ ಕೆಟ್ಟ ಕಾಲ ಬಂತಿತು?" "ತಾಯ್ತಂದೆ ಕಲ್ಕಂಡ್ರು, ಹುಟ್ಟಿದ ಅಣ್ಣನೂ ಕಲ್ಕಂಡ. ನಾಮು ಶಿವನ ರಾಜಗೆ ಶಮನಿ ಹೋಗುತ" ಅಂದರು. "ಯೇ ಹುಡುಗಿರ್ಯಾ, ನೀಮು ಪಡೆದ ಪರಮಾತ್ಮನು ನಾನು. ನಾನೇ ನಿಮಗಿಲ್ಲಿ ಜಲ್ಮ ಕೊಟ್ಟ ದೇವರು. ಶರ್ಪ-ಹುಲಿ-

ಕಯಡಿ ತಿಂದಿ ಹೋಯಿತು. ಅಣ್ಣ ತಂದೆ ತಾಯೀನೂ ಕಲ್ಡು ಹೋದರು. ನಾನು ನಿಮ್ಮ ಶಿಮನ, ರಾಜಿಗೆ ಕಲ್ಯುದಿಲ್ಲ. ಇಲ್ಲಿ ವಲಿಯಬೇಕು. ನಾನು ಶಿಮನು. ಬೇಕಾದ ಭಾಗ್ಯವನ್ನು ಕೊಡುತೆ" ಅಂದರು. "ಶ್ವಾಮಿಯವರೆ, ಭಾಗ್ಯ ಕೊಟ್ಟರೆ ಅಣ್ಣನ ಕೊರತೆ ಆಗುತ್ತದ್ಯೊ" ಅಂದರು.

"ಕೊರತ್ಯನು ಬಿಡಬೇಕು. ಬೇಕುವಾದ ಮನ್ಯನು ಕಟ್ಟಿ ಕೊಡುತೆ" ಅಂದರು. ಆಗೆ ಅವರ ಕಾಲಿಗೆ ನಮೋನಮೋ ಮಾಡಿದ್ದರು. ಬೆನ್ನಿಗೆ ಕರದರು. ವಂದು ದೊಡ್ಡ ಅಡವಿ ವಳಗೆ, ವಂದ ಭೂಮಿಯಿದ್ದಲ್ಲಿ ಕರೆದರು. ಭೂಮಿ ವಳಗೆ ಕುಲಶೀ ಜಪವನ್ನು ನೀವು ಮಾಡಬೇಕಂದರು.

ಜಪವನ್ನು ಮಾಡಿ ಕುಲಿಶವಲಗೆ, "ಹನ್ನೈಡಂಕಣ ಮನೆ ವಂದು ಆಗಲಿ" ಅಂದು ಹೇಳಿದರು. "ಮನೆವಳಗೆ ನಮ್ಮ ಹೊಟ್ಟೆಗೆ ಆಯಾರವೇನು?" ಅಂದರು. "ಆಯಾರನ್ನು ಕೊಡುಕೆ ಬೇಕುವಾದ ಭೂಮಿ ಆಗಲಿ" ಅಂದರು. ಪಾರ್ವತಿ ಪರಮೇಶ್ವರರು ಬೇಕಾದ ಅನುಕೂಲವನ್ನು ಮಾಡಿಕೊಟ್ಟರು. "ಭಾಗ್ಯವನ್ನು ಹುಡಿಗಿರಿಗೆ ಆಗಲಿ" ಅಂತ ಹೇಳಿದರು. ಅವರಿಗೆ ಆನಂದವಾಯಿತು.

ಕರೆವ ಯೆಮ್ಮೆ ನೂರು, ಕರೆದಿದ ಯೆಮ್ಮೆ ನೂರು, ಹಾಲು-ಮಜ್ಜಿಗೆ ಶಾಕಟ್ವಾತೀದು. "ಅನ್ನ-ತುಪ್ಪವ ಉಣ್ಣುತ ನೀಮೂ ಸುಖದಲ್ಲಿ ವಲಿಯಬೇಕು" ಹೇಳಿದರು. ಆನಂದಿಂದ ವಲಿದರು.

ಮುಂದೆ "ಕುಲಕಿಬ್ಬರು ಹುಡಗೀರು ನೀಮು ಶಂತಾನವನ್ನು ಕೊಟ್ಟೇ ತೀರುತೆ" ಹೇಳುವಂತವರಾದರು.

- **ಕೆಲವು ಪದಗಳ ವಿವರಣೆ**

| | |
|---|---|
| ಶೂರಿ | = ಚೂರಿ |
| ಜೇಮ | = ಜೀವ |
| ಕಲ್ಕಂಬೇಕು | = (ಜೀವ) ತೆಗೆದುಕೊಳ್ಳಬೇಕು |
| ಗರ್ ಶಾಟಕೆ | = ಹುಡುಕಾಡಲು |
| ರಗವಡುದು | = (ನೆಲಕ್ಕೆ ಹಾಕಿ/ಕೆಳಗೆ ಹಾಕಿ) ತಿಕ್ಕುವುದು |
| ಶಿಮ | = ಶಿವ |
| ಆಯತಿ | = ಸಾರಾವಳಿ |
| ನಂದು | = ಅಂದು |
| ಶಮನಿ | = ಶರಣು |
| ಶಾಕಟ್ಟು | = ಸಾಕಷ್ಟು |
| ಕರ್ಕ | = ಕರೆದುಕೊಂಡು |
| ಯೆಲೆ | = ಎಳೆ |
| ಕಲ್ದ್ | = ಕಳೆದು |
| ಮರ್ಗದ | = ಅತ್ತ, ಅಳು |
| ಪರಾಣ | = ಪ್ರಾಣ |
| ರಾಜಿ | = ರಾಜ್ಯ |
| ಇಬರಾಲು | = ಇಬ್ಬರು |
| ಮರುಗರು | = ಅತ್ತರು |
| ಅಯಾರ | = ಆಹಾರ |

▪ ಹೇಳಿದವರು : **ದಿ. ಪುಟ್ಟು ನಾಗು ಗೌಡ.** ದುಗ್ಗೂರು, ಹೊನ್ನಾವರ ತಾಲೂಕು.

# ಉದಾರ ರಾಜ

ದೊಡ್ಡೂರಲ್ ವಂದ ರಾಜ ಇದ್ರೆ ಅವನು ಊರಿಗೆ ದನ್ನಿ. ಇದ್ರೆ ಯಾವದರಲ್ಲೂ ಅವ್ನಿಗೆ ತೊಂದ್ರೆಯಿಲ್ಲ. ರಾಜ ಯೇನ್ ಮಾಡ್ದ? ಜನರು ಅಲ್ಲಿ ವಾಡೆ ಮೇನಿದ್ದವ್ ದೊಡ್ ರಾಜ ಅಂದ್ ಹೇಳಿ, ಬಡತನದೋರು ರಾಜ್ನ ಮನೆಗ್ ಹೋತಿರು. ಹೋಗಿ ಯೆಲ್ಲೋರು ಹೋಗಿ ಅಕ್ಕಿ ಕೊಡಬೇಕು. ಅಕ್ಕಿ ಕೊಡಂತ್ರು. ಇಲ್ಲಾರೆ ಬತ್ತ ಕೊಡಬೇಕು. ಬತ್ತ ದೊಡ್ ಗುಡ್ ಕೊಡವ್ರೋರ್ ಕೊಡುತ್ರು.ಯೇನ್ ಬೇಡ್ರೂ ಇಲ್ಲಂದ್ ಹೇಳುದಿಲ್ಲ ರಾಜ. ಆಗೆ ಮತ್ತೆ ದುಡ್ ಕೊಡವ್ರೋರಿಗೆ ದುಡ್ ಕೊಟ್ಟ. 'ನಾಳೆ ನಾಡ್ದಿ ಕೊಡ್ತೆ' ಅಂತಿರು. ತಿರುಗ್ ಕೊಡ್ವೋರು ಯಾರೂ ಇಲ್ಲ. ರಾಜಗೆ 'ಮತ್ತೆ ಕೈಗೂಡ್ದಾಗ ಕೊಡ್ತೆ' ಅಂತಿರು. ತಾಶಿಗೆ ಬಿಟ್ಟ ತಾಶಿಗೆ ಮತ್ತು ಅಲ್ಲೇ ಹೋಗ್ರು. ತಿರುಗಿ ಕೊಟ್ಟು ಮತ್ ದುಡ್ ಕೇಳತ್ರು ಕೊಡತ. ಹೀಗೆ ಮಾಡಿ ಬೇಡ್‌ಬೇಡ್ದೋರಿಗೆ ಕೊಟ್ಟ. ಯೆಟ್ಟೋ ಸಾವ್ರ ರೂಪ್ಯೆ ಕೊಟ್ ಹಾಕ್ತ.

ಅವ್ನಿಗೆ ಯೆಲ್ಲಾನೂ ಶಮ. ಶ್ವರ್ಗಕೆ ಹೋದ ಅಂದೇಳಿ ಆಗ ಮಂದಿ ಶ್ವರ್ಗಕ್ಕೂ ಹೋದ್ರು. ಶ್ವರ್ಗದಲ್ ವಳ್ದ್. ಶಾಲ ತಕಂಡೋರು ರೋಗಾಗಿ ವಬಬ್ರೇ ಸತ್ರು. ಸತ್ ಹೋಗಿ ಇವ್ರೂ ಶ್ವರ್ಗಕ್ ಹೋದ್ರು. ಶ್ವರ್ಗದಲ್ಲಿ ಯಾವ್ರೋನ್ ಪಾಪ್ ಮಾಡ್ಯ, ಯಾವನ್ ಪಟೆಂಗತನ ಮಾಡ್ಯ ತಪಾಶ್ ಮಾಡತೀರು. ಕೇಳ್ದ, ತಾಶೀಗೆ ಇದ್ದದ್ದೇ ಹೇಳಬೇಕು. "ಇಂತಾ ಶಾವಕಾರಗೆ ನಾವು (ಶಾಲ) ಕೊಡೂದ್ ಈತೂ". ಆಗ್ ಶಾವಕಾರ್ ಕೇಳಿದ್ರು– "ನೀವ್ ಶಾವಕಾರನ ಶಾಲ ಯಾಕೆ ಇಟ್ಕಂಡಿರಿ?" ಅವರ್ ಹೇಳ್ತಿರು– "ನಮಗೆ ಕೊಡೂಕಾಗ್ಲಿಲ್ಲ", "ಈಗಾರೂ ಅವ್ನ ಶಾಲ ಕೊಡೂರೂ ಹೇಗೆ?"

ವಬ್ಬ ಹೇಳತ್ಯ, "ಕೊಡ್ತೆ" ಹೇಳ್ಯ. ಅವ್ನಿಗೆ ಕರೆಕರೆ ಮಾಡಿ ಶ್ವರ್ಗಕ್ ಹಾಕಿರು. ದುಡ್ಡ ಮಾಡಿ ಸಾಲ ತಿರುಗ್ ಕೊಟ್ಟ ಶೆಲೊ ಇದ್ದೋನು, ಮತ್ ಶಾಲ ತಕಂಡು ತಾನ್ ಕೊಡುದೆಲ್ಲ ಅಂತಿನು– ಅವ್ನಿಗೆ ನರ್ಕಕ್ ಹಾಕ್ರು. ಕೆಲು ಜನ ಕೊಟ್ರೆ, ಕೆಲರು ಕೊಡ್ಲಿಲ್ಲ. "ಪುಣವಂತ ರಾಜ" ಅಂದಿ ಹೇಳಿರು– ದೇವ್ರು ಪುಣ್ಯತಳಕೇ ಹಾಕ್ರು. ಚಲೋ ಮಾಡಿ ಉಳ್ಕಂಡ.

- **ಕೆಲವು ಪದಗಳ ವಿವರಣೆ**

| | | | |
|---|---|---|---|
| ದನ್ನಿ | = ಧನಿ, ಶ್ರೀಮಂತ | ವಾಡೆ | = ಅರಮನೆ |
| ಗುಡ್ | = ಗುಡ್ಡೆ | ಶಾಲ | = ಸಾಲ |
| ಶೆಲೊ | = ಒಳ್ಳೆಯವ | ಪುಣ್ಯತಳ | = ಪುಣ್ಯಮಾಡಿದವರನ್ನು ಹಾಕವಂಥ ಸ್ಥಳ, ಸ್ವರ್ಗ |

▪ ಹೇಳಿದವರು : **ದಿ. ಬುದ್ದು ಶೇರುಗೌಡ,** ಬಿಣಗಾ, ತಾ. ಕಾರವಾರ.

# ಚಮತ್ಕಾರ

"ಆನಂದ ಅಡವಿಲಿ ನಾಯಿ, ನರಿ ಕೂಗಿದರೆ ಶುಬನ" ಅರಸು ಹೆಂಡ್ತಿ ಅಂತು. ಅರಸು, "ಹಾಗಾದರೆ, ಬಹಳ ಕೆಟ್ಟದ್ದು" ಅಂದ.

"ಬೆಳಗಾ ಮುನ್ನ ಬಡಗಿರಣ್ಣ ಬರುವ. ಅವ ಶುಬನ ಅಂದಪಕ್ಷ ನನ್ನ ತಲೆ ಹೊಡು ಹುಕ್ಕುಂ ಕೊಡು. ಕೆಟ್ಟ ಅಂದ್ರೆ ನಿನ್ನ ತಲೆ ಹೊಡು ಹುಕ್ಕುಂ ನಾಕೊಡ್ತೆ!" ಅಂದ.

"ಬೆಳಗ್ಗೆ ಬಡಗಿರಣ್ಣ ಬರ್ತಾನೆ. ಶುಬನ ಅಂದ ಪಕ್ಷಕ್ಕೆ ಗಂಡನ ತಲೆ ಹೊಡು ಹುಕುಂ ಕೊಡಬೇಕು, ನಾನಿದ್ದೇನು ಬಾಳ್ವೆ? ಅವರಿದ್ದರೆ ಏನೂ ಮಾಡೂರು." ಹೇಳಿ ಅರಸು ಹೆಂಡ್ತಿ ವರಗ ಬೇಕಾದರೆ ಆಲೋಚನೆ ಮಾಡಿತು. ಅರಸೂಗೆ ನಿದ್ರೆ ಬಂತು. ಹೆಂಡ್ತಿ ಎದ್ದು ಬಡಗಿರಣ್ಣ ಮನೆಗ್ ಹೋಗಿ– "ಬಡಗಿರಣ್ಣ, ಆನಂದಡವೀಲಿ ನಾಯಿ- ನರಿ ಕೂಗಿದರೆ ಶುಬನವೋ?" ಕೇಳಿತು. "ಶುಬನ" ಅಂದ. "ನಾಳೆ ಬೆಳಿಗ್ಗೆ ಶುಬನ ಹೇಳಬೇಡ, ಕೆಟ್ಟಿದ್ದೇ ಅಂದು ಬಿಡು" ಅಂದಿತು. ಸುಮ್ಮನೆ ಬಂದು ಮನಗಿತು.

ಬೆಳಿಗ್ಗೆ ಬಡಗಿರಣ್ಣ ಬಂದ. ಮೊಕ ತೊಲುಕೆ ಅರಸು, "ಬಡಗಿರಣ್ಣ, ಆನಂದ ಅಡವಿಲಿ ನಾಯಿ-ನರಿ ಕೂಗಿದರೆ ಶುಬನವೋ?" "ಬಹಳ ಕೆಟ್ಟದ್ದು" ಅಂದ. ಅವಳ ತಲೆ ಹೊಡೆವ ಹುಕುಂ ಕೊಟ್ಟ.

ಹಲೆ ಶಿಪಾಯಿ ಕೂಡೆ, "ತಲೆ ಹೊಡೆದು ಬನ್ನಿ" ಅಂದ. ಶಿನ್ನ ಹಾಕ್ಕಂಡಿ, ಬಣ್ಣದ್ ಸಾಲೆ ಉಟ್ಕಂಡಿ, ದನ್ನೂಹ ಮುಡಿಕೊಂಡಿ ಹೋಯ್ತು. ಶಿಪಾಯರು ಅಡವಿಗೆ ಹೋಗುರಟ್ಟಕ್ಕೆ, "ನಿನಗೆಟ್ಟು ತಿಂಗಲಾಯ್ತು ?" ಕೇಳ್ದ. 'ಒಂಬತ್ತು ತಿಂಗಳದ ವಂಬತ್ತು ದಿನವಾಯ್ತು" ಅಂತು.

"ನಿನ್ನ ತಲಿ ಹೊಡೂಕೆ ಕೈ ಬರುದಿಲ್ಲ. ಇತ್ತಾಗಣ ದೇಸದಲ್ಲೆ ವಲ್ಕಬಿಡು" ಹೇಳಿಕ್ಕಿ, ಬೆಟ್ಟ ಹೊನ್ನೆಮರಕ್ಕೆ ಕಪ್ಪು ಹೊಡೆದು ಹಂಯ ಬಡ್ಕಂಡಿ, "ತಲೆ ಹೊಡೆದು ಬಂದೋ" ಹೇಳಿದರು. ಶಿಪಾಯರು ಹಂಯ ತೋರಿದರು.

ಕೆರೆ ಕೂಡೆ ಜನ್ನೆಯಾಗಿ ಬಿಟ್ಟಿತು. ಉಟ್ಟ ಶಾಲೆ ಕೆರೆಗೆ ಬಿಡುವದು, ಬಾಲೆ ಮೈಯೂ, ತನ್ನ ಮೈಯೂ ಉದ್ಕಂಡಿ ಹದಿನೈದು ದಿನ ಕಳೀತು. ಅಡವಿ ವಳಗೆ ಯಜಮಾನ ಯೇಳ ಹೆಡೆ ಮಾಶೇಕರ, ಮುರಿ ಕಂಡು ತಿಂಬದು. ಮಾಣಿ, ಅರಸು ಹಿಂಡ್ತಿ ಕಂಡು, "ನನ್ನ ಮೊಮ್ಮಗಲು; ನನ್ನ ಮೊಮ್ಮಗ" ಹೇಳಿ ಕರಕೊಂಡು ಹೋಯ್ತು; ಮನೇಲಿಟ್ಕಂಡ್ತು.

ಸಾಕ ಕಂಡಿತು. ವಂದ್ ವರ್ಸ ಸುದ್ದಿ ಬಂತು. ಮಾಣಿಗೆ ಅಲ್ಲೇ ಇಶೆಗೆ ಒಬ್ಬ ಬಡಗಿರಣ್ಣ ಇದ್ದ ಗಾಡಿತ್ತು. ಬತ್ತ ತುಂಬ್ಕಂಡಿ ಮಾರಾಟಕೆ ಹೋದ. ಏಳು ಹಡೆ ಮಾಶೇಕರ ಬತ್ತ ತಕಂಡತು. ಹಣ ಕೊಟ್ಟಿತು. ಬಣಜಿಗರಣ್ಣ ಬಂದ.

ಅರಸು ಹೆಂಡ್ತಿ ಮೊಕ ಬಹಲ ಶಪ್ಪೆಯಾಯ್ತು. "ತಂಗಿ ಮನೆಗೋಗು ಗಬನವಾಯ್ತೆ ?" ಕೇಳಿದ. ಮಾತಾಡಲಿಲ್ಲ ಅವಳು. ಬಣಜಿಗರಣ್ಣನ ಹಿಂದೆ ಕರೆ ಬಿಟ್ಟು. "ಎಲಾ ಬಣಜಿಗರಣ್ಣ ಈ ಹುಡುಗಿ, ಮಾಣಿ ಕರತಂದ ಹೋಗಿ ಅರಸನ ಮನೆಗೆ ಬಿಡಬೇಕು ಇಲ್ಲ, ಇಲ್ಲಿ ಬಂದ್ರೆ, ಬಾಯಲ್ಲಿ ಹಾಕಿ ಬಿಡುವೆ" "ಹೂಂ" ಅಂದ. ಮಾಣಿ ಕೂಡ್ ಯೆರಡು ನಾಣಿ ಕೊಟ್ಟಿತು. "ತಮ್ಮ, ಕೊಟ್ಟ ನಾಣಿ ಎಲ್ಲಿ ಹೋಯ್ತು?" "ನಾಲಿಗೆ ಒಳಗಿಟ್ಟುಕೊಂಡೆ" ಅಂದ. "ಅಜ್ಜಗಿಂತ ಬಲ ಬುದ್ಧಿವಂತನಲ್ಲೋ" ಅಂದ ಬಣಜಿಗರಣ್ಣಗೆ ಹೇಳಿದ– "ಅರಸರ ಮನೇಲಿ ಬಿಡು."

ಗಾಡಿ ಮೇನೆ ಕುಲ್ಲಿಸಿಕಂಡಿ ಬಂದ. ಅರಸರ ಮನೆಗೆ ಕಲಗಲಿಲ್ಲ. ತನ್ನ ಮನೇಲಿಟ್ಕಂಡ. ಅರಸು ಹೆಂಡ್ತೀ ಗೊಬ್ಬರ ತೆಗೆವುದು; ಅರಸು ಹುಡ್ಗ ದನಕಾವುದು ಯೆರಡು ಸಾಕ್ರಿಗೆ, ಯೆರಡ ಜನ ನೇಮಿಸಿ ತನ್ನ ಮನೇಲಿಟ್ಕಂಡ. ಪೀತಾಂಬರ ಸಾಲೆ ತನ್ನ ಹೆಂಡ್ತಿಗೆ ಕೊಟ್ಟ; ಅವಳುಟ್ಟ ಸಾಲೆ ಅರಸು ಹೆಂಡ್ತಿಗೆ ಕೊಟ್ಟ.

ಅರಸು ಹುಡುಗ ದಿನೇಚ್ಚ ದನ ಕಾಯುಕೋತಿದ್ದ. ಒಂದು ಅಜ್ಜಿ ಮುದುಕಿ ಯೇನಂತು? "ತಮ್ಮಾ... ದಿನೇಚ್ಚವ ದನ ಕಾಯೂಕ ಹೋಪೋನು ನನ್ನ ದನ ಬಿಟ್ಕಂಡು ಹೋಗು. ದಿನಕೊಂದೂಟ ನನ್ನ ಮನೇಲಿ ಉಂಡಕಂಡ ಹೋಗು." ಅಂತು ಅಜ್ಜಿ. "ಹೂಂ" ಅಂದ. ರಾತ್ರೆ-ಹಗಲು ಅಲ್ಲಿರುವ; ಹೀಗೆ ದನಕಾವುತ ಉಲಿದ.

ಯೇಳ ಹೆಡೆ ಮಾಶೇಕರ "ಪೂರ್ವದಿಕ್ಕೆ ಹೋಬೇಡ" ಅಂದಿತ್ತು. ಒಂದಿನ ಬೆಳಗಾಮುನ್ನ ಎದ್ದ. "ನೋಡವ..." ಮಾಡ್ಕಂತಿ, ನಡೆದ ಬಿಟ್ಟ ಪೂರ್ವ ದಿಕ್ಕಿಗೆ.

ಹೋದವನು ಅಚ್ಚಗನ್ನೇರು, ದೇವಗನ್ನೇರು, ಅಕ್ಕ-ತಂಗದಿರು ಯೇಳ ಜನ ಮಿಂದಿ ತಾನಕ್ಕೆ ಬಂದಿದ್ದರು. ಈ ಅರಸು ಹುಡ್ಗನ ಕಂಡ ಚಣವ ಕೆರೆ ಹಾರಿಬಿಟ್ಟರು. ಹಾರಿದವರು ತಮ್ಮ ತಮ್ಮ ದೇಶಕೆ ಹೋಗಬೇಕಾದರೆ ಕಿರಿತಂಗಿ ಶಾಲೆ ಶೆರಗ ಹಿಡಿದ. ಎಳೆದು ತುಂಡು ಹರಿದುಕೊಂಡೇ ಬಂದಿ ಬಣಜಿಗರಣ್ಣನ ಕೂಡ ಕೊಟ್ಟ ಶಾಲೆ ಶೂರ.

ಬಣಜಿಗರಣ್ಣ ಏನ ಮಾಡಿದ? "ದೊಡ್ಡೋರುಡುವಂತ ಶಾಲೆ ಶೂರು" ಹೇಳಿ ಅರಸು ಕೂಡೆ ಕೊಟ್ಟ. ಅರಸು "ಶಾಲೆ ಇಷ್ಟು ರಮ್ಮು... ಶಾಲೆ ಉಟ್ಟ ಹುಡುಗಿ ಎಷ್ಟು ರಮ್ಮು...! ಆ ಹುಡುಗಿ ತಂದ್ ಕೊಟ್ರೇ ಬಣಜಿಗರಣ್ಣ... ನಿನ್ನ ಜೀವ ಇಡತೇ, ಇಲ್ಲ ನಿನ್ನ ತಲೆ ಹೊಡವ ಹುಕುಂ ಕೊಡುತೆ" ಅಂದ ಅರಸು.

ಬಂದು ಮುಚ್ಚ ಹಾಕಂಡು ಮನಗಿ ಬಿಟ್ಟ. ಆಗ ಹುಡುಗ ದನಕಾಯುಕೆ ಹೋದವ ಬಂದ. "ಊಟಕ್ಕೇಳೋ" ಅಂದ. "ನೀ ತಂದ ಕೊಟ್ಟ ಶಾಲೆ ಅರಸು ಕೂಡ ಕೊಟ್ಟೆ. ಅರಸು– 'ಶಾಲೆ ಇಷ್ಟು ರಮ್ಮು, ಆ ಶಾಲೆ ಉಟ್ಟ ಹುಡುಗಿ ಎಷ್ಟು ರಮ್ಮು! ಆ ಹುಡುಗಿ ತಂದ ಕೊಟ್ರೇ ಬಣಜಿಗರಣ್ಣ ನಿನ್ನ ಜೀವ ಇಡತೆ, ಇಲ್ಲ ನಿನ್ನ ತಲೆ ಹೊಡೆವ ಹುಕುಂ ಕೊಡತೆ' ಅಂದ."

ಆಗ, "ನೀನು ಹದಿನೈದು ಕತ್ತದ ಮುಂಡಗಿ ತಕ್ಕಂಬಾ. ಆ ಹುಡುಗಿ ನಾ ತಂದ ಕೊಡತೆ" ಅಂದ. ಹದಿನೈದು ಕತ್ತದ ಮುಂಡಿಗಿ ತಂದ ಕೊಟ್ಟ. ಸೊಂಟಕ್ಕೆ ಒಂದು ಸೆರಗ ಕಟ್ಟಿಕೊಂಡ,

"ನನ್ನ ಬೆನ್ನಿಗೆ ಬಾ. ನಾ ಕೆರೆ ಹಾರುವಷ್ಟಕ್ಕೆ ಹಗ್ಗ ಜಗಳೆ ಬಿಡಬೇಕು ".

ಹಗ್ಗ ಜಗಳೆ ಬಿಟ್ಟು ಬರುಕೆ ಆ ಹುಡುಗ ಹೋಗುರಟ್ಟಕ್ಕೆ ಅವರು ಕೆರೆ ಹಾರಿಬಿಟ್ಟರು. ಅವನೂ ಅವರೊಟ್ಟಿಗೆ ಅವರ ರಾಜ್ಯಕೆ ಹೋದ.

"ಆ ದಿವಸ ಶಾಲೆ ಶೆರಗ ಹರಕ ಹೋಗಿದ್ದೆ. ಅದೇ ಹುಡುಗಿ ನಗ್ನಾಕಂಡ್ ಹೋಪೇಕು ಹೇಳಿ ಬಂದಿದ್ದೆ" ಅಂದ. ಆರು ಜನ ಅಕ್ಕ-ತಂಗಿರು, ಅವನಿಗೆ ನಗ್ನ ಮಾಡಿದರು.

"ಅತ್ತಿಗಿದಿರೆ, ನಮ್ಮೂರಿಗೆ ಹೋಗುವ" ಅಂದ. "ಇನ್ನೊಂದು ದಿನ ಬತ್ತೋ. ಇವತ್ತು ಮಡದಿ ಕರಕಂಡ್ ಹೋಗಲಿಕ್ಕೆ ಅಡ್ಡಿಯಿಲ್ಲ" ಅಂದರು. ಊಟ-ಉಪಚಾರ ಮಾಡ್ಕಂಡು ಹಿಂಡ್ತಿ ಕರಕಂಡು ಬಂದ.

ಹಗ್ಗ ಜಗ್ಗತಿ, ಬಣಜಿಗರಣ್ಣ ಸೊಕ್ಕಂಡು ಹುಡುಗಿ ತಂದ. ಕೆರೆಮುಂದಾಗಿ ಹತ್ತಿದ. ಇವ ಹಿಂದಿಂದ ಹತ್ತಿದ ಮೇನೆ. ಬಣಜಿಗರಣ್ಣ ಹುಡುಗಿ ಅರಸರ ಕೂಡ ಕೊಟ್ಟ.

ಅರಸು, "ಇಪ್ಪತ್ ವರ್ಸದ ಹುಡಗರು ಶಪ್ಪರದೊಲಗೆ ಬರಬಾರದು" ಹೇಳಿ ಡಂಗರ ಹೊಡೆದ ಬಿಟ್ಟ. ಈ ಹುಡ್ಗ, "ಹರಹರಾ... ತಾನ ನಗ್ನಾದ ಹುಡುಗಿ ತಂದೆ ನಗ್ನಾಗ್ತ" ಎಂದು ಹೇಳಿ, ಅಜ್ಜನಿದ್ದಲ್ಲಿ ಹೋದ. ಯೇಲ ಹೆಡೆ ಮಾಶೇಕ್ರನ "ಅಜ್ಜ... ನನ್ನ ತಂದೆ ಇಪ್ಪತ್ ವರ್ಷದ ಹುಡ್ಗರು ಶಪ್ಪರದೊಲಗೆ ಬರಬಾರದೆಂದು ಡಂಗರ ಹೊಡೆದ. ಏನು ಮಾಡಬೇಕು?" ಕೇಳಿದ.

ಅಜ್ಜ, "ಇಕ್ಕೊ... ಶಪ್ಪರ ಹೆರಹೋಗಿ ಹರಲ ನುಂಗು; ಯೆಪ್ಪತ್ ವರ್ಸ ಮುದ್ಕನಾಗತೆ. ಶಪ್ಪರ ಒಳಗೆ ಹೋಗು. ಈ ಹರಲ ನುಂಗು. ಇಪ್ಪತ್ ವರ್ಸದ ಹುಡಗನಾಗತೆ. ಶಪ್ಪರದ ಬದಿ ಸುಮ್ಮನೆ ಕುಂತ್ಕ" ಅಂದ ಅಜ್ಜ. (ಅದರಂತೆ ಮಾಡಿದ)

ಅರಸು, "ಹೂಮಾಲೆ ತನಗೆ ಹಾಕು" ಹೇಳಿಕೊಟ್ಟ. ಹುಡುಗನ ಕೊಲ್ಲಿಗೆ ತಂದು ತೂಗ ಹಾಕಿತು. ಆಗ "ಇದೇನು?" ಕೇಳಿದ ಮಾವ, "ನಿನಗೆ ನಿನ್ನ ಹೆಂಡ್ತಿಗೆ ಶರ್ತ ಬಿದ್ದಿತ್ತೊ?" "ಹೌದು" "ಹೆಂಡ್ತಿ ತಲೆ ಹೊಡು ಹುಕುಂ ಕೊಟ್ಟಿದ್ಯೊ?" "ಹೌದು" "ಹೊಡೆದು ಬಂದಿದ್ದರೋ" "ಹೌದು...."

"ಆ ಹುಡುಗಿ ನಾನು ಲಗ್ನಾದ ಹುಡುಗಿ. ನಿನ್ನ ತಾಯಿಯೆಲ್ಲಿ?" ಕೇಳಿದ. "ತಾಯಿ ಬಣಜಿಗರಣ್ಣನ ಮನೇಲೀತು. ನಾ ಲಗ್ನಾದ ಹುಡುಗಿ ನೀ ಲಗ್ನಾಗತೆಯೋ?" ಕೇಳಿದ.

ಅರಸು ಹೆಂಡ್ತಿಗೆ ಕರೆ ಬಿಟ್ಟ. "ತಲೆ ಹೊಡೆಲಿಲ್ವೋ?" ಕೇಳಿದ. "ಇಲ್ಲ." ಕೆರೆ ಏರಿ ಮೇಲೆ ಜನ್ಯಾಗಿ, ಮಾಶೇಕರ ತಕಂಡ್ ಹೋಗಿ ಇಟ್ಕಂಡ. ಕಡಿಕೆ ಹುಡುಗನ ತಾಯಿಯ ತಕಂಡ್ ಹೋಗಿ ಬಣಜಿಗರಣ್ಣ ತನ್ನ ಮನೇಲಿಟ್ಕಂಡ.

ಅರಸು ಮಾಣಿ ಅಂತ ತಿಳಕಂಡು, ಎಲ್ಲರನ್ನೂ ಸಂತೋಷದಿಂದ ಇಟ್ಕಂಡ.

- **ಕೆಲವು ಪದಗಳ ವಿವರಣೆ**

| | |
|---|---|
| ಶುಬನ = ಶುಭ ಶಕುನ | ವರಗು= ನಿದ್ದೆಮಾಡು |
| ಶಾಲೆ, ಸಾಲೆ = ಶೀರೆ | ಶೂರ = ಚೂರು, ತುಂಡು |
| ಹಂಯಿ= ರಸ | ಬಾಲೆ = ಶಿಶು |
| ಗಬನ = ನೆನಪು | ಕರತಂದ = ಕರಕೊಂಡು |
| ನಾಣಿ = ನಾಣ್ಯ | ದಿನೇಚ್ಚ = ಹಗಲು |
| ಚಣವ = ಕ್ಷಣದಲ್ಲಿ | ರಮ್ಯ=ರಮಣೀಯ |
| ಶೂರ = ಚೂರು | ಜಗಳೆ = ಸೈಲು, ಸಡಿಲು |
| ಜನ್ಯ = ಹಡೆಯುವದು (ಡೆಲಿವ್ಹರಿ) | |

▪ ಹೇಳಿದವರು : **ದಿ ಪುಟ್ಟ ನಾಗು ಗೌಡ,** ವಂದೂರು, ತಾ. ಹೊನ್ನಾವರ.

❖

# ಶಿನ್ನದ ನವಿಲು

ವಂದ್ ಅಜ್ಜಿ ಮುದ್ಕಿ, ಅಜ್ಜಿ-ಮೊಮ್ಮಗ ಹೇಳಿ ಯೆಯ್ಡು ಜನ ಇದ್ರು. ಇದ್ರೆ ಅವ್ರು ವಂದ್ ಅರಸಗೊಳ ಮನೆಗೆ ಹೋಗ್ತಿರು. ದಿನಾಕು ಬೆಲ್ಗಾಗೆದ್ದಿ ಅಜ್ಜಿ ಯೇನಾರೂ ಕುಂಟಮನೆ ಕೆಲಶ ಮಾಡುದು, ಏನಾರೂ ಶದೆವಗೂದು ಯೆನಾರೂ ಮಾಡ್ಕಂಡಿ ಶಂಶರ ಮಾಡ್ತಾ ಇದ್ರು ಅಜ್ಜಿ ಮೊಮ್ಮಗ. ಆವಾಗ್ಯೆನಾಯ್ತು.

ಊರ್ಯೋರ್ಯೆಲ್ಲವಾ ವಂದ್ ಕುಂಬ್ರಿ ಕಡುಕ್ ತಯಾರ್ ಮಾಡ್ದ್ರು. ದೊಡ್ ಗುಡ್ಡೆಮೇನೆ. “ಮೊಮ್ಮಗ್ನೇ ಊರ್ಯೋರ್ಯೆಲ್ಲವಾ ಕುಂಬ್ರಿ ಕಡೀತಾರಂತೆ ಗುಡ್ಡೆ ಮೇಲೆ ನಾವೊಂದ್ ಚಣ್ ತುಂಡ್ ಮಾಡ್ವ ಅಲ್ಲೇಯ?” “ಅಜ್ಜವ್ವಾ, ಚಣ್ ತುಂಡ್ ಮಾಡ್ಬೋದಾಗಿತ್ತು. ನಮ್ ಕೂಡ್ ಕತ್ತಿಲ್ಲ, ಕೊಡ್ಲಿನೂ ಇಲ್ಲ” ಅಂತ ಹೇಳ್ದ.

ಅಜ್ಜವ್ ಹೇಳ್ತು, “ಮೊಮ್ಮಗ್ನೆ... ಕತ್ತಿ, ಕೊಡ್ಲಿ ಇಲ್ಲ ಹೇಳಿ ನೀ ಬೇಜಾರ್ ಮಾಡ್ ಬೇಡ. ನಾನು ಅರ್ಸಗೊಲ ಮನೆಗೆ ಹೋಗಿ ತಕಬರ್ತೆ” ಅಂದಿ, ಕೊಡ್ಲಿ ಕತ್ತಿ ತಂದ್ ಕೊಟ್ತು. ಕೊಟ್ ಕೂಡ್ಲೆ ತಕ್ಕಂಡ. ಬೆಳ್ಗಾ ಮುಂದೆ ಯೆದ್ದ, ಊಟ ಮಾಡ್ಕಂಡಿ ಕುಂಬ್ರಿ ಕಡುಕ್ ಗುಡ್ಡೆ ಮೇಲ್ ಹೋದ. ಹೋಗಿ ವಂದ್ ಯೆಕ್ರೆ ಜಾಗ ತಕ್ಕಂಡಿ ಕಡ್ದ. ಕೂಡ್ಲೆಯ ವಣಗಿತು ಅಂಬುದಾಯ್ತು.

ಕುಂಬರಿ, ವಣಗಿದ ಕೂಡ್ಲೆಯಾ ಊರೋರೆಲ್ಲಾ ಕೂಡ್ಕಂಡಿ ಬೆಂಕಿ ಹಾಕ್ದ್ರು. ಆದ ಕೂಡ್ಲೆಯ ಗೆಡಗಾಲ ದಿನ್ದಲ್ಲಿ ಬಿತ್ತಕ ಹೋಗಬೇಕಾಯ್ತು ಅಂತ ಹೇಳಿ ಊರೋರೆಲ್ಲ ತಯಾರಾಗಿ ಬಿತ್ತುಕ್ ಹೋದ್ರು.

ಅಜ್ಜಿಮುದ್ಕಿಗೆ ಅಜ್ಜಿ ಮೊಮ್ಮಗ, "ಬೀಜಿಲ್ಲ ಅಜ್ಜವ್ವಾ... ಕುಂಬ್ರಿ ಬಿತ್ತೂಕ್ ಹೋಪೆಕಾಗಿತ್ತು. ಬೀಜಿಲ್ಲದೆ ರಾಗಿ, ಯೆಂತ ಮಾಡಬೇಕು?" ಕೇಳ್ದ ಅಜ್ಜವ್ನ ಕೂಡೇ. ಕೂಡ್ಲೆಯ, "ಮೊಮ್ಮಗ್ನೆ, ಬೀಜಕಾಗೆ ಯಾಕ್ ಹೆದ್ರತೇ? ನಾ ಅರ್ಸಗೊಲ ಮನೆಹೋಗ್ ತಕಂಬರ್ತೆ" ಅಂತು. ವಂದ್ ಶಿದ್ದೆ ಬೀಜ ತಕಬಂತು. ಕೂಡ್ಲೆಯ, "ಬೀಜವಂದ್ ತಂದ್ರಾಗ್ಲಿಲ್ಲ ಅಜ್ಜವ್ವ, ಅದ್ಕೆ ಪಿಕಾಶಿಲ್ಲ ನೆಲ ಅಗೂಕೆ" ಅಂದಾ. ಅದ್ಕೇ, "ನಾ ಹೊತೆ ಅರ್ಸಗೋಲ ಮನಿಗೇಯ ಪಿಕಾಸ್ ಬೇಡ್ಕಂಬತ್ತೆ" ಅಂತು. ಆಗೆ ಪಿಕಾಶಿ ಬೇಡ್ಕ ಬಂದ್, ಮೊಮ್ಮಗ್ನ ಕೂಡ್ ಕೊಟ್ತು. ಕೂಡ್ಲೆಯ ಪಿಕಾಶು ಮತ್ತು ರಾಗಿ ಬೀಜ ತಕಂಡ ಗುಡ್ಡೆಮೇನ್ ಹೋದ ಬಿತ್ತುಕೆ. ಹೋಕಂಡಿ ಕೆದ-ಕೆದ್ರಿ ಬಿತ್ದ ವಂದೇ ದಿವ್ಸಕೆ ವಂದ್ ಯೆಕ್ರೆ ತಲ ಬಿತ್ದ.

ಕೂಡ್ಲೆಯಾ ಶಶಿಯಾಗಿ ಹದ್ನೈದ್ ದಿನ್ನಮೇನೆ ಹುಟ್ತು. ಯೆಲ್ಲ ಕಳೆ ಬೆಳೆಯೆಲ್ಲ ತೆಗೆದ್ರು. ಶಶಿಬಿಶಿ ಇಲ್ಲಾದಲ್ ಹಾಕದ್ರು. ಕೂಡ್ಲೆಯ ಕುಂಬರಿಯಾಯ್ತುಪ್ಪ. ಹೇಗೆ ಬಯಂಕರ ನಮೂನ್ಯಾಗಿ ಅದ್ಬುತಾಗಿ ಯೆದ್ತು. ಕುಂಬರೀಲ್ ದೊಡ್ ದೊಡ್ ಗೊಂಡ್ಯಾಗೋಯ್ತು. ಆಗೆ ವಂದ್ ಶಿನ್ನದ ನವ್ಲ ಬತ್ತಿತ್ತು ಕುಂಬ್ರಿ ತಿನ್ನುಕೆ– ಪಾತಾಲದಿಂದ ಬತ್ತಿತ್ತು.

ವಂದಿನಲ್ಲಾ ವಂದಿವಸ ಹೀಗ್ ಹೋಗಿ ನೋಡ್ದ. ಕುಂಬರಿಯ ನೋಡಲವರೆಗೆ, "ಕುಂಬ್ರಿ ತಿಂದ್ಕಂಡ್ ನೆಡ್ದದೆ. ಯೆಂತದೋ ಯೇನೋ..." ಚಂಜೀ ಹೊತ್ನಲ್ಲಿ ಹೋದ ಕುಂಬ್ರಿ ಕಾಯುಕೆ. ಹೋದ ಕೂಡ್ಲೆ ಶಿನ್ನದ ನವಲು ಪಾತಾಳಲೋಕದಲ್ಲಿಂದ ಬಂತು. ಮೇಲೆ ಬಂದ್ಕಂಡ್ ಕುಂಬ್ರಿಗೊಂಡೆ ತಿಂಬೂಕೆ ಹಣ್ಕತು. ಬರಾಬರಿ ಹೋದವ ಶಿನ್ನದ ಗರಿಪುಕ್ಕ ಹಿಡ್ದ್ ಬಿಟ್ಟ. ಹಿಡ್ದ್ ಬರಾಬರಿ ವಂದ್ ಪುಕ್ಕ ಕಿತ್ ಬಂದ್ ಬಿಡ್ತು. ವೋಡ್ ಹೋದ ಕೂಡ್ಲೆಯ ಬೆಲ್ಗಾಮುಂಚ್ಯೆದ್ದ. ಶಿನ್ನದ ಗಿರಿ ತಕಂಡ್ ಬಂದ.

ತಂದಿ ಅಜ್ಜವ್ವನ ಕೂಡ್ ಕೊಟ್ಟ, "ಅಜ್ಜವ್ವಾ... ಇದೊಂದ್ ಗಿರಿ ಸಿಕ್ಕಿದು ತನ್ಗೆ." ಹೇಳಿ. ಅದು ನೋಡ್ತು, "ಅಯ್ಯಯ್ಯೋ ಮೊಮ್ಮಗ್ನೆ... ಯೆಲ್ಲಿಂದ ತಂದೆ ಶಿನ್ನದ ಗಿರಿಯ? ಇದ ತಕಂಡೋಗಿ ಅರ್ಸಗೊಲ ಮನೆಗೆ ಕೊಟ್ ಬಿಡು, ಯೇನಾದ್ರೂ ನಮ್ಗೆ ಕೊಡುರು ಶಂಶಾರ್ಕೆ."

ತಕಹೋಯ್ತು ಅಜ್ಜವ್ವಾ. ಅರ್ಸ್ ಗೊಲ ಕೂಡ್ ಕೊಟ್ತು. ಕೂಡ್ಲೆಯ ಅರ್ಸ್ ಗೊಲು ನೋಡ್ದ್ರು, "ಅಜ್ಜವ್ವಾ, ಇದ್ ಯೆಲ್ಲಿತ್ತು?" ಕೇಳ್ದ. ಕೇಳ್ದ್ ಕೂಡ್ಲೆಯ, "ನನ್ ಮೊಮ್ಮಗ ಕುಂಬ್ರಿಗೆ ಹೋಗಿದ್ದ. ಅಲ್ಲಿ ಈ ಗಿರಿ ಶಿಕ್ತು."

"ಗಿರಿ ಅಂತು ತಂದ್ ಕೊಟ್ಟೆ. ಈ ಶಿನ್ನದ ನವ್ಲಯೆಲ್ಲದೆ? ಅದ್ ಹೋಗಿ ತಂದ್ ಕೊಡ್ಬೇಕು. ಕೂಡ್ದಿದ್ದಲ್ಲಿ ನಿನ್ನ, ನಿನ್ನ ಮೊಮ್ಮಗ್ನ ಯೆರಡೂ ಜನವೂ ದಾವಣಿ ಕಟ್ಟಿ ತಲೆಹೊಡಿಸ್ತೆ" ಅಂದ್

ಬಿಟ್ರು. ಅಜ್ಜವ್ಗೆ ಕಣ್ಣಲ್ ನೀರ್ ಬಂದ್ ಹೋಯ್ತು. ತೀಡ್ಕಂತ್ ಮನೆಗೆ ಬಂತು. ಬರಬೇಕಿದ್ರೆ ಮೊಮ್ಮಗ ಕಂಡ. "ಅಜ್ಜವ್ವಾ... ನಿಂಗೇನಾಯ್ತು? ಯೆಂತಕ್ ತೀಡ್ಕಂತ ಬಂದೆ?" ಕೇಲ್ದ. "ಹಾಂಗಾದ್ರೆ, ಮೊಮ್ಮಗನೆ ಗಿರಿ ತಂದ್ ಕೊಟ್ಟಿದ್ಯಲ್ಲೋ. ಇದರಿಂದೆಯ ಶಿನ್ನದ ನವಲ ತಂದ್ ಕೊಡಬೇಕಂತೆ. ತರದಿರೆ ದಾವಣಿಗೆ ಕಟ್ ತಲಿ ಹೊಡಿಸ್‌ತ್ರಂತೆ" ಅಂತ ಹೇಳಿ ಹೇಳ್ತು.

"ಅಟ್ಟೇ ಕೆಲ್ಸವೆ ಅಜ್ಜವ್ವಾ", "ಅಟ್ಟಕಾಗಿ ಮಗ..." "ಅರ್ಸಗೋಲ ಕೂಡ್ ಐನೂರ್ ಮಾರ್ ಕಬ್ಬಿಣರ ಶರಪಲಿ, ಮತ್ತೆ ಅದ್ಕ ವಂದ್ ತೊಟ್ಲು ಇಟ್ ತಯ್ಯಾರ್ ಮಾಡ್ ಕೊಡು ಅಂತ ಹೇಳು. ನಾನು ಶಿನ್ನದ ನವಲ ತಂದ್ ಕೊಡ್ತೆ ಅಂತ ಹೇಳು" ಅಂದ.

ಹೋಯ್ತು ಅರ್ಸಗೊಲ ಮನೆಗೆ, "ಐದ್ನೂರ್ ಮಾರ್ ಶರಪಲಿ ಮತ್ ತೊಟ್ಲಹೆಡಗೆ ಕೊಡಬೇಕಂತ ಮೊಮ್ಮಗ ಹೇಳನೆ" ಹೇಳ್ತು. "ಚಿನ್ನದ ನವ್ಲನ ತಂದ್ ಕೊಡ್ತೆ ಅಂತ ಹೇಳ್ಯ" ಹೇಳ್ತು. ಕೂಡ್ಲೆಯ ಐದ್ನೂರ್ ಮಾರ್ ಶರಪಲಿ ಕೊಟ್ರು, ಹೆಡಗೆಯ್ಯಾ ಕೊಟ್ರು. "ಕುಂಬ್ರೆಲ್ಲಿ ದೊಡ್ ಬಿನ ಅದೇ... ಬಿನದ ಬಾಗ್ಲ ತೆಗ್ದಕಂಡ್ ಹೋಗಿ ಹೊತಾಕ ಬನಿ ಹೇಳಿ" ಅಂದ. ಅವ್ರ ತಕಂಡೋಗಿ ಅಲ್ ಹೊತಾಕ್ ಬಂದ್ರು. ತೊಟ್ಲಗೆ ಶರಪಲಿ ಕಟ್ಟಿ, ವಂದು ಮುಮಡ ಹೆಶರಸಾಲಿ ತುದಿ ಕಟ್ದ. ಆ ಕಟ್ಕಂಡ ಶರಪಲಿ ಮತ್ತು ತೊಟ್ಲು ಕಟ್ಟಿ ಪಾತಾಲ್ಕ ಬಿಟ್ಟ. ಕೂಡ್ಲೆ ಆ ಶರಪಲಿ ಪಾತಾಲ್ಕ ಹೋಯ್ತು. ಕೂಡ್ಲೆಯಾ ಇವ ಊಟಗೀಟ ಮಾಡ್ಕಂಡು, ಹತ್ತೆಂಟ್ ನಿಂಬೆಹಣ್ ತಕಂಡು ಹೊಂಟ. ಬಿನದ ಬಾಗಿಲ್ಲೆ ಹೋಕಂಡು ಶರಪಲಿ ಮೇಲೆ ಕೆಲಗಿಲ್ದ್ ಹೋದ. ಹೋಗಿ ಪಾತಾಲ್ದ ಬೂಮ್ಯಲ್ ಇಲ್ದ. ಇಲ್ಕಂಡು ಪೂರ್ವ ಮೊಕವಾಗಿ ಹೋಗುವಂತೋನಾದ. ಅಲ್ಲಿಂದ ಹೋಗ ಬೇಕಿದ್ದರೆ ಅಲ್ಲಿ ಯಲ್ಗ್‌ರಾಯ ಹೇಳ್ವಂತವಿದ್ದ. ಆ ರಾಯನ ಮಗಲು ಬಚಲಗ್ ಮಿವ್ಕ ಬಂದಿತ್ತು. ಅವ ಅದೇ ರಸ್ತೆ ಬುಡಕೆ ಹೋಗಬೇಕಿದ್ರೆ ಜಲಕ ಮಾಡ್ತಿರವಾಗೆ ಆ ನೀರು ಹಾದಿಲೇ ಹೋಗ್ತಿತ್ತು. ನೀರ ದಾಟ ಬೇಕಿದ್ರೆ ವಂದ್ ನಿಂಬೆಹಣ್ ತೆಗೆದ. ತೆಗದು ಕೊರದು ಲಿಂಬೆ ಹಣ್ ರಶ ಕಾಲ್ಗ್ ತಾಗ್ಸ್‌ಕಂಡು ಹಾರ್ ಹೋದ. ಬರಾಬರಿಯೂ ಆ ಅರಸು ಹುಡ್ಗಿ ನೋಡ್ತೆ ಇತ್ತು. "ಅವನ ನೋಡುವ ಬೇಕದ್ರೆ ಅಪ್ಪಯಾ ಅಲ್ಗೆ ಹುಡ್ಗ ಹೋಗ್ತ. ಅವ್ನೇ ನನ್ನ ಗಂಡ. ಅವನಿಗೆ ಮದ್ಯಾಗ ಬೇಕು" ಅಂತು. ಕೂಡ್ಲೆಯಾ ಆಗಿಂದಾಗೆ ಶಿಪಾಯರ ಬಿಟ್ಟ ಅರಸು. ಆ ಹುಡ್ಗನ ಕರಕಂಬಂದ್ರು. ಬಂದ್ ಕೂಡ್ ಕೇಳ್ದ ಅರಸು "ನನ್ ಹುಡಗಿಯ ನಿನಗೆ ಕೊಟ್ಟಿ ಮದಿ ಮಾಡಬೇಕು" ಅಂತ ಹೇಳ್ದ. "ಯೆನಡ್ಡಿಲ್ಲ ತಾ ಮದಿಯಾಗ್ತೆ" ಅಂದ.

ಗುಡಗಟ್ಟಿ, ಕೇಲ್ವಲ್ ಡಂಗರ ಸಾರಿ. ಕೆಲ್ದೆಗಿದ್ದಲ್ ವಾಲೆ ಬರ್ದಿ ಮದಿಕ ತಯಾರ್ ಮಾಡದ್ರು, ಮಾಡ್ ಬಿಟ್ರೂ.

ಮೂರ್ ನಾಕ ದಿವಸ ಅಲ್ಲೆ ವಲ್ಕಂಡ. ನಂತ್ರದಲ್ ಅರಸು ಕೂಡ್ ಹೇಳ್ದ, "ಮುಂದ್ ಹೋಗ್ ಬರ್ತೆ". "ಹೋಪಕ್ ಅಡ್ಡಿಲ್ಲ" ಹೇಳಿದ್ರು ಅರ್ಸಗೋಲು.

ಅಲ್ಲೊಂದ್ ಪರ್ಲಾಂಗ್ ಹೋದ ಕೂಡ್ಲೆ ರದಕರಾಯನ ಹುಡ್ಗಿ ಇವ್ನೇ ಮದಿಯಾದ್ಲು. ಮುಂದೆ ಹೋದಾ. ಚಂದರಾಯ್ನ ಮಗಲು ಹಾಗೇ ಮಾಡ್ತು. ಬೊಮ್ಮರಾಯನ ಮಗಲು, ರೋಮರಾಯನ ಮಗಲು, ಬೇಮರಾಯನ ಮಗಲು, ಉಗ್ರರಾಯನ ಮಗಲು ಇಷ್ಟ ಜನರ ಮದಿಯಾದ. ಆಗಿ ಮುಂದ್ ಹೋದ.

ಅದೆ ಅಜ್ಜಿ ಮುದ್ಕಿ ಮನ್ ಚಿಕ್ತು, ಹೋಗಿ ಕುಂತ. "ಅಜ್ಜವ್ವಾ, ನಿಮ್ಮೂರಲ್ ಯೆಂತಾ ಚುದ್ದಿ?" ಕೇಲ್ದ ಕೂಡ್ಲೆಯಾ, "ಮೊಮಗ್ನೆ, ಯೇಂತಾ ಚುದ್ದಿನೂ ಇಲ್ಲ. ವಂದ್ ಚೆನ್ನದ ನವ್ಲ ನಮ್ಮನೆ ಹೊಂಡಾದ ಗೆದ್ದೆಗೆ ಬತ್ರಿದು. ಆಲ್ ಹೊಡ್ ಮಾಡ್ತ ವಲಿತದೇ... ಮತ್ಯೇನ್ ಚುದ್ದಿಲ್ಲ" ಅಂತು. "ನಾಲೆ ಅಜ್ಜವ್ವಾ, ವಂದ್ ಚಂಬ್ ಯೆಣ್ಣಿ ತರಬೇಕು, ವಂದ್ ಬಾಚ್ಗ ತರಬೇಕು. ಈ ಊರಲ್ಲಿ ಯೆಟ್ ಜನ ಹೆಣ್ಣು-ಗಂಡು ಅವರ್ಯೋ ಅವರ್ಗೆಲ್ಲಾ ಯೆಣ್ಣಿ ಹಾಕುದು, ಮಂಡೆ ಹಿಕ್ಕಿ ಮಂಡೆ ನಿಗ್ರ ತಕಂಡ್ ಬರುದು. ಇಟ್ ಕೆಲ್ಸ ಮಾಡಿ, ಶಾಮಾನ್ ಯೆಲ್ಲ ತಕಂಬಾ..." ಅಂತ ಇಟ್ ರೂಪ್ಯಾ ಕೊಟ್ಟ. ಅದು ಹಾಗೆ ಮಾಡ್ತು. ನಿಗರ್ ಚಿಕದೋರದ್ಯೆಲ್ಲ ತಂತು. ಸುಮಾರು ನೆಲಗೆಯ್ಯ ಮಂಡೆನಿಗ್ರೆ ತಕಂಡ್ ಬಂತು. ಮೊಮ್ಮಗ್ನ ಕೂಡ್ ಕೊಟ್ತು. ಕೊಟ್ಟಿ ಅಡಗಿ ಅನಕೂಲ ಯೆಲ್ಲ ಮಾಡ್ತೂ, ನಿಗ್ರ್ ತಕಂಡಿ ಊಟ ಮಾಡ್ದ. ಹೊಂಡದ ಗೆದ್ದೆಗ್ ಹೋದಾ. ಹೋಗಿ ಚೆನ್ನದ ನವ್ಲ ಹೊತ್ಯಾಡತದೆಯೋ ಆ ಹೊಂಡಕ್ ಹೋಗಿ ಮಂಡೇನಿಗ್ರ ಹಾಸ್ದ. ಚಣ್ಣ ಮಡಗಿ ಮಾಯನ ಮರಾಗಿತ್ತು. ಮಡಗಿ ಬುಡಕೆ ಹತ್ಕಂಡಿ ಮೇಲೆ ಕುಳ್ತ ಹೊತ್ತಲ್ಲಿ– ಆರ್ ತಾಶ್ ದಾತ್ರೆ ಬರಬರಿ ಬಂತು. ಅದು ಹೊಂಡಕೇ ಬಂದ್ ಹೊಡ್ಯ್ಯಾಡೂಕ್ ಹಣ್ಕಿತು. ಹೊಡ್ಯಾಡಿ ಹೊಡ್ಯಾಡಿ, ಹೊಡ್ಯಾಡಿ ಹೊಡ್ಯಾಡಿ, ಮಂಡೆ ನಿಗ್ರೆಲ್ಲಾ ತಿರ್ಪಿ, ತಿರ್ಪಿ, ತಿರ್ಪಿ ಯೆರಡೂ ಕಾಲ್ಕೂ ಕಟ್‌ದಾಂಗ್ ಆಗ್ ಹೋಯ್ತು. ಆಗ್ ಬರಾಬರ ಹಾರುಕೇ ಆಗ್ಲಿಲ್ಲ. ಬೆಲ್ ಬೆಲ್ಲಾಗ್ ಬಂದ್ ಹೋಯ್ತು.

ಇವ ಹಿಂಗೆ ನೋಡ್ದ, ಹೊಂಡಕೆ ಚೆನ್ನದ ನವ್ಲ ಹಿಡುಕೆ ವೋಡ್ ಹೋದ. ನವ್ಲ ಹಿಡ್ದ್ ಬಿಟ್ಟ... ಹಿಡಕೊಂಡ. ಯೆಲ್ಲಾ ಗೆಂಚ (ಮಂಡೇ ನಿಗ್ರ) ತಪ್ಸ್‌ಕಂಡಿ ಆಜ್ಜಿ ಮುದ್ಕಿ ಮನೆಗೆ ಬಂದಾ. ಬಂದ್ಕಂಡಿ, "ಅಜ್ಜವ್ವಾ, ಚೆನ್ನದ ನವ್ಲ ಹಿಡ್ಕಂಡ್ ಬಂದೆ, ನಾನು ಬಂದಿ ಐದಾರ್ ದಿವಚಾಗೋಯ್ತು ಮನೆಗೆ ಹೋಗಬೇಕು" ಅಂದಾ.

"ಮೊಮ್ಮಗ್ನೆ ಹೋಗು" ಅಂತು. ಅದ್ಕೆ ಇಪ್ಪತ್ತೈದ್ ರೂಪ್ಯಾ ಕೊಟ್ಟಾ. ಇಲ ಮಾವನ ಮನೆಕೂಡ್ ಬಂದು ಉಗ್ರರಾಯ್ನ ಮನೆ ಕೂಡಿ ಒಂದಿನ ವಲ್ದ. ಅವರನೆಲ್ಲಾ ಕರಕಂಡೀ ಬಂದ ತೊಟ್ಲ ಬುಡುಕೆ. ಬಂದ್ಕಂಡಿ, "ತೊಟ್ಲ ಹುಂಗಚದ (ಅಗಲಿಚಿದ), ಗಟ್ಯೆವಲಿತು ಅದು. ನಾನ್ ಮೇಲ್ ಹೋಗಿ ನೋಡತೆ. "

"ಗಟ್ಟಿಸ್ರಾಂಗ್ ಕಾಣ್ತದೆ" ಹೇಳ್ದ. ಹತ್ರ ಬಂದ. ಬಂದ ಅಂಬೂ ಕೂಡೆ ಕೆಲ್ಗ್ ಬಿದ್ ಬಿಟ್ಟ. ಯೆಲ್ಗ ಪುಡ್ ಪುಡ್ಯಾಗ್ ಚತ್ ಬಿದ್ ಬಿಡ್ತ. ಐನೂರು ಮಾರು ಮೊಗಚ ಬಿದ್ ಹೋಯ್ತು. ಶರಿ ಮಾಡದ್ರೂ, "ಮೇಲ್ ಹೋಗುದ ಹ್ಯಾಂಗಾಯ್ತಪ್ಪಾ?". "ರಿಟ್ಟೂ ಜನ ಕೊತ್ಕಣಿ ಕೈಬಿಡೂಕಾಗ ಚೆನ್ನದ ನವ್ಲು ತಕಂಡ್ ಹೋಯ್ತದೆ." ಹೇಳ್ದ. ಬರಾಬರಿಯಾ ಹಿಡಕಂಡು

ವಲ್ಲ್ ಶಕ್ತಿಂದ ಹಾರಿ ಬಿಡ್ತು. ಬಿನದ ಬಾಗ್ಲಲ್ ಹಾರಿ ಬಂದ ಬಿಟ್ತೂ. ನಿಲಶತು. ಅವ್ನಮನೆ ಹೆಡೆಪಂಟೆ ಬಿಡಾರ. ಅವಂಗೆ ದುಕ್ಕಾ ಬಂತು. "ಯಾಕ್ ಆಲತೀರಿ?" ಕೇಲ್ದ್ರು. ಹೇಳ್ದ, "ನಂದಾಬಿಡಾರ ನೋಡ್‌ದ್ರೆ ಗತ ಗೊತ್ತಿಲ್ಲಾದ ಮನಶ" ಅಂದ. ಅದ್ಕೆ ಹೆಂಡ್ತಿ (ಯಲ್ಗರಾಯನ ಮಗಲು) ಹೇಳ್ತು– "ಮೂರ್ ಹಲ್ ಹೊಡೆಬೇಕು. ವಂದ್ ಹಲ್ಲು- 'ಯೆಲಂಕಣದ ಮನ್ಯಾಗೂ ಬೇಕು' ಅಂತ ಹೇಳಿ ಹೊಡೆರಿ. ವಂದು ಹಲ್- 'ದನಕರು, ಭೂಮಿ ವಟ್ಟೂ ಆಗಬೇಕು' ಅಂತ ಹೊಡೆರಿ. ಮತ್ತಂದ್ ಹಲ್ಲ, 'ಕೆರೆಬಾವಿಗುತ್ತೆಲ್ಲಾ ನೀರ ಆಗ್ಲಿ' ಅಂತ ಹೊಡೆರಿ ಅಂತ ಹೇಳ್ ಬೇಕೊ" ಯೆಲ್ಲಾ ಆಯ್ತು. ಕರಕ ಬಂದ ಅವರ್ನಾ ಮನೆವಲಗೆ ಹೊಕ್ಸದಾ. ಅಜ್ಜಿ ಮುದಕಿ ಅವರಗೆಲ್ಲಾ ನೋಡ್ತು. ಬರಾಬರ ಅವ್ರೆ, ದಾತ್ ತಪ್ ಹೋಯ್ತು. ನೀರ, ಬೀರ ಹಾಕಿ ಶಮಾದಾನ ಮಾಡ್‌ದ್ರು.

ಅಡಗಿ ಅನಕೂಲ ಮಾಡ್ದ್ರು, ಊಟ ಮಾಡವಂತ್ಲೊರಾದ್ರು. ಅಜ್ಜಿ ಕೂಡ್ ಹೇಳ್ದ, "ಚೆನ್ನದ ನವ್ಲ ಅರಸಗೋಲ ಕೂಡೆ ಕೊಟಾಕ್ ಬಾ" ಅಂದ. ಅರಶು ಕೂಡೆ ಅಜ್ಜಿ ಮುದ್ಕಿ ಕೊಡ್ತು. ಅವಗ್ ಶಂತೊಶಾಯ್ತು. ಇವೂನೂವಾ ಶುಕಶಂತೋಶದಲ್ಲಿ ವಲಕಂಡ್ರು.

- **ಕೆಲವು ಪದಗಳ ವಿವರಣೆ**

| | | | |
|---|---|---|---|
| ಶಂಶರ | = ಸಂಸಾರ | ಕುಂಬ್ರಿ | = ಗದ್ದೆ, ಹೊಲ |
| ಚಣ | = ಸಣ್ಣ | ಚಂಜೀ | = ಸಂಜೆ |
| ದಾವಣಿ | = ಹಗ್ಗ | ಬಿನ | = ಬಿಲ |
| ನೆಲಗೆಯ್ಯ | = ಉದ್ದದ | ಚಿಕ್ತು | = ಸಿಕ್ತು |
| ಹುಂಗಚದ | = ಅಗಲಿಚಿದ, ಅಗಲಿಸಿದ | ಚುದ್ದಿ | = ಸುದ್ದಿ |
| ಚಣ್ಣ | = ಸಣ್ಣ | ತಾಶ್ | = ತಾಸ್ |
| ಮೊಗಚ | = ಉರುಳಿ | ಹಲ್ | = ಕಲ್ಲು ಹರಳು |

▪ ಹೇಳಿದವರು : ಹೆಸರು ನಮೂದಾಗಿಲ್ಲ.

❖

# ಚೌಡಿವೇಷ

ಹುಡ್ಗ ಇದ್ದ. ಹೆಣ್ಣು ಸಿಕಲಿಲ್ಲ. ಮತ್ತೊಂದೂರಲ್ಲಿ ಹೆಣ್ಣಿತ್ತು. ಅವನೋಡ್ದ. "ಹಾದರಗಿತ್ತಿ ಮಗಲೂ ಹಾದರಗಿತ್ತಿ, ಯಾರೂ ಮದಿಯಾಗುದಿಲ್ಲ" ಹೇಳ್ದರು. ವಿಶ್ವಾಸದ ಮೇಲೆ, "ನನಗೆ ರಾಶಿ ಪರಾಯಾ ಬಂತು" ಅಂದ ಹೇಳಿದ. "ಹೇಳಿಯೂ ಹೆಣ್ಣೇ ಶಿಕುದಿಲ್ಲ" ಅಂದ. ಆ ಹೆಣ್ಣಿಗೆ, "ನೀ ಆಗತ್ಯೋ, 'ಹೆಣ್ಣ ನೋಡ ಬಂದಿದ್ದೆ.'" ಹೇಳಿ ಕೇಳಿದ. 'ಹೂಂ' ಅಂದ್ಲು. ನಿಕ್ಕಿ ಆಯ್ತು, ಕಡೆಗೆ ಬಾಕಿಯವರು ಶುದ್ಧಿ ಹಾಕಿದರು. "ಅದು ಬಹಲ ಹಾದರಗಿತ್ತಿ ಯಾರೂ ಮದಿಯಾಗ್ನಿಲ್ಲ". "ಹೋಗ್. ಮಾತು ಕೊಟ್ಟಿದ್ದೆ" ಆಂತ್ ಅಂದ. ನಿಕ್ಕಿ ಆಯ್ತು, ಮದುವೆ ಆದ. ಒಂದಿನ ಎಲ್ಲೋ ಹೋಗ್ಬತ್ತೆ ಹೇಳಿಕ್ ಹೋದ. ಯೆಯ್ದು ಮೂರ್ ಜನ ಅವ ಹೋದ ಹೇಳಿ ಅವನ ಮನೆ ಒಲ ಹೊಕ್ಕಿದರು. ಅವಳನ್ನು ಹಿಡಿದು ಶೊಗಿದರು.  ಶೊಗಿದ ಹೊಡತಕ್ಕ ಬಿದ್ದು ತಲೆ ಜಪ್ಪಿತು. ಹೊತ್ಕ ನಡೆದರು. ಗಂಡ ಮರುದಿನ ಬೆಳ್ಗೆ ಬಂದ. ಮಾತೇ ಆಡೂದಿಲ್ಲ ಇದು. ಊರ ಬದಿಗೆಲ್ಲಾ ಸುದ್ದಿ, ಒಬ್ಬಗೆ ಗನಾ ಪೆಟ್ಟಾಯ್ತು ಹೇಳಿ ತಿರಗತೆ ಉಳಿದರು.

ಒಂದು ತಾಮಿನಲ್ಲಿ ಭೂಮಿ ಮಾಡಿದ, ಭೂಮಿಲ್ ಹೋಗಿ ವಲಿದರು– ಗಂಡ-ಹಿಣ್ತಿ ಇಬ್ಬರೂ. ದೊಡ್ಡ ಬೆಟ್ಟ; ಹಿಂಡ್ತಿ ಕೈಲಿ ಏನ್ ಹೇಳ ಕೊಟ್ತ? "ಭೂಮಿ ಸಾಲೀತು. ಸಿಕ್ದಾ ಕೆಲಸ ಮಾಡುರು. ಇದ್ದಾಗೂ, ಇಲ್ಲದಿದ್ದಾಗೂ ದುಸ್ತೆಲ್ಲ ಕಲಚೆಟ್ ತಲೆ ಬಿಚ್ಚ ಹರಡಿಕಂಡಿ, ಜಂಜಿ ಹಚ್ಕಂಡಿ ಸುತ್ತು ತಿರಗಬೇಕು" ಅಂದ. 'ಹೂಂ' ಅಂತು.

"ಅಕ್ಕ-ತಂಗಿದರ ಕೂಡೆ ಹೋಗ್ತೆ" ಅಂದ. "ಬೆಟ್ಟದಲ್ಲಿರೂದು ನಾ ಕೈ ಹೆಂಗ್ಸು." ಹೀಗೆ ಆಲೋಚನೆ ಮಾಡತ ಉಲಿತು. ಮನೆ ಮಾರು ಈತೊ ಕೇಳ್ತೇ ವಂದ ಭಟ್ಟರು ಬಂದರು. 'ಲ್ಯಾಕೈತು' ಅಂದಿ. ಅದರ ಮನಸಿಗೆ ಹೊಲಿತು. ಬಟ್ರು ಬೊಗಸ ಇಟ್ಟು, ಐವತ್ತರವತ್ ರೂಪಾಯಿ ಕೊಟ್ರು. 'ತಾಲಿಯಾಗೋಯ್ತು.' 'ಹೂಂ' ಅಂತು. ಬೆಲ್ಲ-ಸಕ್ರೆ ಕೊಟ್ತು.

"ಶಂಜಾಯ್ತು. ಕೂತ್ಕಲಿ ಬಟ್ರೆ. ನೀವು ಬೆಲ್ಗಗ್ ಎದ್ ಹೋಗ್ವರು" ಹೇಳಿತು. "ಸಣ್ಣ ಕೆಲಸ ಈತು" ಹೇಳಿ ದುಸ್ತು ಕಲಚಿತು. ಜುಂಜಿ ಬಾಯಲ್ಲಿ ಕಚ್ಚಿಕೊಂಡು, ತಲೆ ಜುಟ್ ಬಿಡಿಸಿಕೊಂಡು ಕಿರ್ರನೆ ಕೂಗತ ಹೋಟ್ ಬಿಟ್ತು. ದೇವರ ಕಾಟವೋ, ಮನಶರ ಕಾಟವೋ ತಿಲಿಯುವುದಿಲ್ಲ.

ಭಟ್ಟರು ಓಡಿದರು. "ಬಟ್ರೆ ನಿಲ್ಲಿ" ಅಂತ ಓಡ್ತಿದು. ಹಿಂದಕಡೆ ಓಡಿ ಬಿಟ್ರು. ಗಂಡಂಗೆ ಬಯ್ಕಂಡಿ ವಲಿತು.

ಬೆಲ್ಗೆ ಮುಂಚೆ ಗಂಡ ಬಂದ. ಅದು ಹೇಳ್ತು. "ನಿಮ್ಮ ಕಾಲದಲ್ಲಿ ಯಾರೂ ಚೆಲ್ಗು ಕಲಕಂಡ್ ಹೋಗುಕಿಲ್ಲ. ಯಾವ ಭಟ್ರ ಹೇಳಿದೋ, ಭಟ್ಟರು ಬಂದಿದ್ರು. ಹೀಗೆ ಮಾಡೂರೊಲಗೆ ಬೆಟ್ಟ, ಬೇಣ ಬಿದ್ದ ಓಡಿದರು" ಅಂತು.

ಅವ, "ಆಯ್ತಲ" ಅಂದ. ಸುಮ್ಮನೊಲಿಕಂಡ.

- **ಕೆಲವು ಪದಗಳ ವಿವರಣೆ**

    ಶೊಗಿದರು = ಎಳೆದರು
    ದುಸ್ತು = ಡ್ರೆಸು
    ಜಂಜಿ = ಜುಂಜಿ
    ಚೆಲ್ಲು = ಚೆಲ್ಲಾಟ

▪ ಹೇಳಿದವರು: **ದುಗ್ಗೂರ ಕುಪ್ಪಗೌಡ.**

❖

# ತಾಯೀ, ಹಣ್ಣಲ್ಲ, ಹೆಣ್ಣು

ತಾಯಿಗೆ ಯೆಯ್ಡ್ ಜನ ಹುಡುಗರು ವಂದ್ ಹೆಣ್ಣು, ವಂದ್ ಗಂಡು. ಹುಡುಗಿ ಹೆಸರು- ಸೋದ, ಗಂಡು ಹುಡ್ಗ- ಬಲಗೂಣ, ಅವರು ಶೆಟ್ಟರ ಶಾನಬಾಗರ ಕುಲದೋರು, ಅಣ್ಣನ ಕೈಲಿ ತಾಯಿ ಯೇನಂತ? "ತಮ್ಮನಂತೆ ಸಾಕಂತ ಉಲಿಬೇಕು." ಹೇಳಿ, ಹೆಣ್ಣ ಮದುವಿ ಪರಾಯ ಬಂತು, ತಾಯಿಗೆ ಯೇನಂದ? "ತಂಗ್ಯೆ ಈಗ್ ಹದ್ನಾರ್ ವರ್ಸ ಮದವಿ ಮಾಡಬೇಕಂದ." ತಾಯಿ– "ತಂಗಿ ಮದಿ ಮಾಡೂಕೆ ನಮ್ಮ ಜಾತೀಲಿ ಮದಿಯೆಂತೇ ಮಾಡೂದೇ ಇಲ್ಲ. ಮದಿ ಮಾಡಿದರೆ ನಮ್ಮ ಜಾತೀಲಿ ನೀರೇ ಶಿಕ. ಜಾತಿ ಕೊಡನಾರು" ಹೇಳಿ ತಾಯಿ ಹೇಳಿತು. "ಇನ್ನು ಇಟ್ಟಕಂಡರೆ ವೇಲ್ಯೇವಿಲ್ಲ. ಯೇನು ಮಾಡಬೇಕು?" ಕೇಳಿದ. "ಬಟಕಲಪೇಟೇಲಿ ಬಶಪ್ಪನ ಹಬ್ಬ ಹೇಳಿ ಆಗತೀದು. ನೂರ್ ಗಟ್ಲೆ ಜನ ಕೂಡತೀರು. ಹಬ್ಬಕೆ ತಂಗಿ ಕೈಲಿ ಹೋಪ ಅಂತ ಬಣ್ಣಿಸಿ, ತಂಗಿ ಕರಕಂಡ್ ಹೋಗಿ ಯಾವನಾರೂ ಬಂದವನಿಗೆ ಬಂತೆ ಕೊಟ್ಟಿಕ್ಕಿ ಶೋಬನ ಮಾಡಿ ಬಾ" ಅಂತು. ಬುಲಿತಾಪ ಹೇಳಿತ್ತು. ಮಗ, "ನಾನು ಶಣ್ಣಿರೂನಿಂದ ತಂಗಿನೂ ತಮ್ಮನಂತೆ ಸಾಕಿದ್ದೆನಲ್ಲ, ನಾನು ಹೇಗೆ ಬಿಟ್ಟ ಬರಬೇಕು." ಹೇಳಿ ಬಾಲ ದುಃಖ ಮಾಡಿದ. "ಹೆರಿಮನಸತಿ ತಾಯಿ ಹೇಳಿದ ಮಾತು ಮೀರೂಕೆ ಬತ್ತೀದೋ?" ಅಡಿಗೆ ಮಾಡಿಕಂಡಿ ತಾಯಿ ಏನಂತು? "ಊಟಕೆ ಬನ್ನಿ ಹೊತ್ತಾಯ್ತು" ಹೇಳಿತು. "ಹಬ್ಬಕೆ ಹೋಪೋರಿಗೆ ಹೊತ್ತಾಯ್ತು." "ತಂಗಿ ಬಟಕಲಪೇಟೇಲಿ ಬಶಪ್ಪನ ಹಬ್ಬ ಆತೀದು. ಹಬ್ಬ ನೋಡಿ ಬರವ" ಹೇಳಿ ಅಣ್ಣ ಹೇಳಿದ. ತಂಗಿ ಕಬೂಲ ಬಿಟ್ತೂ. ನಂತ್ರ ಅಣ್ಣ ತಂಗಿ ಸಾನ ಮಾಡದ್ರು, ದೇವರ್ ಪೂಜೆ ಮಾಡಿದರು. ತಾಯಿ ಬಡಿಸಿತು, ಊಟಕೆ ಹೋದರು. ದುಕ್ಕ ಮರುದಿಲ್ಲ. ನಾಲೆ ನದರಿಗೆ ಕಾಣುದಿಲ್ಲ. ತಂಗಿ ಹೇಳಿ, ಅಣ್ಣ ಬಾಶಿ ಬಾಯಿಗೆ ಹಾಕಿದ. ಬಾಯಿಗೇ ಹೋನಿಲ್ಲ. "ಥತ್" ಅಂದ. ಮತ್ತಂದ್ ತುತ್ತ ನೆಗಿದ. ಕೈಯಿಂದ ಬಿತ್ತು. ದುಕ್ಕ, ತಂಗಿ ಊಟ ಮಾಡತೀದು. ತಂಗಿ, "ನಿನ್ನ ಕಣ್ಣಲ್ಲಿ ಯಂತಾ ನೀರು? ಊಟಕ್ಕೆ ಕುಂತಾಗೆ?"

ಕೇಲಿತು. "ಹಳೆಯಾರು ಪರೇಕದಲ್ಲಿ ಕಟ್ಟಿದ ಮನೆ, ಕಣ್ಣಲ್ಲಿ ಕಶ ಬಿದ್ ಹೋಯ್ತು ಕಣ್ಣ ತಿಕ್ಕಂಡೆ" ಅಂದ. ಊಟ ಮುಗಿದ ಬಳಿಕೆ ದುಸ್ತ ಇಟ್ಟರು. ಅಣ್ಣ-ತಂಗಿಗ್ ತಾಯಿ ರೊಟ್ಟಿ ಬುತ್ತಿ ಕಟ್ಟಿಕೊಟ್ಟು. ತಕಂಡಿ ಹೈಟ್ ಹೋದರು. ಹೋಗು ಶಮೆದಲ್ಲಿ ದಾರಿ ತಡೆದು ತಂಗಿ, "ಕುಡಿವ ಅಂದರೆ ನೀರಿಲ್ಲ. ಬಿಶಿಲಾಯ್ತು ತಂಪ ಅರಸುವ ಅಂದರೆ ತಂಪಿಲ್ಲ" ಅಂತು. "ಮೈಲ ದಾರಿ ಮುಂದೆ ಜಾತ್ರೆ ಬರತೀದೂ, ಬಹಲ ದೂರಿಲ್ಲ" ಅಂದ. ರೊಟ್ಟಿ ಬುತ್ತಿ ಉಂಡಿ, ತಾಪ ತಣಿದು ಒಂದ ಪರ್ಲಾಂಗ ದೂರ ಮದಗ ಕಾಣ್ತು. "ಕೈಕಾಲು ಮೋರೆ ತೊಳೆದು ಹೋಪ" ಅಂದ. "ಮದಗದಲ್ಲಿ ಕೈಕಾಲ ತೊಳೆ," ಊಟ ಮಾಡಿ ಕಟ್ಟೆ ಮೇನೆ ಕೂತು ಕವಲ ಹಾಕಿದ. ಆಸಾದ್ ತಕಂಡ್ ಹೋಪ ಅಂದಿ ಕಂಬಲ-ಗಿಂಬಲಿ ಹಾಸಿಕಂಡಿ ಬಿದ್ರು. ತಾಪಿನ ಗಾಲಿವಗಿತು ನಿದ್ರೆ ಬಂದ್ ಹೋಯ್ತು. ತಂಗಿಗೆ ಅಣ್ಣ ಎದ್ದಿ ಕಾಲಕಟ್ಟ, ಕಣ್ಣ ಕಟ್ಟ, ಅಲ್ಲೇ ಬಿಟ್ಟಿಗ್ ಮನೆಗೆ ಬಂದ ಬಿಟ್ಟ. ತಾಯಿ ಕೈಲಿ, "ಬಟಕಲ ಜಾತ್ರೆಗೆ ಹೋಗಿ ತಂಗೀನ ಬಿಟ್ ಬಂದೆ" ಹೇಳ್ದ. ನಿದ್ರ ಹಂಬಲಾಗ ತಂಕ, 'ಅಣ್ಣ ಅಣ್ಣ' ಅಂತ ಮರಗತೀದು. "ಎಲ್ಲು ಅಣ್ಣನೇ ಕಾಂಬೂದಿಲ್ಲ." ಅಂತ ತೀಡತೀದು, "ಅಡವಿ ಪಾಲಾಗಿ ಹೋದೆನಲ್ಲ್ವೋ" ಅಂದ ವ್ಯಥೆ ಮೇನೆ ಉಲಿತಿದು. "ಕಾಲ ಬಿಚ್ಚಿದವನ ಮನೇಲಿ ಶಗಣೆನಾದರೂ ತೆಗೀತ ಉಲಿತಿದ್ದೆ, ಕಣ್ಣ ಬಿಚ್ಚಿದವನ ಕಲ್ಯಾಣಾಗತಿದ್ದೆ" ಹೇಳ ಮರಗತ ಉಲಿತು. ಆಗ ಪಾಂಡವರು ಏಳ್ ಜನರು,  ಕಿರಿಯವನಿಗೆ ನಗ್ನಾಗನಿಲ್ಲ. ಆರ್ ಜನ ನಗ್ನಾಗಿತ್ತು. ನಿತ್ಯದಲ್ಲೂ ಸೋರ(ಮಿಗ) ಬೇಟೆಗೆ ಹೋಗತಿದ್ರು. ಮದಗಕ್ಕೆ ಮಿಗ್ ಬತ್ತಿದು ತಿರಗಿ ನೋಡಿದರು. ಏನೂ ಕಾಣ್ಣಿಲ್ಲ. ಕೆಲಗೆ ನೋಡವ ಹೇಳಿ ಮದಗಕ್ಕೆ ಬಂದರು. ಬರುತಂಕ್ ಹೆಣ್ಣ ಬಿಟ್ಟಿಕ್ ಹೋಗಿರು. ಮಾತಾಡಿಸಬೇಕಲ್ಲ, "ಯಾವೂರಾಯ್ತು? ಏನತಾನ?" "ನನ್ನ ಕಾಲ ಬಿಚ್ಚಿದವನ ಮನೇಲಿ ಶಗಣಿ ತೆಗೆತೆ" ಅಂತ ಅಂತು. "ಕಣ್ಣ ಬಿಚ್ಚಿದವನಿಗೆ ನಗ್ನಾಗ್ತೆ" ಅಂತು ಹಿರಿ ಅಣ್ಣ ಕಿರಿತಮ್ಮಗೆ, "ನೀನು ಬಿಚ್ಚು, ಯಾವ ಜಾತಿ ಹೆಣ್ಣಾಗಲಿ" ಅಂದ. ಕಿರಿ ತಮ್ಮ ಕಣ್ಣು, ಕಾಲು ಬಿಚ್ಚಿದ, "ನಿನ್ನ ಇಂಥ ಅಡವ್ಯಲ್ಲಿ ಬಿಟ್ಟು ಹೋದವರು ಯಾರು? ಕಲು ಮಾಡಿದೆಯಾ? ಹಾದರಾಡಿದಿಯೋ? ಮದುವೆಯಾಗಿದೆಯೋ? ಇಲ್ಲವೊ" ಕೇಲ್ದರು.

"ನನಗೆ ಮದಿವೆಯಾಗನಿಲ್ಲ. ಅಣ್ಣ ಬಟಕಲ ಜಾತ್ರಿ ನೋಡ ಬರವ ಅಂದಿ ವಿಶ್ವಾಸದ ಮಾತ ಹೇಳಿ ಕರಕಂಬಂದಿ, ಈ ಕಟ್ಟೆದೊಲಗೆ ಕಾಲು, ಕಣ್ಣು ಕಟ್ಟಿ ಬಿಟ್ಟ ಹೋದ, ಜಾತ್ರಿಗೇ ಕರ್ಕ ಹೋಗ್ನಿಲ್ಲ" ಅಂದಿ ಹುಡುಗಿ ಹೇಳ್ತು.

ಅವರು ರಾಜನ ಹುಡುಗಿಯೇ ಅಂದಿ ತಿಲಿದರು. ಕಿರಿಯ ಕಾಲು, ಕಣ್ಣ ಬಿಚ್ಚಿದ, ಶೇಜದ ಮೇನೆ ಕುಳ್ಳಿರಿಸಿಕೊಂಡು ಮನೆಗೆ ಹೋದರು. ತಾಯೀಗ್ ನೀರ್ ತಕಂಡ್ ಬರತಿತ್ತು. ಅಣ್ಣ, "ನಾವು ಏಲ ಮಂದಿ ಹೆಣ್ಣ ತಂದಿರು" ಅಂದರು. ನೀವು ಹಣ್ಣ ತಂದರೆ ಏಳ್ ಮಂದಿನೂ ಕೊಯ್ದು ತಿಂದ ಬನ್ನಿ" ಹೇಳಿ ತಾಯಿ ಹೇಳಿತು. "ತಾಯೀ, ಹಣ್ಣಲ್ಲ, ಹೆಣ್ಣು ಕಿರಿಯವಗೆ ತಕಂಬಂದಿರು" ಅಂದ ಅಣ್ಣ. "ಹೆಣ್ಣ ತಂದರೆ, ಕಿರತಮ್ಮನಿಗೆ ನಗ್ನ ಮಾಡ್ವನಿ" ಅಂತು. ಜಾತಿಯಂತೆಯೇ ನಗ್ನ ಮಾಡಿದರು. ಕಿರತಮ್ಮಗೆ ಕೊಟ್ಟರು. ಶಂದದಿಂದ ಉಲಿಕೊಂಡರು.

● **ಕೆಲವು ಪದಗಳ ವಿವರಣೆ**

ಮದಿ = ಮದುವೆ
ನಾಲೆ = ಊಟದ ಎಲೆ
ಪರೇಕ = ತೆಂಗಿನ/ಅಡಕೆಯ ಗರಿ
ಅಸಾದ್ = ಅರಾಮ
ಕಲ್ಯಾಣ = ಮದುವೆ
ಸಾನ = ಸ್ನಾನ
ನದರು = ದೃಷ್ಟಿ
ಮದಗ = ಕೆರೆ
ತಾಪ = ಬಿಸಿಲು
ಶೇಜ = ಕುದುರೆ

▪ ಹೇಳಿದವರು: **ದುಗ್ಗೂರು ಕುಪ್ಪಗೌಡ**

❖

# ಧರ್ಮ ಹೆಚ್ಚೋ ಪುಣ್ಯ ಹೆಚ್ಚೋ ?

ಈಸ್ವರ-ಪಾರ್ವತಿ, "ದೇಸ ಸಂಚಾರವಾಗಿ ಹೋಗಬೇಕು" ಹೇಳಿ ಹೊರಟರು. ಹೊರಡತಾ ಇರಬೇಕಿದ್ರೆ ಹೀಗೇ ವಂದು ಅಡವಿಯೊಳಗೆ ಹೊಕ್ಕಂತಾ ಹೋದ್ರು. ಅವರಿಗೆ ವಳಿಲಿಕ್ಕೆ ಯಲ್ಲೂ ಜಾಗ ಶಿಕ್ಲೇ ಇಲ್ಲ. ಅಲ್ಲೇ ವಂದು ಬಟ್ರ ಹೆಂಗ್ಸೂ, ವಂದ್ ಮಗ ಇದ್ರು. ಇದ್ರೇ ಅವರು ಅಲ್ಲೇ ವಳಕೊಂಡ್ರು. ವಂದಿವ್ಸ ವಳದ್ರು. ಯೆಯಡ್ ದಿವಸ ವಳದ್ರು.

ಮೂರನೇ ದಿವಸಕ್ಕೆ ಹೊರಗ್ ಬಿದ್ ಬರಬೇಕಾದ್ರೆ ಪಾರ್ವತಿ ಈಸ್ವರನ ಹತ್ರ ಅಂತು, "ನಾವು ಒಂದು ಮೂರು ದಿವಸ ಇದ್ರು. ಇವರ ಮನೆ ಕೂಳ್ ತಿಂದ್ರು. ಹಾಗೇ ಹೋಗಬೇಕಾಯ್ತಲಾ" ಹೇಳುಕೊಂಡಿ ಪಾರ್ವತಿ ಅಂತು. "ಈ ಹುಡ್ಗನೀಗೆ ನಾವು ಯೇನಾದ್ರೂ ವಳ್ಳೇದ ಮಾಡೇ ಹೋಗ್ ಬಿಡ್ವಾ. ಇನ್ ಮುಂದೆ ಈ ಹುಡ್ಗ ವಳ್ಳೇದ್ ಹೇಗಾಗುದು?" ಹೇಳಿ, "ಇವನಿಗೆ ವಂದ್ ಲಗ್ನ ಮಾಡಿಕ್ಕೇ ಹೋಗಬೇಕು" ಹೇಳಿ, ಹರಿಹರ-ಬ್ರಹ್ಮ ಯೆಲ್ಲವರೂ ಒಟ್ಟಾಗಿ. ಹೀಗೇ ವಂದ್ ಮನಿಗ್ ಹೋಗಿ ಹೆಣ್ ನಿಚ್ಚಯ ಮಾಡಬಂದ್ರು. ನಿಚ್ಚಯ ಮಾಡ್ ಬರಬೇಕಿದ್ರೆ– 'ನಾಳೆ ಲಗ್ನ ಇವರು ಯೆಲ್ಲಾ ಸಂಗ್ರ್ಯ ತಯಾರ್ ಮಾಡಿ ದಿಬಣ ಹೊರಡಿಸಬೇಕಾಯ್ತಲ್ಲಾ?'

ಆವಾಗೆ, ಈಶ್ವರ ಕೇಳ್ದ, "ಇದರೊಳಗೆ ಧರ್ಮ ಹೆಚ್ಚೋ? ಪುಣ್ಯ ಹೆಚ್ಚೋ?" ಕೇಳ್ದ. ಪಾರ್ವತಿ, "ಧರ್ಮವೇ ಹೆಚ್ಚು" ಹೇಳ್ತು. ಆಗ ಅಲ್ ವಳದವರೆಲ್ಲ, "ಧರ್ಮ ಯೆಂದಿಗೂ ಹೆಚ್ಚಲ್ಲ... ಪುಣ್ಯವೇ ಹೆಚ್ಚು" ಹೇಳ್ತ್ ಹೇಳದ್ರು. ಅದು, 'ತಾನೇ ಹೇಳದ್ದ್ ಕರೆ' ಅಂತ ಹೇಳ್ಕೊಂಡ್ತು. ಅವನಿಗೆ ಬಾಸಿಂಗ್ ಕಟ್‌ಕೊಂಡಿ ದಿಬಣ ಹೊರಡ್ಸ್‌ಕಂಡ್ ಹೋದ್ರು. ಹೋಗಿ ಹುಡ್ಗನಿಗೆ ಕನ್ನೆದಾನ ಆಯ್ತು. ಆವಗ ಬಂದ್ರು. ಪಾರ್ವತಿ ತಳಗಿ ಹಿಡಿದಿತ್ತಲ್ಲ?

ದಿಬ್ಬಣ ಮನೆಬಾಗ್ಲ, ಮೆಟ್ ಹತ್ ಬೇಕಿದ್ರೆ ಅದ್ ಹೇಳ್ತು, "ಆ ಹುಡ್ಗನ ಪೂರ್ವದ ಪುಣ್ಯವೇ ಹೆಚ್ಚಿನ್ದಾಗಿತ್ತು."

ಇವರೆಲ್ಲಾ ಕೂಡ್ದವರು. "ನಾವು ಹೇಳಿದ್ದೆ. 'ಪುಣ್ಯವೇ ಹೆಚ್ಚಿನ್ದು' ಹೇಳೀರು. ಈಗ ನಿನ್ನ ಬಾಯಿಂದೇ ಬಂತು" ಹೇಳ್‌ದ್ರು.

- **ಕೆಲವು ಪದಗಳ ವಿವರಣೆ**

ಸಂಗ್ರಯ = ಸಂಗ್ರಹ
ದಿಬಣ = ದಿಬ್ಬಾಣ
ತಳಗಿ = ಬಿತ್ತಕ್ಕಿ

(**ಟಿಪ್ಪಣಿ :** ಧರ್ಮ ಕಾರ್ಯದ ಫಲವು ಮುಂದಿನ ಜನ್ಮಕ್ಕೆ ಹಿಂದಿನ ಜನ್ಮದ ಪುಣ್ಯ ರೂಪದಿಂದ ದೊರೆಯುತ್ತದೆ ಎಂಬ ನಂಬಿಕೆಯಿರುವುದರಿಂದ ಹುಡುಗನ ಪೂರ್ವ ಪುಣ್ಯದ ಫಲ ಈ ರೀತಿ ಬಂತು ಎಂದು ತಿಳಿಯುವದು)

▪ ಹೇಳಿದವರು: **ಶ್ರೀ ಚೇಪ ತೊಳಶು ಗೌಡ ಅಘನಾಶಿನಿ,**
ಆಗ 62 ವರ್ಷ, ತಕ್ಕೊಂಡ ದಿನಾಂಕ 28-9-90.

❖

# ದಾನ ಅಂದರೇನು? ಧರ್ಮ ಅಂದರೇನು?

ವಂದ್ ಊರಲ್ಲಿ ವಂದ್ ಬಟ್ಟ, ಬಡ್ತಿ ಇದ್ದಿರು. ಇದ್ ನಂತ್ರ ಅದ್ ತುಂಬ್ದ್ ಗರ್ಭಿಣ್ಯಾಯ್ತು. ಆಗ ಹಡೆದ್ರು ಬಟ್ರ ಹೆಂಡ್ತಿ.

ಹಡ್ದು ವಂದ್ ಹುಡ್ಗ ಹುಟ್ದ. ಹುಡ್ಗ ಹುಟ್‌ದ ನಂತ್ರವಾ ಬಟ್ರು ತೀರ್‌ಕಂಡ್ರು. ತೀರ್‌ಕಂಡ್ರು ನಂತ್ರವಾ ಹೊಟ್ಟಿಗಿಲ್ಲ. ಯೆಲ್ಲ ಅಂದಿ ದಿನಾ ವಂದ್ ಮನೆ ಬಿಕ್ಸಕೆ ಹೋದ್ರು. ತಂದ್ಕಂಡಿ, ಅಬ್ಬಿ- ಮಾಣಿ ಅಡ್ಗಿ ಮಾಡ್ ಊಟ ಮಾಡ್ತ್ ವಲ್‌ದ್ರು. ಆಗ ಚುಮಾರ್ ದೊಡ್ಡಾದ ಮಾಣಿ.

ದೊಡ್‌ಕಾದ ನಂತ್ರ, ''ಅಬ್ಬೀ, ನೀ ಯೆಲ್ ಹೋತೆ?'' ಕೇಲ್ದ. "ನಾನ್ ಹೀಗೇ ಊರ್‌ಮೇಗ್ ಬಿಗ್ಸ್‌ಕ್ ಹೋತೆ" ಹೇಳ್ತು. "ಹಗರ್ ನನಗೂ ವಂದ್ ತಟ್ಟೆ, ಹುಟ್ಟು ಕೊಡು. ನಾನೂ ನಿನ್ ಬೆನ್ಗೆ ಬತ್ತೆ." ಆಗ, "ನಿಮ್ಮಪ್ಪರದೀತು" ಹೇಳ್ ತಟ್ಟೆ-ಹುಟ್ಟು ಕೊಟ್ತು.

ಆಗ ತಗಂಡ್ ಮಾಣಿ ಊರ್‌ಮೇನೆ ಬಿಕ್ಸ ಬೇಡೋಕೆ ಹೋದ. ವಂದುಡ್ಡು-ದಂಬ್ಡಿ ತಂದ. ತಾಯಿ ಕೈಲ್ ಕೊಟ್ಟ. ಕಡಿಗೆ ಚುಮಾರ್ ದೊಡ್ಡಾದ. ದೊಡ್‌ಕಾದ ನಂತ್ರ, "ನನ್ನ ದುಡ್ಡು ದಂಬ್ಡಿ ಕೊಡು" ಅಂದ ತಾಯಿ ಕೈಲಿ. "ವಂದ್ ದುಡ್ ಕರ್ಶೆ ಮಾಡ್ದೆ. ದಂಬ್ಡಿ ಬಂದರೂ ದಾನ- ಧರ್ಮ ಮಾಡ್ದೆ". ಹಾಗೇ ಕೇಲ್ತ, "ದಾನ ಹೇಗೆ? ಧರ್ಮ ಹೇಗೆ?" "ಪದೇ ಪದೇ ಕೇಲ್ಬೇಡ ಮಾಣಿ, ಯೇನ್ ಪದೇ ಪದೇ ಕೇಲ್ತೆ? ದಾನ ಹೇಗೆ ಧರ್ಮ ಹೇಗೆ? ನಿನ್ ಪಡದ ಪರಮಾತ್ಮನಿದ್ದಲ್ ಹೋಗಿ ಕೇಲ್ಕಂಬಾ" ಅಂತಿ ಯೆಡಗೈಲ್ ದೂಕ್ ಹಾಕ್ ಬಿಡ್ತು.

ಮಾಣಿ ಇತ್ತಾಗ ಬಪ್ಪುತ್ಲೂ ಊಟ ಮಾಡ್ಕಂಡ್ ಶುಕದಲ್ ವಲಿತು ಅದು. ಆ ಮಾಣಿ ಬಂದ್ ಬಂದ್ ಗೊರಾಣ ಬಿಡ್ಡಿಲ್ ಬಿದ್ ಬಿಟ್ಟ. ಅಡ್ವೆಲ್ ಬಿದ್ ನಂತ್ರವ ಯೆಯಡಾಲ್ ಕಲ್ಲ ಕಲ್ಲನ ಹಿಂಡ್ತಿ ಇದ್ರಲ್ಲಿ, ಹೀಗೇ ಮೂರ್ನ ಮೇನ ಯೆಯ್ದು ಹಲ್ಗೆ ಹಾಶ್ಕಂಡಿ, ಅಲ್ಲೇ ಅವರ ಮನ್ಗ್ ವೋರು. ಅವ್ರ ತಿಂಬ್ದ ಯೇನಂದರೆ, ಮೂರ್ ಕಪ್ ಚಾಯ ಮಾಡ್ತಿರು. ಮೂರು ದೋಶಿ ಶುಡ್ತಿರು, ವಂದಂದ್ ಚೂರು ಬಾಗ ತಿಂದ್, ವಂದ್ ಕಪ್ಪು ಅರ್ದ ಕಪ್ಪು ಕುಡಿತ್ರು.

ಮಾಣಿ ಗೋರಾಣದಲೆ ಹೋಗೆ ಬಿದ್ಕಂಡ್, "ಯಾರಪ್ಪಾ, ನಂಗ್ ಬಗೇಲ್ ಮೇನೆ ಹತ್ಸಕಣಿ" ಅಂದ.

ಆವಾಗೆ, ಕಲ್ಲನ ಹಿಂಡ್ತಿ, "ಇಲ್ ಜಾಗಿಲ್ಲ; ಹುಡ್ಗನ ಮೇಲೆ ಕರ್ಕಂಬ್ದೇ ಬೇಡ" ಅಂತು. ಕಡಿಕಿ ಕಲ್ಲ, "ಇಲ್ಬಾ ತಮ್ಮಾ..." ಹೇಳಿ ಮೇನೆ ಕರ್ಕಂಡ. ಕರ್ಕಂಡಿ ಹಲ್ಗಿಮೇನ್ ಕುಲ್ಸ್ ಕಂಡ. ಕುಲ್ಸ್ ಕಂಡಿ, ಆಮನಿಗೆ, 'ವಂದ್ ಕಪ್ ಚಾಯು, ವಂದ್ ದೋಚಿ ಕೊಡು' ಅಂದ. ಹಿಂಡ್ತಿ, 'ನನ್ ಪಾಲ್ ಕೊಡ್ಬೇಡ' ಅಂತು.

ಆಗ ಕಲ್ಲ ಅದ್ಕೆ ಲಟ್ ಶರಿ ಮಾಡ್ ಕೊಟ್ಟ. ವಂದ್ ದೋಶೆ ಚೂರ್ ತಾ ತಿಂದ. ವಂದ್ ಆ ಮಾನಿಗೆ ಕೊಟ್ಟ ಕಲ್ಲ.

ಕಡಿಕಿದ್ದಿ ಆವಾಗೆ ವರ್ಗದ್ರು. ಮಾಣಿ ನೆಡ್ಗೆ ಮನಿಸುವಾ ಹೇಳ್ದ. ಅದ್ ಯೇನ್ ಹೇಳ್ತು? "ನನ್ ಜಾಗಿಲ್ ನಾನೇ ಮನ್ಗ್ತೆ, ಹುಡ್ಗನ್ ಬದಿಲ್ ಮನ್ಗ್ ಶವಾ" ಅಂತು. ನೆಡ್ಗೆ ಮನ್ಗ್ತು. ಕಡೆಗಿಬ್ರು ಮನ್ಗ್ದ ಹಲ್ಗಿ ಮೇನೆ. ಮನ್ಗ್ದ ನಂತ್ರವಾ ಮಾಣಿ ಹೊಲ್ಲಿ ಮೇನ್ ಮಲ್ಕಂಡ. ಗಂಡ-ಹಿಂಡ್ತಿ ಕೆಲ್ಗೆ ಅಡವ್ಯಲ್ ಬಿದ್ರು. ಕಲ್ಲನ ಹುಲಿ ತಿಂತು; ಹೆಂಡ್ತೀನಾ ನರಿ ತಿಂತು. ಹಾಗೆ ಬೆಲ್ಗಾಯ್ತು.

ನೋಡ್ದ. 'ಹರಹರ, ನಾನ್ ಬಂದ್ ಮನ್ಗಿ ಅವ್ರ್ ಯೆರಡಾಲು ಹುಲಿ, ನೆರಿಪಾಲಾದ್ರಲ' ಅಂದ. ಅಂದ್ ಕಂಡಿ, ಹಲ್ಗೆ ಕೆಲಗಿಲ್ದ್ ಬಂದ. ಅಲ್ಲೇ ಮುಂದ್ ಬಂದ. ಮುಂದೆ ಬರುಕಾಗೆ, ವಂದ್ ಅರಶು ಮನಿತ್ತು. ಅರಶನ ಮನೇಲಿ ವಂದ್ ಹುಡ್ಗಿತ್ತು. ದಾತ್ರೆಗೆ ಹನಿ ನೀರಿಲ್ಲ. ಹಗ್ಲಿಲ್ ನೀರು ಶಂಪ್ನಲ್ ಆಗ್ತಿದು. 'ಮಾನಿ, ಯೆಲ್ ಹೋತೆ?' ಕೇಲ್‌ದ್ರು. "ಪರಮಾತ್ಮನ ಬಲಿಗ್ ಹೋತೆ ನಾನು" ಅಂದ. "ಹಂಗಾರ್ ನಮ್ದೂ ವಂದ್ ಇಚಾರಣೆ ಕೇಲು ದಾತ್ರಿಗ್ ನೀರಿಲ್ಲ. ಹಗ್ಲತ್ ನೀರ್ ಶಂಪ್ನಲ್ ಆಗ್ತಿದು" ಅಂದು.

"ನಾನ್ ಕೇಲ್ಕಂಡ್ ಬತ್ತೆ" ಅಂದ. ಮುಂದೆ ಹೋದ ಮಾಣಿ. ಮುಂದ್ ಹೋಪೆಕಾರ್, ಯಯ್ಡ್ ಶಂಪ್ಗೆ ಮರ ಇತ್ತು– ವಂದು ಹುಲ್ಕ್ ಶಂಪ್ಗೆ ಮರ; ವಂದು ದನಾ ಶಂಪ್ಗೆ ಮರ.

ಮಾಣಿ ಹೋಗೆ ಬುಡ್ಕೆ ನಿತ್ತ. "ಬಟಾ, ನೀನ್ ಯೆಲ್ ಹೋತೆ?" ಕೇಳ್ದ್ರು. "ನಾ ಪಡ್ಡ ಪರಮಾತ್ಮನಿದ್ದಲ್ ಹೋತೆ" ಅಂದ. "ಹಗರ್ ನಮ್ಮದೊಂದ್ ಇಚಾರಣೆ ಕೇಲ್ಕ ಬಾ" ಅಂದ್ರು. 'ವಂದ್ ಶಂಪ್ಗೆ ಮರ ಹೊಂಗ್ ಕೊಯ್ತಿರು. ವಂದ್ ಶಂಪ್ಗೆ ಮರ್ನ ಹೊಂಗ ಕೊಯ್ಯುದಿಲ್ಲ ಯೆಂತಕ್ಕ? ಕೇಲ್ಕ ಬಾ' ಅಂಬೂತನ್ನೆ, ಇವ- 'ಕೇಳ್ಕ ಬತ್ತೆ' ಅಂದ್ಕಂಡಿ ಮುಂದ್ ಹೋದ.

ಮುಂದೆ ಹೋಪಾಗೆ ವಂದ್ ಮಾಶೇಶ ಶಿಕದ್ದು. "ಮಾಣಿ, ನೀ ಯೆಲ್ ಹೋತೆ ?" ಕೇಲ್ತು. "ನಾನ್ ಪಡ್ಡ ಪರಮಾತ್ಮನ ಬಲಿಗ್ ಹೋತೆ" ಕೇಲ್ತು. "ನಾನ್ ಮುದ್ಕಾದೆ. ನನ್ನ ಪರಾಣ್ ಹೇಗೆ ಹೋಗುದು? ಕೇಲ್ಕಬಾ" ಅಂತು. 'ಹೂಂ' ಅಂದ. ಮುಂದ್ ಹೋದ.

ಕಡೆಗೆ, ಪರಮಾತ್ಮನ ಬಲಿಗೆ ಹೋದ. ಪರಮಾತ್ಮನ ಬಲಿಗೆ ಹೋದಾಗ ಅವ್ರೇ ಮನಿಲಿಲ್ಲ. ರಾಜ್ಯ ಚಂಚರಣಿಗ್ ಹೋಗಿರು. ಅವರ ಮನೇಲಿ ಬಿಶ್ಲಲ್ ಕರ ಇತ್ತು. ಆ ಕರ ತಕೊಂಡೋಗಿ ತಂಪ್ನಲ್ ಕಟ್ಟದ. ಕಡೆಗೆ ಅಲ್ಲೆಲ್ಲ ಕಚ ಬಿದ್ದಿತ್ತು. ವಡಗದ. ಶೊಕ್ಕ ಮಾಡ್ದ. ಶೊಕ್ ಮಾಡ್ಕಬಂದ್ ಕಂಬನ್‌ದ ವಡೆಲಿ (ಜಂತಿವಲ್ಗೆ) ಹೊಕ್ಕಂಡ.

ಪಾರ್ವತಿ-ಪರಮೇಶ್ವರ್ರು ರಾಜ್ಯ ಸಂಚರಣಿಗ್ ಹೋಗಿ, ಮನೆಗ್ ಬಂದ್ರು. ಮನೆಗೆ ಬರುರೊಲ್ಗಾಗೆ, "ಅಬಾ! ಇಂದ್ ಯಾರೋ ನರಮನಶ ನನ್ ಮನೆಗ ಬಂದ್ಯ." ಅಂದ್ ಹೇಳಿ, ಪಲ್ಲಂಗದ ಮುಂದೆದ ಮೇನೆ ಕುಲ್ತಿರು. ಮಂಚದ ಮೇನ್ ಕುಲ್ತ್ ನಂತ್ರ, "ಗಂಡಾದ್ರೆ ಬಲ್ಕನ ತೊಡೆಮೇನೆ ಬಂದ್ ಕುಲ್‌ಬೇಕು. ಹೆಣ್ಆದ್ರೆ, ಯಡ್ಕನ ತೊಡೆಮೇನ ಬಂದ್ ಕುಲ್‌ಬೇಕು." ಇವ ಹೋಗೆ ಬಲ್ಕನ ತೊಡೆ ಮೇನೆ ಕೂತ.

"ಯಾ ಕಾರಣದಿಂದ ಬಂದೆ ತಮಾ?" ಕೇಳ್ದ್ರು. "ಶನ್ನಕಿರುವಾಗೆ ಅಪ್ಪಯ್ಯನವರು ತೀರ್‌ಕಂಡ್ರು. ನಾನ್ ಊರ್ ಮೇನ್ ಬಿಗ್ಸಕ್ ಹೋದೆ. ತಂದ್ ಅವ್ವನ ಕೈಲ ಕೊಟ್ಟೆ. ದುಡ್ಡು-ದಮಡಿ ಕೊಡು ಹೇಳ್ದೇ. ಕೊಡು ಹೇಳ್ದ ನಂತ್ರ 'ವಂದ್ ದುಡ್ ಕರ್ಶ ಮಾಡ್ದೆ'. 'ವಂದಮ್ಡಿ ದಾನ-ಧರ್ಮ ಮಾಡ್ದೆ' ಅಂತು. 'ದಾನ ಹೇಗೆ ? ಧರ್ಮ ಹೇಗೆ' ಕೇಲ್ದೆ. 'ಹೋಗು ನೀನ್ ಪಡ್ಡ ಪರಮಾತ್ಮನದಲ್ ಹೋಗ್ ಕೇಲು' ಅಂತು. ಪರಮಾತ್ಮನ ಬಲಿಗ್ ನಾನ್ ಬಂದೆ." "ನಿನ್ ಇಚಾರ್ಣೆ ನಾ ಹೇಳೂದಿಲ್ಲ. ನೀ ಹೋಗ್ ಹೊಕ್ದ ನಂತ್ರವಾ ಅರಶುಮನೆದಲ್ಲಿ ಅರಶು ಹೆಂಡ್ತಿ ಹಡೆತಿದು. ಆ ಹುಟ್ಟೊ ಶಿಶು ಕೈಲ್ ನೀನು ಈ ಇಚಾರ್ಣೆ ಕೇಲು."

ಆಗ, "ನನ್ ಇಚಾರ್ಣೆ ಅಲ್ ಕೇಲೋದಾಯ್ತು ಸ್ವಾಮ್ಯೋರೇ, ಮತ್ತ ವಂದ ಇಚಾರ್ಣೆ ಈತು. ಕಡೆಕಿದ್ದಿ ವಂದ್ ಅರಶೂ ಮನೇಲಿ ರಾತ್ರಿಗೆ ನೀರ್ ಆರ್ ಹೋತಿದು. ಹಗಲಿಗೆ ನೀರ್ ಶಂಪ್ನಲ್ ಆತಿದು. 'ಅದ್ ಯಾವುದರ ಶಲ್ವಾಗಿ ಕೇಲ್ಕ ಬಂದಿ ಹೇಳು' ಹೇಳಿರು."

“ಹಾಗಾದ್ರೆ, ಅವ್ರ ಮನೇಲಿ ವಂದ್ ಹದ್ನಾರ್ ವರ್ಶದ್ ಹೆಣ್ಣೀತು. ಅದ್ನ ಯಾರದಾದರೂ ಕೈದಾರೆ ಯೆರೆಯಬೇಕು ಹಗ್ಲೆ-ದಾತ್ರೆ ಶಂಪ್ನಲ್ ನೀರ್ ಆಕ್ತಿದು. ”

“ಆ ಇಚಾರ್ಣೆ ಆಯ್ತು. ಶ್ವಾಮ್ಯೋರೇ, ಮತ್ತೂ ವಂದ್ ಇಚಾರ್ಣೆ ಈತು. ಮತ್ತೆ, ವಂದ್ ಯೆರ್ಡ್ ತರ್ದಲ್ಲಿ, ಶಂಪ್ಗೆ ಮರ ಈತು, ವಂದ್ ಮರನ ಹೂಂಗು ಹುಲ್ಕ್ ಹೂಂಗು, ವಂದ್ ಮರನ ಹೂಂಗು ಯೆಲ್ಲಾ ಕೊಯ್ತಿರು. ವಂದ್ ಮರನ ಹೂಂಗು ಯಾರೂ ಕೊಯ್ಯುದಿಲ್ಲ. ಅದ್ ಯಾವ ಶಮಂದವಾಗಿ? ಕೇಲ್ಕ ಬಾ? ಹೇಳಿರು. ”

“ಮತ್ತೆ ಅದು ಬಿರಾಮಣ್ರಾಗಿತ್ತು. ಬರಶರ ಕಲ್ತಿದ್ರು. ಯಾರಿಗೂ ಅವ್ರು ಹೇಳ್ ಕೊಡ್ಲಿಲ್ಲ. ಈಗೆ ಮೂರ್ ಹೊಂಗ ಕೊಯ್ದಿ, ವಂದ್ ಕೊಡಿಯೆಲೆ ತರಬೇಕು. ಮೂರ್ ಹೊಂಗ ಕೊಯ್ದಿ ಕೊಡಿಯೆಲೆ ಮೇನ್ ಇಟ್ ಕಂಡಿ, ವಂದ್ ಬಟ್ರ ಮಾಣಿಗೆ ಬರಶರ, ಮಂತ್ರಯೆಲ್ಲಾ ಹೋಗಲಿ ಹೇಳಿ, ತೊಲ್ಚಿನೀರ್ ಬಿಟ್ ಕೊಡ್ಬೇಕು.”

“ಮತ್ತೂ ವಂದ್ ಇಚಾರ್ಣೆ ಈತು”. “ಯೇನು?” “ವಂದ್ ಯೆಪ್ಪತ್ ಹೆಡೆ ಮಾಶೇಶ ಜೀಮ ಹೋಗದೆ ಮುದಕಾಗಿ ಹೊಡಕಾಡ್ತ ಈತು. ಅದ್ ಯಾವ ತರದಲ್ ಶಾಯೂದು?” ಅಂದಾ. ಯೇನ್ ಹೇಳಿದ್ರು ಪರಮಾತ್ಮರು? “ವಂದ್ ಮಾಣಿಗೆ ಆದ್ರ ತಲೆಮೇನ್ನ ವಜ್ರಗುಂಡು, ಅದು-ಇದು ದುರ್ವೆ ಈತು. ತೊಲ್ಚಿ ನೀರ್ ಹಾಕಿ ಬಿಡಬೇಕು. ಮಾಶೇಶನ ಪ್ರಾಣ ಹೋಗ್ತೀದು.”

ಮಾಶೇಶನ ಬುಡ್ಕ ಬಂದ್ ಹೇಲ್ದ್ ಮಾಣಿ. “ಹೀಗೆ ಹೇಳಿದ್ರು ಪರಮಾತ್ಮ” ಹೇಳಿ. “ನೀನು ವಂದ್ ಹನಿ ತೊಲ್ಚಿನೀರ್ ತಂದ್ ಕೊಡು” ಹೇಳ್ತು ಮಾಶೇಶ. ಮಾಣಿ ತಂದ್ ಕೊಟ್, ಕೈ ವಡ್ಡ. ಮಾಶೇಶ ತೊಲ್ಚಿನೀರ್ ಬಿಟ್ತು. ಬಿಟ್ ಗಲ್ಗೇಲಿ ಮಾಶೇಶ್ನ ಪ್ರಾಣ ಹಾರ್ತು. ಆಗೆ ಮಾಣಿ ಅಲ್ಲೇ ಸುಟ್ಟೆ, ಕಿರ್ಯ ಹಿಡ್ದ್ ಬಿಟ್ಟ ಮಾಶೇಶ್ನದು. ಅದು ಮೂರ್ ವಜ್ರಗುಂಡ್ ಕೊಟ್ಟೀದು ಮಾಣಿ ಕೈಲಿ. ಇಲ್ಲೂ ಶಂಪ್ಗೆ ಮರನ ಬುಡ್ಕ ಬಂದ್ ಪರಮಾತ್ಮ ಹೇಳ್ದ ಹಾಗೇ ಹೇಳ್ದ ಮಾಣಿ. “ಮೂರ್ ಹೂಂಗ ಕೊಯ್ದ್ ಬಾಲೆಮೇನೆ ಹಾಕೂದು, ನೆಗ್ದು ಒಬ್ಬ ಬಟ್ರ. ಮಾಣಿ ಕೈಲಿ ಕೂಡೂದು. ಬರಶರ, ಮಂತ್ರ ಅಟ್ಟೂ ಬಟ್ರ ಮಾಣಿಗೇ ಹೋಗ್ಲಿ ಹೇಳು.”

“ಮಾಣಿ, ನಾವ್ಯೆಲ್ಲೂ ಮಾಣಿ ಹುಡ್ಕಾಕ್ ಹೋಗುದಿಲ್ಲ. ನೀನೇ ವಂದ್ ಬಾಲೆಯೆಲೆ ತಕಂಬಾ.” ಅದ್ರ ಮೇನ್ ಮೂರ್ ಶಂಪ್ಗೆ ಹೂಂಗ ಕೊಯ್ದ್ ಹಾಕಂಡಿ ನೆಕ್ಕೊಟ್ರು (ಶಂಪ್ಗೆಮರ). “ಬರಶರ, ನೆಕ್ಕ-ಪಕ್ಕಾ ವಟ್ಟೂ ಮಾಣಿಗೇ ಹೋಗ್ಲಿ. ನನ್ಗೆ ಶಂಪ್ಗೆ ಹೂಂಗು ಆಗ್ಲಿ” ಹೇಳಿ. ಮಾಣಿಗಟ್ಟೂ ಬಂತು– ಬರಶರ, ಮಂತ್ರ ಯೆಲ್ಲಾವ.

ಕಡೆಕೆ ಬಂದ– ಅರಸೂಮನೆಗೆ. “ನಮ್ ಇಚಾರ್ಣೆ ಕೇಲ್ದ್ಯೋ?” ಕೇಲ್ದ್ರು. “ಹೌದು” ಅಂದ. “ಯೇನು ಹೇಳ್ದ್ರ ?”

"ನಿಮ್ ಮನೇಲಿ ವಂದ್ ಹದ್ನಾರ್ ವರ್ಶನ ಹುಡ್ಗಿ ಈತಂತೆ. ಯಾರ್ಗಾದ್ರೂ ಕೈದಾರೆ ಯೆರ್ದು ಕೊಡ್ಬೇಕಂತೆ. ಹಾಂಗೇ ದಾತ್ರಿಗೂ ಶಂಪ್ನಲ್ ನೀರಾಗ್ತೀದು ಅಂದ್ರ." "ಹಾಗೇ ಯೆಲ್ ಹೋಗುದು? ನಿನ್ಗೇ ನಗ್ನ ಮಾಡ್ ಬಿಡ್ತೆ" ಅಂದ್ರು. ಅವಾಗ್ ಅವನಿಗೆ ಆಶ್ರ ಊಟ ಹಾಕ್‌ದ್ರು. ಹಾದಿಗೆ ಶಪ್ಪರ, ಬೀದಿಗ್ ತೋರಣ ಹಾಕಿ ಬೇಲ್ ಬೇಲ್ಕೈಲ್ಲಾ ಶೇರ್‌ಶದ್ರು. ಅರುಶು ಮನೆ ಮದ್ವಿಗೆ ತಮ್ ಮಂದಿ ಅಷ್ಟೂ ಕರ್‌ದ್ರು. ಅಲ್ಲೇ ಮಂಟಪ ಗೆಯ್‌ದ್ರು. ಬಟ್ಟ ಜೋಯ್ಸರ ಯೆಲ್ಲಾ ಕರದ್ರು. ಗರ್ನಾಲು ತಂದ್ಕ ಮನಿಗೆ ತಯಾರ್ಸ್ ಬಿಟ್ರು. ಬಾಶಿಂಗ ಯೆಲ್ಲಾ ಕಟ್ಕಂಡಿ, ಮಂಟಪದಲ್ ಕೂರ್ಸಿ, ಶಿನ್ನ ಶಿಗ್ರೆಯಲ್ಲಾ ಹಾಕಿ, ಬಟ್ಟ ಮಾಣಿ ಕೈಮೇನ್ ಅರಶೂ ಮಗಲ ದಾರೆಯೆರೆದ್ರು. ಬಟ್ಟ ಜೋಯಿಸ್ರಗ್ರೆಲ್ಲಾ ದಕ್ಸಣೆ ಕೊಟ್ಟಿ, ಶಕ್ರೆ ಬಾಳೆಹಣ್ಣು, ಊಟ-ಉಪಚಾರ ಯೆಲ್ಲಾ ಆಯ್ತು.

ಆಗ, "ಮಾವಗೋಲೇ, ನಾ ಬಂದ್ ಬಾರೀ ದಿನಾ ಆಯ್ತು. ನನ್ ಕಲ್ಸಿ ಕೊಡ" ಅಂದ ಮಾವ್ನ ಕೈಲಿ. ಮಾವ, "ವಂದ್ ಗಾಡಿ ಮಾಡ್ತೆ" ಅಂದ. ಬಲ್ವಲಿ, ಬಂಗಾರ ಯೆಲ್ಲ ತುಂಬುಕೆ ಗಾಡಿ ಮಾಡ್ದ. ಗಾಡಿ ತುಂಬ ತುಂಬ್‌ದ್ರು. ಆವಾಗ ಯೇನ ಹೇಳ್ದ ? "ನನ್ಗ್ ವಂದ್ ಗಾಡಿ ಬೇಕು" ಅಂದ. ಮಾವ ತೆಗೆಸ್ ಕೊಟ್ಟ. ದಿಬ್ಣ ಶಂಮ್ರ್ಶಕಂಡಿ, ಬಲ್ವಲ್, ಬಂಗಾರ ಯೆಲ್ಲಾ ಹಾಕಂಡ್ ಬಂದ್ರು. ತನ್ ಗಾಡಿ ತಕಂಡಿ, "ಮಾವ, ತನ್ಗೆ ವಂದ್ ಕುಟಾರೆ ಪಿಕಾಶುನು ಕೊಡಿ" ಅಂದ. "ನಾನಿಲ್ಲೇ ಮಾಶೇಶ್ನ ಕಾಟ ಕರ್ಮ ಹಿಡ್ದಿದ್ದೆ. ಮಾಶೇಶ್ನ ಮನೆ ಕೊಡ್ ಹೋಗ ಬತ್ತೆ." ಅಂದ ಹೋದ.

ಅಲ್ ಹೋಗಿ, ಮಾಣಿ ಗಂಟಟ್ಟೂ ಕುಟಾರಿಲ್ ಬರಗಿ, ತೆಗ್ಚಿ ಗಾಡಿ ಮೇನ್ ವಂದ್ ಕೊಪ್ಪರ್ಗೆ ದುಡ್ ತುಂಬ್ದ. ಹಾಂಗೇಯ ಕೊಪ್ಪರ್ಗಿ ಗಾಡಿಗ್ ತುಂಬ್ದ. ಯೆತ್ ಕಟ್ ಹೊಡ್ಕಂಡ್ ಬಂದ. ಹಿಂಡ್ತಿ ಬಲ್ವಲಿ ಬುಡ್ಕೆ ಅತ್ತೆ-ಮಾವ, ದಿಬ್ಬಣ ಜನ, ದುರ್ವೆಗಂಟು ತಂದ. ಗಾಡಿ ಮುಂದೆ ಮಾಡ್ದ. ಹಿಂಡ್ತಿದ್ನು, ಮಾವಂದು ಗಾಡಿ ಹಿಂದೆ ಮಾಡ್ದ. ಹೋದ ತನ್ ಮನೆಗೆ. ಹೊಡ್ಕಂಡಿ ಹೋಗೂಕಾರೆ, ತಾಯಿ ದೂರಿದ್ದೆ ನೋಡ್ತು. ಆಗ ಇವ್ನ ಯೇನ್ ಮಾಡ್ದ ? ನಿತ್ತಲ್ಲೇ ಮಾಶೇಶ ಕೊಟ್ಟ ವಜ್ರದ ಗುಂಡ ಹೊಡ್ದ. ವಂದ್ ಗುಂಡ್ ಹೊಡ್ದ ಹನ್ನೆಯ್ದು ಅಂಕಣದ ಮನ್ಯಾಗ್ಲಿ ಹೇಳ್, "ಹನ್ನೆಯ್ದು ಅಂಕಣದ ಮನ್ಯಾಯ್ತು". ಕಡೆಗೆ ವಂದ್ ಹಳ್ ಮಂತ್ರಸ್ ಹೊಡ್ದ, "ಕೊಟ್ಗೆ, ದನ-ಕರು, ಪಲ ಯೆಲ್ಲ ಆಗ್ಲಿ" ಹೇಳಿ ಯೆಲ್ಲಾ ಆಯ್ತು. ಮತ್ತೊಂದ್ ಗುಂಡ್ನಲ್ಲಿ, "ಕಾಯ್ ಹಿತ್ಲು, ತೆಂಗ್ನ ಬನ" ಯೆಲ್ಲ ಆಯ್ತು.

ಅವಿ ಮಗ ಬಂದ ಅಂದಿ ಅರಿಶಿನ ಬೋಕು ತಕಬಂತು. ಬಲಚಂಬು ತಗದಿ ವಗೆತು. ಕಡಿಕಿದ್ದಿ ಬಿದ್ರಮಂಚದ ಮೇನ್ ಕೂತ್ರು. ಆಶ್ರ ಕುಡಿತ್ರು. ಕುಡುತಂಕೆ ಅರಶೂ ಹೆಂಡ್ತಿ ಹಡೆತು ಹೇಳ್‌ದ್ರು. ಆವಾಗಲೇ ಹೋದ. ಆಲ್ ಶಿಶು ಇದ್ದಲ್ ಹೋದ. ಅಲ್ ದೊಡ್ ಶಿಪಾಯಿ ಪಾರು, "ನೀನು ಹೊಕ್ಕುದ್ ಬೇಡ" ಅಂದ್ರು. "ನಾಯೇನೂ ಮಾಡೂದಿಲ್ಲ ನಾ ಶಿಶು ಇದ್ದಲ್ ಹೋಗ್ ಬತ್ತೆ" ಹೇಳ್ದ. ಹಾಗೇ ಹೋದ. ಹೊಡ್ದ ಜಪ್‌ದ್ರೂ ಹೋದ ಮುಂದೆ.

ಶಿಶು ಕೈಲ್ ಯೇನ್ ಹೇಳ್ ಕೇಳ್ದ ? ಕೇಲ್‌ದ್ರೆ, "ಪರಮಾತ್ಮ ಈಗೆ ಹುಟ್ದ ಶಿಶು ಕೈಲಿ ಇಚಾರ್ಣೆ ಕೇಲು, ಧರ್ಮ-ದಾನ ಮಾಡ್ಬು ಹೇಳಿರು", ಆ ಶಿಶು ಯೇನ್ ಹೇಲ್ತು ಕೇಲು, "ನೀನು ಬಾಲ ಪಚಾತಾಪ ಮೇನಿದ್ದೆ ಅಡವಿ ವಲ್ಗೆ. ಕಲ್ಲ, ಕಲ್ನ ಹಿಂಡ್ತಿ ಅಡವಿಲ್ ಬಿದ್ ಶತ್ ಹೋದ್ರು ಅಂತ ಹೇಳ್ ಪಚಾತಾಪ ಬಿಟ್ಟೆ. 'ಹರಹರ, ನಾನ್ ಬಂದ್ ಕಂಡಿ, ಕಲ್ನ ತೆಗ್ದ ಹಾಂಗ್ ಆಯ್ತು.' ನಾನು ಕಲ್ಲ, ಬಂದು ಈಗ ಅರಶೂ ಹೊಟ್ಟೆಲ್ ಹುಟ್ದೆ. ನಾನ್ ದಾನ ಮಾಡಿದ್ ಪಲಾ ಇದು. 'ಯೆಲ್ಲಾ ನನ್ ಪಾಲ್ಗೇ ಇರ್ಶಿ' ಅಂದ್ ನನ್ ಹೆಂಡ್ತಿ ಹೋಗ್ ನಾಯಿ ಹೊಟ್ಟಿಲ್ ಹುಟ್ತು."

ಕಡೆಕಲ್ಲಿದ್ದಿ ಬಂದ್ ಬಿಟ್ಟ ಮಾಣಿ, ಮನೆಗ್ ಬಂದಾ. ಅಡ್ಗಿ ಅನ್ಕೂಲ್ ಮಾಡಿ, ಶರ್ವರಿಗೂ ಊಟ ಹಾಕ್ದ. ಊಟ ಹಾಕ್ಕೊಂಡು ಮಾದೊಡ್ಡ ಮನೀಲಿ ಯಾವ ಕೊರ್ತೆ ಇಲ್ದೆ ವಲ್ದ.

ಅತ್ತೆ-ಮಾವ ಯೆಲ್ಲಾ ಊಟ-ಉಪಶಾರ ಮಾಡ್ಕಂಡ್ ಮನೆಗೆ ಬಂದ್ರು. ಮಾಣಿ ಅವ್ನ ಮಡದಿ ಶುಕದಲ್ ವಲ್‌ದ್ರು.

- **ಕೆಲವು ಪದಗಳ ವಿವರಣೆ**

| | |
|---|---|
| ಅಬ್ಬಿ = ತಾಯಿ | ಮಾಣಿ = ಮಗ |
| ಬಿಕ್ಸ = ಬಿಕ್ಷ | ಚುಮಾರ್ = ಸುಮಾರು |
| ಅಂತಿ = ಅನ್ನುತ್ತ | ಗೊರಾಣ = ಗೊದಾರಣ್ಯ (ದೊಡ್ಡದಟ್ಟ ಅರಣ್ಯ) |
| ವರ್ಗದು = ಮಲುಗಿದರು | ಶಂಪ್ನಲ್ = ಸಾಕಷ್ಟು |
| ದನಾ = ಗನಾ | ಹೊಂಗ = ಹೂವು |
| ಕಚ =ಕಸ | ಇಚಾರಣೆ = ವಿಚಾರ |
| ಹುಲ್ಕ್ = ಹುಳ್ಕು, ಹುಳಹಿಡುಕು | ಬಿರಾಮಣ = ಬ್ರಾಹ್ಮಣ |
| ಜೀಮ = ಜೀವ | ಕೊಲ್ = ಒಳ್ಳೆಯ |
| ಶಂಮ್ರುಸ್ = ತಯಾರು ಮಾಡಿಕೊಳ್ಳುವದು | ಬನ = ತೋಟ |
| ಬಿದ್ರುಮಂಚ = ಬಿದಿರಿಂದ ಮಾಡಿದ ಪಲ್ಲಂಗ | ಪಚಾತಾಪ = ಪಶ್ಚಾತ್ತಾಪ |

▪ ಹೇಳಿದವರು : **ದಿ. ಗಣಪಿ ಶಂಕರಗೌಡ,** ಶಿರಗುಂಜಿ, ಕುಮಟಾ ತಾಲೂಕು.

❖

# ದೀಪದ ಗುಡ್ಣ ದೇವರು

ಅರಸು ಮಗ, ಅತ್ತೆ-ಮಾವ ಯೆಲ್ಲಾ ಇದ್ರು. ಗಂಡಾ ಶತ್ ಹೋದಾ ಹೋದ್ರೆ; ಅರಶೂಮಗ, ಮಗನ ಹಿಂಡ್ತಿಗೆ, "ದೇವರೇ, ಅವ್ರ್ ಮೂರ್ತಾಗ್ ಹೋದ್ರು." "ನಾ ಹೇಗೆ ದಿನಾ ತೆಗಿಬೇಕು?" ತೀಡ್ತ ಅತ್ತೆ ಹೇಳ್ತು. ದೊಡ್ಡ ಅಡವ್ಯಿಲಿ ಅನದಾನ, ಆಸ್ರದಾನ, ದಾನಧರ್ಮ ಮಾಡುಕೆ ಇಕ್ತ. ಹಾದಿಮೇನೆ ಹೋಗರಿಗೆ.

ಗೌಡಗೊಲು ಮೊಲನ ಬಲೆ ಹೊತ್ಕಂಡಿ, ಹೊಲ್ಕೆ ಹೋದ್ರು. ಬೆಟ್ಟಕೆ ಹೋಗಿ ಬರಬೇಕಾರೆ ಯೇನಾಯ್ತು? ಅಟ್ಟೂ ಜನ ಬಂದಿ ಅವ್ರ ಮನೆ ಕೂಡ ಆಸ್ರ, ಅನ್ನದಾನ, ಊಟ ಮಾಡ್ಕಂಡ್ ಮನಗ್ದ್ರು. ಆಗ ಯೇನ ಹೇಳತ್ರು? "ವಬ್ಬ ಹೊಲಕೆ ಹೋದೋನೇ ಬರನಿಲ್ಲ" ಅವ್ರ್ ಹೇಳ್ದ್ರು. "ಅಲ್ಲೇ ಮನ್ಲೀದ."

ಅಡವಿಲಿ ಇದ್ದೋನು, ದೊಡ್ಡ ಶೀನೀರ ಮದಗಿತ್ತು. ಅಲ್ಲಿ ದೊಡ್ಡ ದೀಪದ ಗುಡ್ಣ ದೇವರು ಇತ್ತು. ಯೇನು ಮಾಡ್ದ ಅವ? ಕೆರೆನೀರ್ ಕುಡ್ದ. ರಾತ್ರಿ ಸುಮ್ಮಗೆ ಕುಂತ. ಹನ್ನೈಡ್ ಹೆಡೆ ಮಾಶೇಕ ಬಂತು - ಬೆಟ್ಟದಾಗಿದ್ದಿ. ಆಗ ಬರತೂವ, ಕೆರೆಗೆ ಹೋಯ್ತು. ಮೊಕ, ಕಯ್ಯ ತೊಲೆದಿ ನೀರ್ ಕುಡೀತು.

ಮಾಶೇಕ್ ದೀಪ್ನ ಗುಡ್ಣಗ್ ಹೋಗಿ ಶುತ್ತು ಹೊಡುದು, ತಿರುಗೂದು, ಆಗೆ ತಿರ್ಗ್ ಬೇಕಾರೆ ಯೇನ್ ಹೇಳ್ತಿದು ದೀಪ್ದ ಗುಡ್ಣ ಕೇಲ್ದ್ರೆ,

"ಹನ್ನಯ್ಡು ವರ್ಸನ ಹುಡ್ಗಿ ಬಿಟ್ಟಿಕಿ ನನ್ನ ಕಾಂಬಗೆ ಬಾಲ ಹೊಡೆತೆ ನೀನು. ಮೀಶೆ ತಿರ್ಪ್ತಿ ಸುತ್ ಹೊಡೆತೆ" ಕೇಲ್ತು. ಮೀಶೆ ತಿರಸ್ತು, ಬಾಲ ಹೊಡೆತು, ಬೆಟ್ಟ ಬಿದ್ದಿ ನೆಡೇತು.

ಬೆಲಗಾಯ್ತು. ಅಮ ಯೆದ್ ಶೀದಾ ಹೋದಾ. ಆಶ್ರದಾನ ಮಾಡು ಮನೇಗ್ ಬಂದಾ. ಅಲ್ಲಿ ಯೇನ್ ಹೇಲ್ದ? "ಅಮ್ಮ, ನಮ್ಮ ಬದಿ ಜನಯೆಲ್ಲಾ ಮನೆಗೆ ಹೋದ್ರೊ? ಇಲ್ಲೆ ಈವ್ರು?" ಕೇಲ್ದಾ. ಆಗ್ ಹೇಳ್ತು, "ಇಲ್ಲೆ ಈವ್ರು... ಯೆನಾಯ್ತು ನಿಂಗೆ? ಬಾನಿಲ್ಲ ಕೇಲ್ಕಂಡ್, ಮಾಡ್ಕಂಡ್ ಮನ್ಗ್‌ದ್ರು."

"ಅಮ್ಮ, ಇಂದು ರಾತ್ರಿ ನನ್ ಬಿಟ್ ಬಂದ್ರು. ದೀಪದ ಗುಡ್ಣ ಬದಿಗೆ ಕುಂತಿದೆ. ವಂದ್ ಮಾಶೇಕ ಬಂದ್ ಮೊಕ ತೊಲ್ದು, ನೀರೆ ಕುಡ್ದು ಅವ್ರ್ ಮೇನೆ ಮೀಶೆ ತಿರಸಿ ಕಂಬಕೆ ಶುತ್ ಹೊಡ್ದ." ಅದ್ರ ಮೇನೆ ದೀಪದ ಗುಡ್ಣ ಯೇನ್ ಹೇಳ್ತು ಕೇಲ್ದ್ರೆ, "ಹನ್ನೆರಡ ವರ್ಸನ ಹುಡ್ಗಿ ಬಿಟ್ಟಿ ಬಂದಿ, ನನ್ನ ಕಂಬಕೆ ಸುತ್ ಹೊಡೆತೆ ನೀನು?" ಕೇಲ್ತು.

"ಅದ್ರ ಮೇನೆ ಸೀದಾ ಯೆದ್ ಬಂದೆ. ಬೆಲ್ಗಾ ಪೆಟಿ" ಅಂದಾ. "ಅಟ್ಟಾದ್‌ಪೆಟಿ ನನ್ಗ್ ವಂದ್ ತೋರ್‌ವ್ಯಾ ಹೇಗೆ?" "ಅಯ್ತು" ಅಂತ ಹೇಳ್ದ. ಆಗ ವಂದ್ ಕಾಯ, ಹೂಗು

ತಂದ– ಹರವಣದಲ್ ಇಟ್ಕಂಡಿ ಆ ದೀಪ್ದ್ ಗುಡ್ಡಕೆ ಪೂಜೆ ಕೊಡೂಕೆ ಅಮ್ಮನೂ ಕರಕಂಡೆ ಹೋಯ್ತು. ಇದ್ ಪೂಜೆ ಕೊಟ್ಕಂತು. ಕೈಮುಕ್ಕ ಹೇಳ್ತು, "ನೀನು ಸಮಾ ಬಾಗಲಾಗ್ ನಿಲ್ಬೇಕು. ನಿನ್ ಹೊಟ್ಟೆಮೇನೆ ಹೊತ್ಕಂಡ್ ಕುಲ್ತೆ" ಅಂತು. ಹೊತ್ಕಂಡ್ ಕುಲ್ತು.

ಯೇನ್ ಮಾಡ್ತು? ಕೈ ಹೆರ್ಗ್ ತೆಕ್ಕಂಡೆ ಕುಲ್ಲುಮತ್ತು ವಂದ್ ತಾಸ್ಗೆ ಮಾಶೇಕ ಬಂದಾ. ಯೇನ ಮಾಡ್ದಾ? ಮೊಕ-ಕೈ ತೊಲ್ದ, ನೀರ್ ಕುಡ್ದಾ. ದೀಪದ್ ಗುಡ್ಡ ಬಾಲದಲ್ಲಿ ಹೊಡಕ್ಕೆ ಮಾಡತ್ನೂ ಬಾಲ ಕೈ ಹಿಡ್ದ್ ವಗಿತು. ವಗುತೂವ ಹನ್ನೈಯ್ಡು ವರ್ಸನ ಹುಡ್ಗಾಗ್ ಹೋದ.

ಬೆಲಗಾಗುತೂವ ಮಾಶೇಕ (ಗಂಡ) ಮತ್ತು ಗೌಡ, ಅರಸು ಹುಡ್ಗಿಯೆಲ್ಲಾ ಬಿಡಾರ್ಕ್ ಬಂದರು. ಅನ್ನದಾನ ಮಾಡ್ಕಂಡಿ ವಲ್ದ್ರು.

- **ಕೆಲವು ಪದಗಳ ವಿವರಣೆ**

ಅನದಾನ = ಅನ್ನದಾನ

ಅಸ್ರದಾನ = ಕುಡಿಯಲು ನೀರನ್ನು ಕೊಡುವುದು

ಬಾನಿಲ್ಲ = ಎಚ್ಚರಿಲ್ಲ

ಪೆಟಿ = ನಂತರ

▪ ಹೇಳಿದವರು : **ಕರಿಯಮ್ಮ, ರಾಮಕೃಷ್ಣ ಗೌಡ,** ಕಲ್ಕೋಡು, ಹೆಗಡೆ.

❖

# ಧೀರ, ಜಾಣ, ರಾಜಕುಮಾರಿ

ರಾಜ ಪ್ರಧಾನಿ ಇದ್ದರು. ರಾಜನ ಹುಡುಗಿ ಶಾಲೆಗೆ ಹೋಗುವಾಗ ಮದುವೆ ಪ್ರಾಯ ಬಂತು. ಹೊಸ ಬಂಟ ಸಿಪಾಯಿ ಪಾಟಿ ಪುಸ್ತಕ ಹೊತ್ತು ಶಾಲೆಲಿಡೂದು; ಹೊತ್ತು ಪುನ ಮನೆಗೆ ತರುದು.

ರಾಜ ಹುಡುಗಿ ಕಣ್ಣಲಿ ನೋಡಲಿಲ್ಲ ಪ್ರಾಯ. ಪುಸ್ತಕ ಕಮ್ಮಿ ಬಿತ್ತು. ಪರದಾನಿ ಹುಡುಗ 'ತಂಗೀ...' ಅಂತ. ಅವಳು 'ಅಣ್ಣ' ಅಂಬೂದಿಲ್ಲ. ಅವಗೆ ತಂಗಿ ಅಂತ ಬಹಳ ಮನಸು. ತಂದೆ ಬಲಿ ಹೋಗಿ, "ಪುಸ್ತಕ ತರತೆ" ಹೇಳಿದ. ತಂದೆ ಹುಡ್ಗಿ ಕಣ್ಣಲ್ಲಿ ನೋಡಿದ. ಇಟ್ಟು ಕಂಡರೆ ಬಹಳ ಅಪಮಾನ ಎಂದು ನಗ್ನ ಮಾಡಬೇಕು ಹೇಳಿ ಮಾಡಿದ.

ಶಾಲೆಗೋಗಿ ಬಂದಾಗ ದಾಸಿ ಮಂಡೆ ಬಾಚಿ ಹೂಂಗು ಮುಡಿಶುವಳು. ಯೆರಡ ಶಿದ್ದಕ್ಕಿ ದಾಸಿಗೆ ಕೊಡತಾಳೆ. ಪರದಾನಿ ಕರೆದ, "ಮಗುಲಿಗೆ ತಕ್ಕ ಹುಡುಗನ ಹುಡುಕು" ದಾಸಿ ಕೇಳಿದಳು.

ಶಾಲಿಂದ ಅಡವಿಯಲ್ಲಿ ಪಾಟಿ ಪುಸ್ತಕ ತಕಂಡ್ ಬರುವಾಗೆ ದೊಡ್ಡ ಅಶ್ವತ್ತ ಮರ ಬಡಲ್ನೆ ಬಿತ್ತು– ಹತ್ತಿ ಹೋದರು.

ದಾಸಿ ಮಂಡೆ ಬಾಚ್ತದೆ. 'ಅಜ್ಜೀ' ಕಣ್ಣೀರ ಬಿಡತದೆ. "ಯಾಕೆ ಮಗಳೆ, ನಾ ಸಾಕಿದ್ದ ನಿನಗೆ ತಕ್ಕದ ಗಂಡನ ಮಾಡತ ಅಂತ ದುಕ್ಕ."

ರಾಜನ ಹುಡಗಿ, "ನಾನು ಒಬ್ಬಳೇ. ಮದಿವೆ ಮಾಡತಾರೆ ನನ್ನ?" ಪಾಟಿ ಪುಸ್ತಕ (ತಕ್ಕೊಂಡು) ಅಶ್ವತ್ತ ಮರಹತ್ತಿ ಹೋಗುದು. ಮನೆಗೆ ಬಂತು. ಅಶ್ವತ್ತಮರ ಹತ್ತಿದ ಕೂಡಲೆ ಅವಳ ಮೋರೆ ನೋಡಿ ಪರದಾನಿ ಹುಡುಗ, "ಯಾಕೆ ಬಾಡಿದೆ?" ಕೇಳಿದ. "ಬೆಟ್ಟ ಬೇಯೂದು ಲೋಕ ಬಲ್ಲದು. ಹೊಟ್ಟೆ ಬೇಯೂದು ಯಾರಿಗೆ ಗೊತ್ತು?" ಕೇಲಿತು. "ಅಂಥ ಕಟ್ಟ ಏನು ಬಂತು?" ಕೇಲಿದ ಪರದಾನಿ ಹುಡುಗ. "ಪರದಾನಿಗೆ ತಕ್ಕ ಗಂಡನ ನಿಶ್ಚಯ ಮಾಡು" ಅಂದ. "ನಾನು ನಿನಗೇ ಲಗ್ನ ಮಾಡುವ (ಆಗುವ ಎಂದಿರಬೇಕು) ಆಶೆ ಮಾಡಿದೆ" ಅಂದ್ಲು.

"ತಂಗಿ ಹೇಳಿ ನೀ ಕರೆತೆ. ನಾ ಅಣ್ಣ ಅನ್ನೂದಿಲ್ಲ. ನಿನ್ನೇ ಲಗ್ನಾಗುವೆ" ಅಂತು. "ನಾ ನಿನ್ನ ಲಗ್ನಾಗುದಿಲ್ಲ" ಅಂದ. "ಸರ್ವತಾ ಆಗೂದಿಲ್ಲ" ಅಂದ. "ನಾನು ನಿನಗೇ ಲಗ್ನ ಆಗುವೆ ಇಲ್ಲ. ನಿನ್ ಕಾಲಬುಡಕ್ಕೆ ನಾಲಿಗೆ ಹುಸಕೊಂಡು ಪರಾಣ ಕೊಡ್ತೆ" ಅಂದಳು. ಹೊಸ ಬಂಟ ಸಿಪಾಯಿ ಪಾಟಿ ಪುಸ್ತಕ ಹೊತ್ತು ಸಂಜೆಯಾದರೂ ಬರಲಿಲ್ಲ ಇವರು ಎಂದು ತಿಳಿದ. ಬೆಳಿಗ್ಗೆ ಪಾಟಿ ಪುಸ್ತಕ ಹೊತ್ತು ಅಶ್ವತ್ತಮರದಲ್ಲಿ ಒಟ್ಟೆಯಿತ್ತು. ಹೊಕ್ಕಿ ಮನಿಕಂಡ. ಅಶ್ವತ್ತ ಮರ ಹತ್ತಿದಾಗ ಪರದಾನಿ ಹುಡುಗನ ಕೈ ಹಿಡಿದಲು. "ನಗ್ನಾಗದಿರೆ ನಾಲಿಗೆ ಹುಸಕಂಡು ಪ್ರಾಣ ಬಿಡುವೆ" ಅಂದಳು. "ನಿಮ್ಮನೆಲೇ ಉಂಡು ತಿಂದು ಇದ್ದವ. ಹೇಳಿದ ಹಾಗೆ ಕೇಲುವೆ" ಅಂದ. "ಉಪಾಯವಿಲ್ಲ." "ಭಾಶಿ ಕೊಡು" ಅಂದಳು– ಕೊಟ್ಟ.

"ತಂದೆ-ತಾಯಿ ಕೊಟ್ಟ ಆಭರಣ ಧರಿಸಿ ಮಲಗುವ ಕೋಣೆ ಕೆಳಗಡೆ ಕಬ್ಬಿಣ ಸರಳು ಬಿಡುವೆ. ನೀ ಅಲುಗಿಸು ಬಂದು" ಅಂದಳು. "ಬೇರೆ ರಾಜ್ಯಕ್ಕೆ ಹೋಗುವ" ಅಂದಳು. ಹೊಸ ಬಂಟ ಒಟ್ಟಿಂದ ಕೇಲಿ, "ನನಗೆ ಹೊಟ್ಟೆ ಹೊಡೆವೆಯ?" ಎಂದು ಬಂದ. "ಐನೂರು ರೂಪಾಯ್ ಬೇಕು." ಪರದಾನಿ ಹುಡುಗನ ಡ್ರೆಸ್‌ನಂತೆ ಡ್ರೆಸ್ ತಕ್ಕಂಡು ಅಂಗಿ - ಕೋಟು ಪೈರಣ ಹಾಕಿ ಮನಿಕಂಡ. ಕಬ್ಬಿಣ ಶರಳು ಗಡಿಯಾಳ ಇಟ್ಕಂಡಿ ಮನಿಕಂಡ.

ಹನ್ನಂದ್ ಗಂಟೆಗೆ ಹೋಗಲು ಹೊಸ ಬಂಟ ಶಿಪಾಯಿ ಕಬ್ಬಿಣದ ಸರಳು ಸದ್ದು ಮಾಡಿದ. ಅವಳು ಗಡಿಯಾರ ನೋಡಿ, "ಹನ್ನಂದ್ ಗಂಟೆ. ಏನೋ ಹೆಚ್ಚು ಕಮ್ಮಿಯಾಯ್ತು" ಎಂದು ತಿಳಿದಳು.

ಇವನ್ ಕುದುರೆ ಹಿಂದೆ, ಅವಳು ಮುಂದೆ. ಬಹಳ ಬಾರ ಹೊಡೆದ. ಏಳು ಹಗಲು, ಏಳು ರಾತ್ರಿ ಹಾರುತ ಉಳಿಯಿತು.

ಪರದಾನಿ ಹುಡುಗ ಹನ್ನೆರಡು ಗಂಟೆಗೆ ಬಂದು ಅಲುಗಿಸಿದ ಕಬ್ಬಿಣ ಸರಳ. ರತ್ನಾವತಿ ಕೆರೇಲಿ ನೀರು ಹೊಳೆತದೆ. ಕುದುರೆ ಆಶರಾಗಿ ಕೆಲಗೆ ಇಲಿತು. "ಹರಹರಾ, ನನ್ನ ತಂದೆ ಶಿರಿವಂತರಿಗೆ ಲಗ್ನ ಮಾಡತಿದ್ದ. ಹೊಸ ಬಂಟ ಸಿಕ್ಕನಲ್ಲ, ಏನು ಮಾಡಲಿ?" ನೋಡಿದಳು.

"ನನ್ನ ಸಾವಿರ ರೂಪಾಯಿ ಪಗಾರು ಸೊನ್ನೆ ಮಾಡಲು ನೋಡಿದೆಯಾ?" "ಹನ್ನಂದ್ ಗಂಟೆಗೆ ನಾ ಯಾಕಿಲಿದೆ, ನಿನ್ನ ಸಲುವಾಗಿ ಇಲಿದೆ" ಅಂದಳು. "ಪೇಟೆಗೆ ಹೋಗಿ ಶಿಂಡಿ, ಶಾಶಪ್ಪು ಎಲ್ಲ ತಕಂಬಾ. ನಾನು ಪವನ್ ಸರ ಕೊಡತೆ. ತಿಂಡಿ ಸಾಮಾನ್ ತಕಂಬಾ" ಎಂದಲು, "ವಂದ್ ಆಣಿ ತಪರಾಕಿ, ವಂದ್ ಆಣಿ ಗಜಿಬಿಜಿನೂ ತಕಂಬಾ" ಎಂದಲು.

ಎಲ್ಲ, ಸಕ್ಕರೆ ಶಾಶಪ್ಪು ಎಲ್ಲಾ ತಕಂಡ. "ಶೆಟ್ಟರೆ, ವಂದ್ ಆಣಿ ತಪರಾಕಿ ಕೊಡಿ" ಅಂದ. ವಂದ್ ಆಣಿ ತಕಂಡ, ಜುಟ್ಟ ಹಿಡಿದು ತಪರಾಕಿ ಪಟಪಟ ಹೊಡೆದ. "ಅಯ್ಯೋ,ರಾಜನ ಹುಡುಗಿ ಸುಳ್ಳ ಹೇಳ್ತಾಲೆಯಾ?" "ಶೆಟ್ಟರೆ, ವಂದ್ ಆಣಿ ಗಜಿಬಿಜಿ ಕೊಡಿ". "ಛೇ ಗಜಿಬಿಜಿ!" ಹುಡಗನ ಆಣಿ ತಕಂಡು ಆಶೆ-ಈಶೆ ಮಜ್ಜಿಗೆ ಕಡೆದ ಹಾಗೆ ಕಡೆದ.

ರಾಜನ ಹುಡ್ಗಿ ಕುದ್ರೆ ಹತ್ತಿ ಪಾರು. ಅವನಿಗೆ ದಿಕ್ಕು ತಪ್ಪಿದ ಹಾಗೆ. ದೇಶಾಂತರ ನಡೆದ. ರಾಜ ಪರದಾನಿ ಹುಡಗಗೆ, "ನೀ ಇವಳ ತಂದರೆ ನಿನಗೇ ನಗ್ನ ಮಾಡತೆ" ಹೇಳಿ ಕಲಿಸಿದ್ದ.

ಮೂರ್ ಜನ ಆಶಾಶೂರ ಪಂಜಗಳ್ಳರು. ಕರಿಕರಿ ಮುಕರಿ (ಬಣ್ಣದವರು) ತಲೆ ಕಡೂದು, ದಾಗೀನೆ ಮನಿ ಕೂಡೆ ಇಡೂದು ಹುಡ್ಗಿ ನೋಡಿ, "ಹರಹರಾ! ಮೂರು ಪಂಜಗಳ್ಳರ ಕೂಡ ಹೇಗೇ?" ಇಳಿದು, "ನನ್ನ ಮನಸ್ಸು ಬಹಲ ಸಂತೋಶ" ಎಂದಳು.

ಇದ ನೋಡಿದ್ರೋ? "ನಮ್ಮ ಎಲ್ಲಿ ನೋಡಿದೆ?" ಕೇಲಿದರು. "ಮಾರಿ ಜಾತ್ರೇಲಿ ನೋಡಿದ್ದೆ. ಇಂದು ನಿಮ್ಮ ದರ್ಶನಾಯ್ತು. ಭಾರಿ ಸಂತೋಷ" ಎಂದಲು. ಮನೆಗೆ ಕರ್ಕಂಡ್ ಹೋದರು. ಕಲ್ಲ ಸುರಂಗ. ಕೋಲ (ಬೇಡಿ), ರಾಶಿ ಶಿನ್ನ ಬಂಗಾರ ಇರ್ತು. "ಎಲ್ಲ ನನಗೇ" ಅಂತು. 'ಎಲ್ಲ ಯಂತದು' ಅಂತು. "ನನ್ನ ಕೈಗೇ, ಕಾಲಿಗೆ ಕೋಲ ಹಾಕಿ" ಅಂತು. ಹಾಕಿದರು. "ಮೂರು ಜನಕ್ಕೂ ಹಾಕಿ ತೆಗೆವೆ" ಅಂದಳು. ಮೆಚ್ಚಿ ಬಂದವಲು ಎಂದು ಮೂವರಿಗೂ ಕೋಲ ಹಾಕಿ, ದಾಗೀನೆ ತಕ್ಕಂಡು ಕುದುರೆ ಹತ್ತಿ ಜಾರಿದಲು. ಅವರಲ್ಲಿ ಜಗಲ – " ನಮಗಿಂತ ಪಕ್ಕ ಕಲ್ಲ ಹೆಂಗಸು" ಅಂದಿ, ಕಾಲಲ್ಲಿ ಒದ್ದಕಂಡಿ ರಸ್ತಿ ಬಾಗಿಲಲ್ಲಿ ಬಿದ್ರು.

ಗಟ್ಟಕೆ ಹೋದವ ಬರತಿದ್ದ. "ಬಿಡಿಶ್ ಹಾಕು" ಅಂದರು. ಬಿಡಿಸಿದ. ಅವರು ಕುದುರೆ ಹತ್ತಿ ಹೋದರು.

ರಸ್ತೆ ಮೇಲೆ ತಿರುಗುವರು ಐದ್ ಜನ ಶ್ರೀಮಂತರು. ಅಂಗಿ, ಕೋಟು, ಪವನ್ ಉಂಗುರ ಹಾಕಂಡಿದ್ದರು. ಕೋವಿ ಹಿಡಿದು ಹಕ್ಕಿ ಬೇಟೆ ಕಸಬು ಅವರದು. ಹುಡಗಿ ಸೂರ್ಯ ಮೂಡಿದ ಹಾಗೇ ಹೊರಟದೆ. ಮನಸ್ಸಾಯಿತು. ಐದ್ ಜನರೂ ಕೆಲಗಿಲಿದರು. ಕಟ್ಟೆ ಮೇಲೆ ಕೂತಿತ್ತು. "ಕಾಲ ದಾರಿ ತಿರಗಾಟ ಮಾಡಿದವರಲ್ಲ, ನಿನಗೆ ಮನಸಾಗಿ ಇಲಿದೆವು. ಯಾವ ಜಾತಿ?" "ನಾ ಕರಿವಕ್ಲ ಹುಡ್ಗಿ" ಅಂದ್ಲು. "ನಿನ್ನ ಮೇಲೆ ಮನಸಾಗಿ ಕೆಲಗಿಲಿದೆವು." "ಆಗುದಿದ್ರೇ ಲಗ್ನಾಗಿ" ಅಂದಳು. "ತನ್ನ ಹಿಂಡ್ತಿ, ತನ್ನ ಹಿಂಡ್ತಿ" ಅಂತ್ರು.

"ಕಯ್ಯ ಕೋವಿ ನನಗೆ ಕೊಟ್ಟು, ಐದ್ ಜನರೂ ಕುದ್ರೆ ಬೇರಿಗೆ ಬಿಗಿದು, ಹೊಡ್ಲ ಗದ್ದೇಲಿ ಮಾವಿನ ಮರ ಎಲೆ ಕೆಡಗಿದ್ದನ್ನು ಹೆಕ್ಕಿ ತರಬೇಕು." ಮಾವಿನ ಮರಕ್ಕೆ ಗುಂಡು ಹೊಡಿದಲು. ಹೊಡೆದ ಗುಂಡು ಎಲ್ಲಿ ಬಿತ್ತು? "ಮರದ ಎಲೆ ಹೆಕ್ಕಿ ಮೊದಲು ತಂದವನ ಲಗ್ನ ಆಗುವೆ?" ಎಂದಲು. ಓಡಲು ತಯಾರಾದರು. ಓಡಿದರು. ಕೆಸರು. ನಾಕು ಕುದುರೆ ಮುಂಗಾಲ ಕಡಿದು, ರಾಜನ ಹುಡಗನಾಗಿ ಕುದ್ರೆ ಹತ್ತಿ ಓಡಿದಳು. ಬಾಂದ ಕಲ್ಲು ತಾಗಿತು. ಎಲ್ಲರೂ ಓಡಿ ಬಂದರು. "ರಾಜನ ಹುಡಗಿ ಇಲ್ಲ. ಒಬ್ಬನ ದುಸ್ತು ಇಲ್ಲ. ನಾಕ್ ಕುದ್ರೆಗೆ ಮುಂಗಾಲ ಕಡಿದದೆ. ಕಾಲದಾರಿಯಲ್ಲಿ ಹೋಗುವದು ಅವಮಾನ" ಎಂದು, ಎಲ್ಲ ಸುಟ್ಟು ಬೂದಿ ಮಾಡಿ– ಕಾಶಿಗೆ ಭಟ್ಟರ ವೇಶದಲ್ಲಿ ಹೋಗತೇವೆಂದು ಹೋದರು.

ಬೊಂಬೈ ರಾಜ್ಯದಲ್ಲಿ ದೊಡ್ಡ ಶ್ರೀಮಂತ (ರಾಜ) ಐಬಾಯಿ ಹುಲಿ ಕಾಟ. ರಾಜ ಅದರ ಬಾದೆ ತಡೆಯಲಾರದೆ ಏಳು ಸುತ್ತ ಕಲ್ಲು ಕೋಟೆ ಪಾಗಾರ ಗ್ಯೆಸಾನೆ, ಐದ್ ಆಲು ಎತ್ತರ, ಐದ್ ಆಲು ಪಾರ, "ಹೊತ್ತು ಕಂತದ ಮೇಲೆ ಯಾರೂ ಕೋಟೆ ಹೊರಗೆ ಹೋಗಬಾರದು. ಹೊತ್ತು ಕಂತುವರೆಗೆ ಬಾಗಿಲಲ್ಲಿ ಯಾರೂ ಹೋಗಬಹುದು. ಐಬಾಯಿ ಹುಲಿ ಹೊಡೆದವಗೆ ನನ್ನ ಮಗಲ ಲಗ್ನ ಮಾಡಿ ಕೊಡ್ತೆ, ಅರ್ಧ ರಾಜ್ಯ ಕೊಡ್ತೆ" ಎಂದು ಪನಕಟ್ಟನೆ. (ಇದಕ್ಕೆ ಹುಡಿಗಿಗೆ) ಪೊಲೀಸರು ಶಲಾಂ ಮಾಡಿದರು. "ರಾಯರೇ?" ಅಂದರು. "ಅಡವಿಲಿ ಹೋಗಕ್ಕಾಗದು. ಐಬಾಯಿ ಹುಲಿಯದೆ. ಹೊತ್ತು ಕಂತಿದ ಮೇಲೆ ಅಡವಿಲಿ ಹೋಕ್ಕಾಗದಂತೆ. ಊಟ ಮಾಡಿ ಹೋಗಿ" ಅಂದರು. "ಎಲ್ಲ ಬಲ್ಲೆ" ಎಂದಲು. ಬಾಗಿಲು ಹಾಕಿ ಹೋದರು.

ಬೆಟ್ಟದಲ್ಲಿ ಐಬಾಯಿ ಹುಲಿ. ಅಶ್ವತ್ತ ಕಟ್ಟೆ ಹತ್ತಿ ಕೂತಲು. ಬುಡಕೆ ಹುಲಿ ಬಾಯಿ ಕಲೆಯಿತು, ಉಕ್ಕಿನ ಪಟ್ಟೆ ಕೈಲಿ. ಹುಲಿ ಅಶ್ವತ್ತ ಕಟ್ಟೆ ಹತ್ತಿತು. ರಾಜನ ಹುಡಗಿ ಬದಿ ಮೊಕ ಹಾಕಿ ಕೂತ್ತು. ಉಕ್ಕಿನ ಪಟ ನೆತ್ತಿಗಿಟ್ಟಲು. ಯೆರಡು ಬಗಲಾಗಿ ಹೋಯಿತು ಹುಲಿ.

ಬಾಲದ ಗೊಂಡೆ, ಕೆಮಿಶಟ್ಟೆ, ಉಗುರು ಕೊಯ್ಕಂಡಿ ಕೂಗ್ಲಬಲ್ಲಿ ತಂದು ಕಟ್ಟಿ, ಸಬಂದ ಮಾಡಿತು. ಅಜ್ಜಿ ಮನೆಲಿವಳಿತು.

ರಾಜರ ಮಡಿವಾಳ ರಾಜಗೆ ಸಲಾಂ ಮಾಡಿ, ಯೆರಡಶೆದ್ದೆ ಅಕ್ಕಿ ತರುವವ. ಬೆಲಗಾಗ ನೋಡಿದ. ಐಬಾಯಿ ಹುಲಿ! ಹೆಂಡ್ತಿ ಕೂಡೆ, "ಬೊಡ್ನ ಕೋವಿ ತಾ" ಎಂದ. ತಂದ. ಮದ್ದ

ಹಾಕಿ ಬಂದೂಕ ಹೊಡೆದ. ಹುಲಿ ಬಗಲಾಗಿ ಬಿತ್ತು ಬಾಗವಾಗಿ. ಬೊಡ್ಡನೆ ಕೋವಿ ಒಗೆದು ರಾಜನ ಹತ್ತರ ಬಂದ, "ಬೊಂಬೈ ರಾಜ" ಅಂದ. ಅಹಂಕಾರದಿಂದ "ಐಬಾಯಿ ಹುಲಿ ಹೊಡೆದಿದ್ದೆ. ಅರ್ಧರಾಜ್ಯ, ಸಿಂಹಾಸನ ಕೊಡ್ತೆ; ಮಗಲ ಲಗ್ನ ಮಾಡಿ ಕೊಡ್ತೆ ಅಂದಿದ್ದೆ." (ಯಾರೇ ಹೊಡೇಲಿ) "ಹೌದು" ಅಂದರು ಶಿಪಾಯಿರು.

ಪಾಲಕಿ ಮೇಲೆ ಕರೆತಂದರು ಮಡಿವಾಳನ. "ಮೇಲಿನ ಮಂಗಳಾರ ನಗ್ನ ಮಾಡಿ ಕೊಡುವೆ, ಅರ್ಧ ರಾಜ್ಯ ಕೊಡುವೆ, ದಿಬ್ಬಣ ತಾ" ಎಂದ.

ಅಜ್ಜಿ, "ಮಡಿವಾಲ ಹೊಡೆದ" ಅಂತು ಇವಲ ಹತ್ತರ. ಗಂಡು ದುಸ್ತಿನವಲ ಹತ್ತರ ಮಡಿವಾಲ ಸಾಲ ಮಾಡಿ ಎಲ್ಲ ತಯಾರಿ ಮಾಡಿದ. ಬೊಂಬೈ ರಾಜ ಪರದಾನಿಗೆ, "ಆಶಾಡ ನಗ್ನಪಲವಿಲ್ಲ. ಹೇಗೆ ನಗ್ನ ಮಾಡಲಿ?" ಅಂದ. ಪರದಾನಿ ಹುಲಿ ಹೊಡದ ಪಣ ಹೇಳಿದ. ಅಜ್ಜವನ ಮನೇಲೆ ರಾಜನ ಹುಡಗ ಅವನೆ. ಅವ ಶ್ರೀಮಂತ. ಪರದಾನಿ ಇವನನ್ನೂ (ಇವಲನ್ನೂ) ಕರಕಂಡ್ ಹೋದ. ರಾಜನ ಹುಡಗಿ ಹದ್ನಾರೆ ವರ್ಸ, ಹುಡಗ ರೂಪದಲ್ಲಿ ಈತು.

ಮಡಿವಾಲ ಮಂಟಪದ ಮೇಲೆ ಕೂತ. ರಾಜ ಹೇಳಿದ, "ಐಬಾಯಿ ಹುಲಿ ಕೊಂದ ಪಣ ಇಟ್ಟಿದ್ದೆ" ಅಂದ. "ಹುಲಿ ಇವ ಹೊಡೆದಾನು" ಅಂದ (ಮಡಿವಾಲನ ತೋರಿಸಿದ). ಮಡಿವಾಲ, "ಕೋವಿಲಿ ಹೊಡೆದೆ" ಅಂದ. "ಗುಂಡು ಆಶೆ ಪಾರಾತೀದೋ, ಬಗಲಾತಿದೋ?" ಕೇಲಿದ(ಲು). "ಕತ್ತಿಲಿ ಕಡದ್ದೋ. ಗುಂಡು ಬಾರು ಮಾಡಿದ್ದೋ ನೋಡಿ" ಅಂತು. ನೋಡಿ ಬಂದ್ರು. "ಕತ್ತಿಲಿ ಕಡಿದ್ದು" ಅಂದರು. ಮಡಿವಾಲ, "ಗುಂಡಲ್ಲಿ ಕೊಂದೆ" ಅಂದ. "ಕೆಮಿಶಟ್ಟೆ, ಬಾಲದ ಗೊಂಡೆ, ಉಗುರು ತಾ" ಅಂದ ರಾಜ. ಮೋಟು ಬಾಲ, ಮೋಟು ಕಿವಿ ತೋರಿದ. ಇವ(ಲೂ) ಗೊಂಡೆ, ಕೆಮಿಶಟ್ಟೆ, ಉಗುರು ಎಲ್ಲ ತೋರಿದ(ಲು).

"ಅವನ ತಲೆ ಹೊಡಿಬೇಕು" ಅಂತ ರಾಜ. ಮಡಿವಾಲ ಓಡಿದ. "ಬಾಶಿಂಗ ಮುರಿದು ಹೊಡೆದು ಬಿಡಿ" ಅಂದ(ಲು). ಅಪಮಾನ ಮಾಡಿದರು. "ನಿಮ್ಮ ನಗ್ನ ಮಾಡಬೇಕು" ಅಂದರು. "ತಂದೆ-ತಾಯಿ ಕೇಲಿ ಬರುವೆ. ಹದ್ನೈದ್ ದಿನ ವಾಯ್ದೆ ಕೊಡಿ. ರಾಜ ಪಟ್ಟ ಬರಕೊಡಿ." ಬರಕೊಟ್ಟರು. ರಾಜಪಟ್ಟ ಪಡೆದ ಹುಡಗ(ಗಿ) ತಂದೆ-ತಾಯಿ ಇದ್ದಲ್ಲಿ ಬಂದಿ, ಎಲ್ಲ ಹೇಳ್ತು. ಅವಳ್ನ ಪರದಾನಿ ಹುಡುಗಗೆ ನಗ್ನ ಮಾಡ್ದ. ಮತ್ತೊಬ್ಬಳ್ನೂ ಅವಗೇ ನಗ್ನ ಮಾಡಿದರು. ಸುಖ-ಸಂತೋಷದಾಗೆ ವಳಕಂಡ್ರು.

- **ಕೆಲವು ಪದಗಳ ವಿವರಣೆ**

ಬಡಲ್ನೆ= ದೊಡ್ಡ ಶಬ್ದ ಮಾಡುತ್ತ
ಪರಾಣ = ಪ್ರಾಣ
ಪೈರಾಣ = ಪೈಜಾಮ
ತಪರಾಕಿ = ಕೆನ್ನೆನೆ/ಗಲ್ಲಕ್ಕೆ ಹೊಡೆಯುವದು
ಕಸುಬು = ಉದ್ಯೋಗ
ಪಾರ = ಅಗಲ
ಬಾಲು = ಬಹಳ
ಕಟ್ಟ= ಕಷ್ಟ
ಒಟ್ಟೆ = ತೂತು
ಶಾಶಪ್ಪು = ಬೌಸಪ್ಪು
ದಾಗೀನೆ = ಬಂಗಾರದ ಅಭರಣ
ದುಸ್ನು = ಡ್ರೆಸ್ಸ್
ಬೊಡ್ನ= ಬೇಗನೆ

▪ ಹೇಳಿದವರು : **ಸಣ ಕೂಸ ಗೌಡ,** ಕರ್ಕಿ

❖

# ಮದುವಣಗಿತ್ತಿ

ಅಜ್ಜಿ ಮುದಕಿ ಇತ್ತು. ದಿವಸಿಗೆ ವಂದ್ ಶಿದ್ ಅಕ್ಕಿ ಪಡಿ ಬೇಡ್ಕಂಡ್ ಬತ್ತಿತ್ತು. ವಂದ್ ಕೊಡ ಹುಗಿದಿ ದಿವಸೀಕ್ ವಂದ್ ಮುಷ್ಟಿ ಹಾಕಿ ಕೊಡನಲ್ ಇಟ್ಟು. ತಾನು ಕುಂತ ದಿವಸಿಗ್ ಬೇಕು ಹೇಳಿ, ಯೆಲಿಪುಡಕ ಗೆಟ್ಟೆ ಕನ್ನಲ್ ಹೊಕ್ತೊ, ಯೆಲ್ ಹೊಕ್ತೊ ಯೇನೋ ಅಕ್ಕಿ ತಿಂದ್ ಬರಿಮಾಡ್ತು.

ಅಜ್ ಮುದ್ಕಿ ಕಂಡ್ಕಂಡ್ ಮೇನ್ ಹೇಳ್ತು– "ನಾನು ವಂದ್ ಪಡಿ ದಿವಶಿಗೂ ತಂದ್ ಇಟ್ತೆ. ಯೆಲಕಿಣ್ ಅಟ್ಟೂ ತಿಂದ ತೇಗೆತು. ಇದ್ಕ ಮೆನ್ಯನ್ ದುಮಿ ಹಾಕೇ ಕೊಂದ್ ತೆಗೆಬೇಕು" ಹೇಳ್ತು. ಆಗೆ ಯೇನಂತು, "ವಲಗಿದ್ದೇಯ ಯೆಲ್ಯಣ್ಣ?" "ಅಜ್ಜೀ, ಯಾರೂ ಅಲ್ವೇ, ನಾನೇ ನಿಂದೇ ಮೊಮ್ಮಗಲು - ಕೊಂದ್ ತೆಗೆಬೇಡ" ಹೇಳ್ತು.

ಆವಾಗ್ ಅಜ್ಜಿ ಕೊಂದಲೇ ಇಲ್ಲ. ಊರ ಮೇಲೆ ಬೇಡೂಕ್ ಹೋಗಿ ಅಕ್ಕಿ ತಂತು, ಕೊಡನಲ್ಲಿ ವಂದ್ ಮುಟ್ಟಿ ಇಕ್ತು. ಬಾಕಿ ಬೇಶ್ ಉಂಡ್ತು.

ಉಂಬೆಕಾರೆ ಅಜ್ಜಿಮುದ್ಕಿ ಮನೆಗ್ಗೆ ದನಕಾಯೂಕ್ ಬಂದ ಮೊಮ್ಮಗ ದಿವಶಾಕೂ ಅದರ ಮನೆಗೆ ಬತ್ತಿದ್ದ, "ಅಜ್ಜವ್ವಾ, ಅಜ್ಜವ್ವಾ, ಯಾರ ಕೈಲ್ ಮಾತಾಡತೇ?" ಕೇಲ್ದ. "ಯಾರಿಲ್ಲ, ಮೊಮ್ಮಗನೆ ನನ್ದೇ ಮೊಮ್ಮಗಲದೆ ಮನೆವಲಗೆ." ಹೇಳ್ತು. ಅಮೆ ಅಟ್ಟೇ ಕೇಲ್ಕಂಡಿ, ಮರದಿವಸೆ ದನ ಕಾಯೂಕೆ ಹೋದ. ಅಜ್ಜಿ ಬೇಡೂಕ್ ಹೋಯ್ತು. "ಅಜ್ಜವ್ವಾ, ಇಂದ್ ಯಾರಿವ್ರೆ ನಿನ್ನ ಮನೇಲಿ?" ಕೇಲ್ತ ಬಂದ್ಕಂಡಿ. "ಯಾರಿಲ್ಲಾ ಮಗನೇ, ನಂದೇ ಮೊಮ್ಮಗಲು"

ಹೇಳ್ತು. "ಹಂಗರ್ ನಿನ್ ಮೊಮ್ಮಗಲಿದ್ರೆ ನಾನು ನಾಲಿಕೆ ಹೂಂಗ್ ತಕಬತ್ತೆ. ವಂದ್ ದಂಡೆ ಹೂಂಗ್ ಕಟ್ಟಿಕ್ಕು ಅನ್ನು" ಅಂತ ಹೇಳ್ದ. ಅದ ಕಣ್ಣಗ್ ಕಾನ್ಸಕಣದೆ ದಂಡೆ ಕಟ್ಟಿ ಇಕ್ತು.

"ಹೂಂಗ್ನ ದಂಡೆ ಶಂದಾಗಿದು ಅಜ್ಜವ್ವ." ಮರುದಿವಸ ಬತ್ತಾ, "ಇಂದೂ, ನಾಲಿಗೂ ಹೂಂಗನ ದಂಡೆ ಶಂದಾಗ್ ಕಟ್ಟಿಕ್ಕು ಅನ್ನು" ಅಂತ. ಮರದಿವಶೂ ಹೂಂಗ್ ತಂದ್ ಅಜ್ಜಿ ಕೂಡೆ ಕೊಟ್‌ಹೋಗ್ತ. ಮೊಮ್ಮಗ್ಗು ಹೂಂಗ್ ದಂಡೆ ಕಟ್ಟಿ ಅಜ್ಜಿ ಕೂಡೆ ಕೊಟ್ತು. ಅಜ್ಜಿ ಮೊಮ್ಮಗ್ನ ಕೈಲ್ ಕೊಟ್ತು. ಅವ, "ಚೆಂದ ಮಾಡ್ ಕಟ್ಟದೆ" ಅಂತ– "ನಾಲಿಗ್ ನಿನ್ದೇ ಮೊಮ್ಮಗ್ಗ ನಾ ನಗ್ನಾತೆ. ನನ್ಗೆ ಕೊಟ್ ಬಿಡು" ಅಂತ. ಅದು, "ಆಗೂದು ಮೊಮ್ಮಗನೇ" ಹೇಳ್ತು. ಅದು ಇಲಿ ಮದ್ವಿಗ್ ಯೆಲ್ಲಾ ತಯಾರ್ ಮಾಡ್ಕಂಡಿ, ಕೇಲದಿದ್ದ್ ಊರ್ಗ್ ಯೆಲ್ಲಾ ವಾಲೆ ಬರದಿ, ಕೇಲು ಊರ್ಗೆಲ್ಲಾ ದಂಗ್ಲಾ ಸಾರಸಿಕೊಟ್ಟ. ಮತ್ತೇ ಪೇಟ ಪಟ್ಣಯೆಲ್ಲಾ ಗುಡಿಗಟ್ಟಿ, ಬಾಶಿಂಗ ಕಟ್ಕಂಡು ದಿಬ್ಬಣ ತಕಂಡಿ ಅಜ್ಜಿಮುದ್ಕಿ ಮನೆಗೆ ಬಂದ. ಬಂದ್ರೆ ದಿಬ್ಬಣ ಯೆಲ್ಲಾ ಮನದುಂಬದ್ರು. ಹೆಣ್ಗೆ ಹಾಕೂಕೆ ಶಿನ್ನ ಗಿನ್ನ ಯೆಲ್ಲಾ ತಕಂಡ್ ಹೆಣ್ಣಿಗರೆಸ್ತಿರು. ಹೆಣ್ಣು ಕಾಂಬೂದೆ ಇಲ್ಲ. "ಅಜ್ಜಿ, ನಿನ್ನ ಮೊಮ್ಮಗ್ಲಯೆಲ್ಲದ್ಯೇ?" ಕೇಲಿದ್ರು. "ನಾ ಇಲ್ಲೇ ಈವೆ. ನಿಮ್ಮದೆಲ್ಲಾ ಕೆಲಶಾ ಶಾಗ್ಸಿ" ಹೇಳ್ತು ವಲಗಿದ್ದೇಯ. "ಹೂಂಗು, ಶಿನ್ನ ಯೆಲ್ಲಾ ಅಲ್ಲೇ ಇಡಿ, ನಾ ಮುಡ್ಕಂತೆ" ಅಂತ್ ಹೇಳ್ಕಂಡಾದ ಮೇಲೆ, ಶಿನ್ನ ಗಿನ್ನ ಹರವಣದಲ್ ಹಾಕಿ ಕೊಟ್ರು. ಆವಾಗ ಇನ್ನೆ ಊಟ-ಉಪಚಾರ ಯೆಲ್ಲಾ ಮಾಡದ್ರು. ಊಟ ಮಾಡ್ಕಂಡು ಇನ್ ದಿಬ್ಬಣ ಶವನ್ಸ್ ಕಂಡಿ ಗಂಡನ ಮನೆಗ್ ಕಲ್ಸುಕಾಯ್ತುಲ್ರೀ? "ನಾನಿಲ್ಲೇ ಈವೆ. ನೀವೆಲ್ಲಾ ಮುಂದಾಗಿ, ದಾರಿ ಸಾಗ್ಸಿ, ನಿಮ್ಮ ಬೆನ್ಗೆ ನಾ ಬತ್ತೆ" ಹೇಳ್ತು. ಆಗೇ ಅವರು ಮುಂದೆ ಹೋದ್ರು.

ಹಿಂತಿರ್ಗಿ ಹಿಂತಿರ್ಗ್ ನೋಡ್ತಿರು. "ನೀವು ಹಿಂತಿರ್ಗ್ ಯೆಂತಕ್ಕೆ ನೋಡುದೂ? ನಿಮ್ ಬೆನ್ಗೆ ನಾ ಬತ್ತೆ" ಹೇಳ್ತಿದು. ಶಿನ್ನನೂ ಹಾಕಂಡಿತ್ತು, ಬಣ್ಣಾನೂ ಹಾಕಂಡಿತ್ತು. ನೋಡುರೊಲಗೆ ಯೆಲೆ ಮುಚ್ ಹಾಕಂಡ್ ಬಿಡ್ತದೆ. ಅವ್ನ್ ಹೋದ ಹಾಗೇ ಹೋತಿದು. ಅವ್ರ್ ಮನೆಗ್ ಹೋದ್ರು. ಹೋಕಂಡಿ 'ಸಾಜ ಮಾಡಬೇಕು' (ಬಂದ ಕೂಡ್ಲೆ ಕುಸಾಲವು ಮಾಡುದಿಲ್ವಾ?) ಹೇಳಿ ಕರದರು. "ಮಾಡ್ವರ್ ಮಾಡಿ, ನಾ ಯಿಲ್ಲೆ ಈವೆ" ಅಂತು. ಅಟ್ಟ ಹತ್ಕಂಡಿ. ಮನೇಲಿದ್ದೊರು, "ವಂದ್ ಮಗ ವಂದ್ ಬಂದ ಹಿಂದ್ತಿ ಬರಲಿಲ್ಲ" ಹೇಳಿ ಆಲಚ್ನೆ ಮಾಡತ್ರು. "ನಾ ಇಲ್ಲೆ ಈವ್ನೆ ಮದವಲ್ತಿ, ಬೆನ್ಗೆ ಬಂದಿ" ಅಂತು. ಅವರು ಬತ್ತಗಿತ್ತ ಮೆರೂದ ಬಂತು. "ನನ್ ಪಾಲ ಬತ್ತ ನಾ ಮೆರಕಂತೆ. ನಿಮ್ ಪಾಲ ಬತ್ತ ಮೆರಿರಿ" ಅಂತು. ಅದ್ರ ಪಾಲ ಬತ್ತ ಇಕದ್ರು. ರಾತ್ರಿಗೆ ಯೆಲ್ಲಾ ನೋಡ್ದರು. "ಲಾಯ್ಕ ಮೆರದಿದಿ" ಹೇಳ್ತರು. ಮನೆಗೆಲ್ಲಾವ ಹಲಿ (ರಂಗೋಲಿ) ಹೊಯ್ಯುಕ್ ತಯಾರ್ ಮಾಡ್ದ್ರು. ಅವ್ರ ಪಾಲೆಲ್ಲ ಹೊಯ್ಕಂಡ್, ಅದ್ರು ಪಾಲು ಅಲ್ಲೆ ಇಟ್ರು. ಅದ ಇದ್ದಟ್ ಯೆಲಿಗೋಲೆನೂ ಕರದಿ ಶೇಡಿ ಗಟ್ಟೆಲ್ ಬಾಲ ಹಚ್ತಿದು, ಗೋಡೆಗ್ ಬಡಿತದೆ.

ಬೆಲಗಾಗ್ ನೋಡ್ತ್ರು. "ಹೊಸ ಮದವಲ್ತಿ ಲಾಯ್ಕ ರಂಗೋಲಿ ಹೊಯ್ದದೆ" ಹೇಳಿ ನೋಡ್ತ್ರು. ನೀರ ತರುಕ್ ಹಣ್ಕದ್ರು. ಅವರ ಪಾಲ ಯೆಲ್ಲಾ ನೀರ್ ತಂದ್ಕಂಡಿ, ವಂದ್

ಕೊಡ ಹಗ್ಗ ಅಲ್ಲೆ ಇಟ್ರು. ರಾತ್ರಿಗೆ ಅದ್ ವಬ್ಲೇ ಬಂದಿ ಕೊಡದೊಲ್ಗೆ ಹೊಕ್ಕಿ ಹಗ್ಗ ಬಿಡಕ್ಹೋಗಿ ಬಾವಿಲ್ ಬಿದ್ಬಿಡ್ತು. ಅವರು, "ಬಾವಿಲೆ ಹೆಣ್ಣೇ ಬಿತ್ತು" ಅಂತ ಹೇಳಿ ಗಂಡ ಬಂದ. ಯಲಿಬುಡ್ಕ ಬಾವಿಲ್ ಬಿದ್ದಿ ಹೆಣ್ಣಾಯ್ತು. ನೆಗ್ದ್ ಬಿಟ್ಟ ಅವ. ಗಂಡ-ಹಿಂಡ್ತಿ ಮನ್ಯೋರು ಯೆಲ್ಲಾವ ಸುಕದಲ್ ವಲ್ಕಂಡ್ರು.

- **ಕೆಲವು ಪದಗಳ ವಿವರಣೆ**

| | |
|---|---|
| ಕುಂತದಿವಸ = ಸತ್ತದಿವಸ | ಯೆಲಿಪುಡಕ = ಇಲಿ |
| ಮೆನ್ಸ್ಯನ್ = ಮೆಣಸಿನ | ದುಮಿ = ಹೊಗೆ |
| ಶಿನ್ನ = ಚಿನ್ನ | ಬೇಶ್ = ಬೇಯಿಸಿ |
| ಅಮೆ = ಅವನು | ಶವನ್ಸ್ = ತಯಾರು ಮಾಡಿಕೊಳ್ಳುವದು |
| ಮೆರೂದು = ಕುಟ್ಟೂದು | |

▪ ಹೇಳಿದವರು : **ದಿ. ರಾಮಕೃಷ್ಣ ಮಾರು ಗೌಡ,** ಕಲ್ಕ್ಯೋಡು, ಹೆಗಡೆ ಊರು.

❖

# ಮಾತಿಗೆ ತಪ್ಪಿದ ನರಿ

ಪರಮೇಶ್ವರ ಪಾರ್ವತಿ ಬಾಳೆಕೊನೆ ಹಣ್ಣಿಗೆ ಹಾಕಿದ್ದರು. ನೆಂಟರ ಮನೆಗೆ ತಕ್ಕೊಂಡು ಹೋಗಬೇಕೆಂದು, ಹಣ್ಣಾಯಿತು. ಪರಮೇಶ್ವರ, ಪಾರ್ವತಿ ಇಬ್ಬರೂ ಪಾರ್ವತಿ ಅಪ್ಪನ ಮನೆಗೆ ಹೋಗಲಿಕ್ಕೆ ತಯಾರಾದರು. ಬಾಳೆಕೊನೆ ಪರಮೇಶ್ವರ ಹಿಡಕೊಂಡು ಮುಂದಾದ. ಪಾರ್ವತಿ ಹಿಂದಾದಳು. ದಾರಿಯಲ್ಲಿ ನರಿ ಕಂಡಿತು. ಬಂದು "ಸ್ವಾಮೀ" ಅಂತು. "ನೀವು ಇಟ್ಟ ದೊಡ್ಡವರು, ಬಾಳೆಕೊನೆ ಹಿಡಕೊಂಡು ಹೋಗೂದು ದೊಡ್ಡ ಮಾತ್ಯಾಗೋಕು. ನಾನು ನಿಮ್ಮ ಆಳಾಗಿ ಹಿಡಕಂಡು ಬರುತೇನೆ" ಅಂತು. "ನರೀ, ಈ ಬಾಳೆ ಹಣ್ಣು ಒಂದೂ ತಿನಬಾರದು" ಅಂದ ಪರಮೇಶ್ವರ. "ತಿನ್ನುದಾದ ಪಕ್ಷಕ್ಕೆ ನನ್ನ ಕಣ್ಣಿಗೆ ಕಾಣಿಸಬೇಕು. ಹೊರ್ತು ತಿನ್ನೂಕಾಗ" ಅಂದ.

ಸ್ವಾಮಿ ಮುಂದೇ, ಪಾರ್ವತಿ ಹಿಂದೆ– ಇದು ಮತ್ತೆ ಹಿಂದೆ ಹೋಗುವಾಗ ಬಾಳೆಕೊನೆ ನೋಡಿಕೊಂಡು ನರಿ, "ಕೊಟ್ರೆ ತಿಂತೆ ಸ್ವಾಮಿ, ಆಸ್ರ ತಡುಕಾಗುದಿಲ್ಲ" ಅಂತಿದು. "ಹಾ? ಆಗೂದಿಲ್ಲ... ಇಲ್ಲ." "ಒಂದ್ ಕೆಲಸ ಮಾಡು. ನೆಲಕೆ ಮಂಡಿಹೊಡೆ" ಹೇಳಿದ. ಹೊಡೆದ

ಕೂಡಲೆ ನೀರು ಬಂತು. "ಬೇಕಟ್ಟು ಕುಡಿ" ಅಂದ. ಕುಡೀತು. ಮುಂದೆ ಹೋತಿರವಾಗ ಹಶಿ ತಡುಕಾಗ್ನಿಲ್ಲ, "ಹಶ್ವಾತಿದು" ಅಂತು. "ಅಲ್ಲಿ ಹೋಗಿ ಯಲೆ ಕೊಯ್ಕಂಡ್ ಬಾ. ಯಲೆ ಕೊಯ್ದಿ ಹಾಕ್ವ್ ಅನ್ನಾಗ್ತದೆ" ಹೇಳಿದರು. ಯೆಲೆ ಹಾಶಿಕಂಡ್ ಕುಳಿತಿತು ನರಿ. "ಬೇಕಟ್ಟ ಉಣ್ಣಪ ಅನ್ನಾ" ಅಂದ. ಉಂಡಿತ್ತು. ಮುಂದೆ ಹೋಗತ, "ದಣಿವಾಗಿ ನಡುಕಾಗುದಿಲ್ಲ" ಅಂತು. "ಗುಟ್ಟ ಕಿತ್ತಕಂಡ್ ಬಾ" ಅಂದ– ತಂತು. "ಗುಟ್ಟದ ಮೇಲೆ ಕುಳ್ಳು" ಅಂದ. ನರಿ ಕುಳಿತಿತು. ಸ್ವಾಮಿ ಬೆನ್ನೆ ಗುಟ್ಟ ಹೊತ್ತಿರು. 'ತನ್ನಾರೆ ಹೇಗೆ ಮಾಡಿದರೂ ನಮಗೆ ಕೊಡುದಿಲ್ಲ' ಹೇಳಿ, ನರಿ ವಂದ ಹಣ್ಣು ಹಿಸಿದು, ಸೊಲಿದು ತನ್ನ ಕಣ್ಣಿಗೆ ಕಾಣಿಸಿದ್ದು, ತಿಂದದ್ದು. ಐದಾರ ತಿಂತು. "ಏ ನರೀ, ಯಾಕೆ ತಿಂತೆ? ಹೇಳಿಲ್ವೋ?" "ನೀವು ಹೇಳಿದ ಹಾಗೇ ಮಾಡಿದೆ", "ಯಾರ ಕಣ್ಣಿಗೋ?" "ನನ್ನದಕ್ಕೆ..." "ಮಹಾರಾಯ, ನಿನ್ನ ತಳ್ಳಿಬೇಡ" ಅಂದ. ಹೊಡೆಬೇಕಂಬಟ್ಟರಲ್ಲಿ ಬಾಳೆಕೊನೆ ಹಾಕಿಟ್ಟು ಓಡಿತು.

"ಏನೇನೂ ಶಿಕ್ಕಬಾರದು ಇದಕ್ಕೆ ಯಶಡಿಯಾಗಲಿ, ಹಣ್ಣಾಗಲಿ ಶಿಕ್ಕೂದಬ್ಯಾಡ". ಹಳ್ಳದ ದಂಡೆಗೆ ಯಶಡಿ ಹೊರಬೆಮಾಡೀತು. ಆ ಹೊರಬೆಲ್ ಹೊಕ್ಕಂಡ. "ಸ್ವಾಮಿದೆ ಆಟ ಪೂರ. ಯಶಡಿಯೂ ಇಲ್ಲ" ಅಂತ ಬಂತು. ಒಂದು ಜರಗಿತ್ತಪ್ಪ. "ಯಶಡಿ ಇರುದ್ವು!" ಅಂದಿ ಕೈಹೆಟ್ಟಿತು. ಕೂಡಲೆ ಪರಮೇಶ್ವರ ನರಿ ಕೈಹಿಡಿದ ಬಿಟ್ಟ. "ಹಾಹಾಹಾಹಾ!" ಹೇಳಿ ನಗೆಯಾಡಿರು. "ಈ ಜರಗಿನಲ್ಲೇ ನೀ ಇರವೆ ಎಂದ್ ಹೇಳಿ ಕೋಲ ಹೆಟ್ಟಿದ್ದೆ" ಅಂತು. "ಕೋಲ ಬಿಟ್ಟರೆ ಏನ್ ಮಾಡೂದು?" ಅಂದಿ ಬಿಟ್ಟಾ, "ನಾ ಶಾಣ್ಯೋ, ನೀ ಶಾಣ್ಯೋ? ಕೈಯ್ಯೆ ಆಗಿತ್ತು" ಅಂತು.

ಅತ್ತಿ ಹಣ್ಣ ರಾಶಿ ಮಾಡಿ ಅಲ್ಲಿ ಹೊಕ್ಕಂಡ ಪರಮೇಶ್ವರ. "ಗುತ್ತಾಯ್ತು? ಗುತ್ತಾಯ್ತು? ಅತ್ತಿ ಹಣ್ಣ ರಾಶಿಲ್ ಹೊಕ್ಕಂಡ್ಯ?" ಅಂದು, ಬೇಡವೆಂದು ಬಿಟ್ಟಿತು. ಏನೂ ಶಿಕ್ಕದಂಗೆ ಮಾಡಿದ ಮೇನೆ, "ಅಕ್ಕೈರಿಕೆ ಆಶ್ರಾರು ಕುಡೂಕೆ" ಅಂದಹೇಳಿ, ಮಣ್ಣಕಂಟೆ ಕೊಚ್ಚಿತು. ನೀರು ಬರಲಿಲ್ಲ, ಹುಡಿಯಾಗಿ ಹೋಯ್ತು– ಮಣ್ಣಕಂಟೆ. ಯದ್ದ ತಿರುಗುಕಾಗುದಿಲ್ಲ... ಗುಟ್ಟತಂತು, "ಒಂದು ಕಂಡ್ರಿಗೆ ಹೊಡೆದ ಗುಟ್ಟ ಇಟ್ಟೀಯ?" ಹಾಗಿದ್ದದ್ದು ನೆಗಿದು ಹಾರಿ ಹತ್ತಿದ ಕೂಡ್ಲೆ ಪುಕಳಿಲ್ ಹೊಕ್ಕು ನರಿ ಪಡಶಿ.

- **ಕೆಲವು ಪದಗಳ ವಿವರಣೆ**

ಮಾತ್ಮೆ = ಬಾತ್ಮೆ
ಹೊರಬೆ = ಬಿಲ
ಕೆಯ್ಯೆ = ಕೈ
ಪಡಶಿ = ಸತ್ತುಹೋಯ್ತು
ಹಿಸಿದು = ಎಳೆದುಕೊಂಡು
ಜರಗು = ಹೊಂಡ
ಮಣ್ಣಕಂಟೆ = ಮಣ್ಣಹೊಂಡ

▪ ಹೇಳಿದವರು: **ದೇವು ನಾಗ ಗುನಗ (ಗೌಡ)**

# ಯಮನ ಬೆಳ್ಳಿಯ ತೊಟ್ಟಿಲು

ದೇಸದಲ್ಲಿ ವಬ್ಬ ಅರಸನಿದ್ದನಂತೆ. ಗಂಡ-ಹಿಂಡ್ತಿ ಯೆರಡ ಜನರಾಗಿತ್ತು. ಆದ್ರೆ, ಹುಡಗರ ಸಂತತಿಯೋಗವೇ ಇಲ್ಲ. ಜಮೀನು, ದುಡ್ಡು, ಬಂಗಾರ ಬಹಾಳದೆ. ಅಲ್ಲೇಯ ಚಿಂತೀ ಮಾಡ್ತ ಇರಬೇಕಿರೆ, ವಬ್ಬ ಬ್ರಾಹ್ಮಣರು ಬಂದರು. ಬಂದರೆ ಅದ್ಯೇನ ಮಾಡ್ತಪಾ? ತನಗೆ ಹುಡ್ಗರ ಸಂತತಿ ಯೋಗಿಲ್ಲಾಲ್ಯೋ? ಹೇಳಿ ಯೆರಡೂ ಕೈಲಿ ಹಿಡಿವಷ್ಟು ನಾಣ್ಯದ ವರ ತಂದ್ ಕೊಟ್ ಬಿಟ್ಟು. "ನಾನು ನಾಣ್ಯದ ವರ ತಕಂಡ್ ಹೋಗುಕ್ ಬಂದವಲ್ಲಾ. ತನ್ಗ್ ಬೇಕಾದದ್ದು ವಂದ್ ಮುಟ್ಟಿ ಬಿಕ್ಸಿ" ಹೇಳಿ, ಆ ನಾಣ್ಯ ತೆಗ್ದ್ ವಗ್ದ್ ಬಿಟ್ಟ. ವಗದು, ಅಲ್ಲೇ ಅವರ ಮನೆ ಸಮೀಪದಲ್ಲಿ ವಂದ್ ವಿಸ್ರಾಂತಿ ಗೃಹ ಇತ್ತು. ಇದ್ರೆ ಅಲ್ ಹೋಗಿ ಮಿಂದ್ ಬಂದ್ಕಂಡು ತಪಸಿಗೆ ಕೂತರು.

ಕೂತ ಕೂಡ್ಲೆಯ ಇತ್ಲಾಗ್ ಗಂಡ ಹೇಳವವ ಹನ್ನೆರಡಗಂಟೆ ಕೂಡೆ ಊಟಕ್ ಬಂದಾ. ಬಂದಕೂಡಲೇಯ ಯಾವಾಗೂ ವಂದ್ ಚಂಬ್ಗ್ ನೀರ್ ತಂದ್ ಕೊಡ್ತಿತ್ತು ಅದು. ಇವತ್ತು ಬಹಳ ದಾರಾಕರವಾಗಿ ಕಣ್ಣೀರ್ ಬಿಡ್ತಾ ಕೂತ್ಕಂಡದೆ.

"ಬಹಳ ವ್ಯತೆಯಿಂದ ನೀನು ಬಾಗ್ಲಲ್ ಕಣ್ಣೀರ್ ದಾರಾಕಾರವಾಗ್ ಬಿಡ್ತ್ ಕುತ್ಕಂಡಿದ್ದೆ. ಕಾರಣವೇನು?" ಕೇಳ್ದ ಗಂಡ.

"ಮತ್ ಯಾವದೂ ವಿಸಯ ಇಲ್ಲ. ವಬ್ಬ ಬ್ರಾಹ್ಮಣರು ಬಂದಿದ್ದರು. ನಮಗಂತೂ ಹುಡುಗರ ಸಂತತಿ ಯೇನಿಲ್ಲ ಹೇಳಿ, ಯೆರಡ ಮುಷ್ಟಿಯಾಗುವಷ್ಟು ನಾಣ್ಯದ ವರ ಕೊಟ್ಟಿದ್ದೆ; ಅವರು ಬೀಸಾಕ್ ಹೋದ್ರು."

"ಯೆಲ್ ಹೋದ್ರು ಅವರು?" "ಇಲ್ಲೇ ಸಮೀಪದಲ್ಲಿ ವಿಸ್ರಾಂತಿ ಗೃಹ ಅದೆ. ಅಲ್ ಹೋಗಿ ತಪಸ್ಸಿಗ್ ಕುಂತಾರೆ." ಅವಾಗ ತಾನ್ ಹೋಗ್ ಬರ್ತೆ ಹೇಳಿ ಆ ಬ್ರಾಹ್ಮಣ ಇದ್ದಲ್ ಅರಸು ಹೋದ. "ಯಾವ ಕಾರಣದಿಂದ ಬಂದೆಯಪ್ಪಾ ಅರಸು?" ಹೇಳಿ ಬ್ರಾಹ್ಮಣರು ಕೇಳುದ್ರು.

"ನಾನು ಯಿಲ್ಲಾದ್ ವೇಲೆದಲ್ಲಿ ನನ್ನ ಹಿಂಡ್ತಿ ತನಗೆ ಹುಡ್ಗರ ಸಂತತಿ ಯೋಗಿಲ್ಲಾಲ್ಯೋ? ಹೇಳಿ ನಾಣ್ಯದ ವರವ ನಿಮ್ಗ್ ಕೊಟ್ಟಂತೆ. ನೀವ್ ಬಿಸಾಕ್ ಬಂದಿದ್ರಂತೆ. ಅದಕಾಗಿ ನಮ್ಮ ಹುಡ್ಗರ್ ಸಂತತಿ ಪರಿಸ್ತಿತಿ ಏನಪ್ಪ ಮುಂದೆ?"

"ಹಾಗಾದ್ರೆ, ನೀನು ಇದಕಾಗೇ ಅಷ್ಟು ಹೆದರಿದ್ದು, ನಿನ್ಗೆ ಹುಡ್ಗರ ಸಂತತಿಯೋಗ ಕೊಟ್ಟೇ ಬಿಡ್ತೆ" ಅಂದ್ ಹೇಳ್ದ್ರು ಮತ್ತೆ. ಪರತ್ ಅವ್ರ್ ತಿರ್ಗ್ ನೋಡ್ವಲಿವರೆಗೆ, "ನಿನ್ಗ್ ಕೊಡ್ತೆ ಅಂದದಕ್ಕೆ ಕೊಟ್ಬಿಟ್ಟೆ. ಆದ್ರೆ, ವಂದ್ ಕೆಲಸ ಉಪರಾಟಿಯಾಗ್ ಹೋಯ್ತು" ಅಂದ್ ಹೇಳ್‌ದ್ರು, "ಹದಿನೈದ್ ವರ್ಸ ಆಯುಸ್ಯ ಅದೆ ಹುಡಗನಿಗೆ" ಹೇಳ್‌ದ್ರು.

“ಹಾಗಾದ್ರೆ, ಹದಿನೈದ್ ವರ್ಸ ಆಗ್ವವರೆಗೆ ಇದ್ರೆ ಹುಟ್ಯೇನ್ ಪಲ?” ಕೇಲ್ದ ಅರಸು. “ಕಾಸಿಗ್ ಕಲಿಸ್ಕೊಟ್ರೆ, ಕಾಸೀಯಾತ್ರೆ ಮಾಡ್ ಬಂದ ನಂತ್ರದಲ್ಲಿ ಅವನ ಮರಣ ತಪ್ತದೆ” ಹೇಳ್‌ದ್ರು ಅವರು.

ಆವಾಗವ್ರ್ ನೆಡ್ದ್ ಬಿಟ್ರು. ಅಷ್ಟೆ ಹೇಳಿಕ್ಕಿ. ಇಲ್ಲಿ ಅರಸು ಹಿಂಡ್ತಿ ಗರ್ಬಿಣ್ಯಾಗುವಂತದಾಯ್ತು. ಗರ್ಬಿಣ್ಯಾಗಿ, ಯೆಂಟೂ ವಂಬತ್ನೆ ತಿಂಗಲಕ್ಕೆ ಜನನಾಯ್ತು ಅದು.

ಆಗಿ, ವಂದ್ ಹುಡ್ಗನೇ ಹುಟ್ದ ಅದ್ಕೆ. ಆ ಹುಡ್ಗನಿಗೆ ಚಲೋ ಮಾಡಿ, ಸಾಕಿ ರಕೋಲಿ ಮಾಡ್ವಂತೋರಾದ್ರು ಅವರು. ಹತ್ ಹನ್ನೆರಡ್ ವರ್ಸ ಆಗತಾ ಬಂತು ಅವನಿಗೆ, ಹದ್ನೈದ್ನೇ ವರ್ಸ ತಾಗ್ತು ಅನ್ವಷ್ಟಕ್ಕೆ ಹಿಂಡ್ತಿ ಹತ್ರ, “ನಿನ್ನ ಅಣ್ಣಗೆ ವಂದ್ ಕರ್ಯಾ ಮಾಡಬೇಕು” ಅಂದಾ.

ಅಣ್ಣನ ಹೋಗಿ ಕರಕಂಡ್ ಬಂತು ಅದು. “ಮತ್ತೆ ನಿನ್ನ ಕರದದ್ದು ಯಾತಕೂ ಅಲ್ಲ. ನಿನ್ನ ಅಲಿಯನೀಗೆ ಕಾಶೀಯಾತ್ರೆ ತೋರ್ಸ್‌ಕಂಡ್ ಬರಬೇಕು” ಹೇಳ್ದ ಬಾವನ ಹತ್ರ.

ಅವನ ಕರಕಂಡಿ ಕಾಸೀಗ್ ಹೋಗ್ವಂತೋನಾದ ಹುಡ್ಗನ ಮಾವ. ಹೋಗ್ ಹೋಗ್ ಹೋಗಿ ಸಾದಾರಣ ಐದ್ ಗಂಟೆ ಆಗ್ ಹೋಯ್ತು. ಬೇರೆ ಊರಿಗ್ ಹೋಗಿ ಅಲ್ಲೇ ವಂದು ಅಸ್ವಂತ್ ಕಟ್ಟೆತ್ತು. ಕಟ್ಟೆ ಮೇಲ್ ಹೋಗಿ ಕುಲ್ವಂತೋರಾದ್ರು.

ತಕಂಡ್ ಹೋದ ಊಟಾ, ಆಸ್ರಿ ಯೆಲ್ಲವಾ ಕೈಕಾಲ್ ಮೋರೆ ತೊಲದಿ, ಊಟಾ ಮಾಡ್ತೆ ಕುಂತಿರು. ಅಲ್ಲೇ ಕಟ್ಟೆ ಕೆಲ ಬದಿಗೆ ವಂದ್ ಅರಸನ ಹುಡಗಿ ಲಗ್ನ ದಿಬಣ ಬರತದೆ ಬೇರೆ ಊರಿಂದ.

ಆವಾಗೆ ಅರಸನ ಹುಡ್ಗಿ ಹೂಂಗ ಕೊಯ್ಯುಕೆ ಬಂದಿತ್ತು. ಇವರ್ ಯೆರಡ್ ಜನ್ರಲ್ಲಿ ಕಟ್ಟೆ ಮೇಲ್ ಕುಂತ್ಕಂಡದ್ ಕಂಡ್ತು. “ಅಲ್ಲಿ ಕುಂತಕಂಡವರು ಯಾರಾದ್ರೂ ತನಗಿಷ್ಟ್ ಹೂಂಗ್ನ ಮೊಕೆ ಕೊಯ್ದ್ ಕೊಟ್ಟಿದ್ರೆ ಅವರ್ ಕೇಲ್ದ ವರು ಕೊಟ್ ಬಿಡ್ತಿದ್ದೆ” ಅಂತು ಅದು.

ಆವಾಗಿವ್ರ್ ಹೋಗಿ, ಹೂಂಗ್ನ ಮೊಕೆ ಕೊಯ್ದ್ ಕೊಟ್ರು, “ಕಾಶೀಕ್ ಹೊಗ್ತ್ರು” ಅಂದರು ಅವರು. ಈ ಕಾಶೀಗ್ ಹೋದ ಹುಡ್ಗನ ಮೇಲೆ ಸಂಪೂರ್ಣ ಮನಸಿಟ್ತು ಅದು- ‘ಇವನೇ ಆಗಬೇಕಾಗಿತ್ತು ತನ್ನ ಗಂಡ’ ಹೇಳಿ. ಮನಶ್ನಲ್ ಮಾಡಕಂಡು, “ನೀವ್ ಕಾಸೀಗ್ ಹೋಗ್ ಬರಬೇಕಿದ್ರೆ, ಇಲ್ಲೇ ನಮ್ ವಂದ್ ಕಾನಾವಲ್ಯದೆ. ನಮ್ ಕಟ್ಟಿ ಕೆಲಗೆ ಇಲ್ಲೇ ಊಟಕ್ ಬರಬೇಕ್ ನೀವು” ಹೇಳ್ತದು.

ಆವಾಗವ್ರ್ ಕಾಸಿಗ್ ಹೋದ್ರು. ಹೋಗ್ ಹೋಗ್ ಹೋಗ್ ಸಾದಾರಣ ಕಪ್ಪಾಗ್ ಹೋಯ್ತು. ಅತ್ಲಾಗಿಂದ ದಿಬಣ ಬಂತು - ಆ ಹುಡಗಿ ಲಗ್ನಕೆ. ಆವಾಗ್, “ನೀವ್ಯಲ್ ಹೋಗವ್ರು?” ಕೇಲ್ದ್ರು ಅವರು.

“ನಾವ್ ಕಾಸಿಗ್ ಹೋಗ್ವವರು” ಅಂದ್ರು. “ರಾತ್ರಿಗ್ ಯೇನ್ ನೆಡಿಲಿಕ್ಕಾಗತದೆಯೋ? ಬೆಲ್ಗಾಗ್ ಹೋಗಲಕ್ಕಿ. ನಮ್ಮ ಹುಡಗ ಜೀವದಲ್ ಅಸಕ್ತಿ ಅವಗೆ. ದಾರೆನೀರ್ ಬೀಲ್ವಲ್ಲಿವರೆಗ್,

ಬಾಶಿಂಗ ವಂದ್ ಕಟ್ಕಂಡ್ ಹೋಗಬೇಕು. ಈ ಹುಡ್ಗನಿಗೆ ಮತ್ತೆ ದಾರೆನೀರ್ ಬಿದ್ದ ಕೂಡಲೆ ನಿಮಗೆ ವಂದ್ ಕೊಲ್ಗ ರುಪಾಯಿ ಅಲ್ದ್ ಕೊಟ್ ಬಿಡ್ತೆ ತಾನು."

ಆವಾಗಾ ಹುಡ್ಗನಿಗೆ ಬಾಶಿಂಗ್ ಕಟ್ಕಂಡಿ, ಪರತ್ ಬರುವಂತೋರಾದ್ರು. ಹುಡಗಿ ಮನೆಗೆ ಬಂದ ಕೂಡಲೆ, ಅವರಿಗೆ ಆಸ್ರ-ಗೀಸ್ರ ಕೊಟ್ಟೆ ಆ ಹುಡ್ಗನಿಗೆ ಬಾಸಿಂಗ ಕಟ್ಟಿ ಮಂಟಪದಲ್ ತಕಂಡ್ ಹೋಗ್ ಕುಲ್ಸ್ದ್ರು.

ಆನಂತರ ಬಟ್ರು-ಬಿಟ್ರು ಯೆಲ್ಲಾ ಕೂಡಿ, ಹೋಮದ ಕೆಲಸ ಮುಗಿಸಿ ಆ ಹುಡಗಿ, ಆ ಹುಡಗನಿಗೆ ದಾರೆ ಮಾಡ್ವಂತವರಾದರು. ಮೂರು ತೊಲೆದ ವಂದ್ ಶಿನ್ನದ ಉಂಗಲ ಮಾಡ್ಸಿತ್ತು ಆ ಹುಡಗಿ. ಗಂಡನಿಗೆ ಹಾಕಲಿಕ್ಕೆ ಇವನ ಕೈಗ್ ಹಾಕ್ತು. ತನ್ನ ಹೆಸರ ಹಾಕಿ, ಐದ ತೊಲೆಯ ಬಂಗಾರದ ಶೈನ ಮಾಡ್ಸಿತ್ತು. ಇವನ ಕೊಲ್ಲಿಗೆ ಹಾಕ್ತು.

ದಾರೆನೀರ್ ಬಿಟ್ಟೆ ಇತ್ಲಾಗ್ ಸಕ್ರೆ-ಬಾಲೆಹಣ್ ಯೆಲ್ಲಾ ತಿಂದಿ, "ಇನ್ ವಲಿಲಿಕ್ಕೆ ನಮ್ಗ್ ಅವಕಾಸೀಲ್ಲ ನಾವ್ ಹೋಗ್ತ್ರು." ಆ ಮದಮಗನ ಅಪ್ಪನ ಹತ್ರ. "ವಂದ್ ಕೊಲಗ ಹಲೆರೂಪಾಯಿ ಅಲ್ದ್ ಕೊಡು, ನಾವ್ ಹೋಗತ್ರು" ಹೇಳ್ ಅಂದ್ರು. ರೂಪಾಯ್ ಕೊಟ್ಟ ಅವ, ಅಲದಿ ವಂದ್ ಕೊಲ್ಗ.

ಆವಾಗವರು ಬಂದಿ, ಅದೇ ಕಟ್ಟೆ ಮೇಲೆ, "ಬೆಲ್ಗಾಗೆದ್ ಹೋಗುಕಾಯ್ತು" ಹೇಳ್ ಅಲ್ಲೇ ಮಲ್ಗಿದ್ರು. ಮಲ್ಗ್‌ದ ಕೂಡಲೇಯ, ಇತ್ಲಾಗ್ ಮಾವನೀಗ್ ಅಲೀನಿಗ್ ನಿದ್ ಬಿದ್ ಕೂಡಲೇ ಹದನೈದ್ ವರ್ಶಾಗ್ ಹೋಯ್ತು. ಅವನ್ದು ಪ್ರಾಣ ಹೋಗ್ ಹೋಯ್ತಲ್ಲಿ. ಮಾವನಿಗೆ ಗುತ್ತೆಲ್ಲ. ಆ ಹುಡಗಿ, "ತನ್ನ ದಾರೆ ಮಾಡ್ಕಂಡ್ ಹೊಗರಗೂ ಬಾಯ್ವಾರ್ಕಿಗೆ ತಾನು ಕೊಡಲಿಲ್ಲ" ಅಂದ್ವೇಳಿ. ತಿನ್ನಲಿಕ್ಕೆ, ಕುಡಿಲಿಕ್ಕೆ ಹಾಲು, ಹೋಲ್ಗಿ-ಬೀಲ್ಗಿ ಮಾಡಿದ್ದೆಲ್ಲ ತಕಂಡಿ ಹರಬಾಣದಲ್ ಹಾಕಂಡು, ಕಟ್ಟಿಗ್ ಬಂತು. ಆದ್ರಲ್, ಕಟ್ಟೆಗ್ ಬಂದ್ ನೋಡ್ವಲ್ಲಿವರೆಗೆ ಗಂಡನ ಪ್ರಾಣ ಹಾರಹೋಗದೆ.

ಆವಗ್, "ಮದುವೆಯಾಗಿ ತನ್ನ ಗಂಡನ ಪ್ರಾಣ ಹೋಯ್ತಲ್ಲವೇ?"

ಅಲ್ಲೇ ಕಟ್ಟೆ ಮೇಲೆ ವಂದ್ ಹೋಮದ ಹೊಂಡಿತ್ತು. ಹೋಮದ ಹೊಂಡದಲ್ಲಿ ಆ ಹರಬಾಣ ವಂದಿಟ್ಕಂಡಿ, ಯತೆ ಮಾಡ್ತೇ ಕುಂತಿತ್ತು. ದ್ಯಾನ ಮಾಡ್ತೇ ಕುಂತಿತ್ತು. ಈ ಹುಡ್ಗ ಪ್ರಾಣ ಬಿಟ್ಟಿದ್ದು ಕೈಲಾಸ್ದಲ್ ಈಸ್ವರನೀಗೆ ಸುದ್ದಿಯಾಗಿ, ಆ ಹೆಣನ ತಕಬರ್ಲಿಕ್ಕೆ ಯಮನ ಕಲಿಸ್ಕೊಟ್ಟ.

ಯಮನ ಬೆಲ್ಲಿ ತೊಟ್ಲ ಮೇಲ್ ಕಲ್ಸ್, "ಹೋಗ್, ಇಂತಾ ಜಾಗದಲ್ ವಂದ್ ಹೆಣ ಅದೆ; ಬೆಲ್ಲಿ ತೊಟ್ಲಲ್ ಕೂರ್ಸಿ ತಕಂಡ್ ಬಾ."

ಆ ತೊಟ್ಲ ಬಿಟ್ಟದ್ದು ಹೋಮದ ಹೊಂಡದಲ್ಲೇ ಮೇಲೆ ಬಂದ್ ಕುಲ್ತು. ಆವಾಗೀ ಯಮ ಕೋಣ್ನ ಮೇಲಿಂದ ಯೆದ್ದಿ ತೀರ್ ಹೋದ ಹುಡ್ಗನ ಹೆಣ ತೊಟ್ಲಲ್ ಹಾಕ್ದ.

ಯಮ ಹೆಣದ ಮೇಲೆ ಕುಂತಕಂಡಿ, ಮೇನ್ ಕೈಲಾಸಕ್ ಆ ತೊಟ್ಲ ಹೋಗ್ತಾ ಹೋಗ್ತಾ ಇರಬೇಕಿದ್ರೆ, "ತನ್ನ ಗಂಡನೇ ಹೋದನಲ್ಲವೋ? ತಾನಿದ್ದೇನ್ ಸ್ವಾರ್ತಕ?" ಹೇಳಿ, ಆ ತೊಟ್ಲ ಕಾಲ್ ಹಿಡ್ಕಂಡೇ ಅದು ಕೈಲಾಸಕ್ ನಡ್ದ್ ಬಿಟ್ತು.

ಅದು ಹೋಗಬೇಕಿದ್ರೆ ಯಮ ನೋಡಲಿಲ್ಲ. ಕೈಲಾಸಕ್ ಹೋಗ್ ಮುಟ್ಟ ಕೂಡ್ಲೆ ಈಶ್ವರ ಕಂಡ. "ಆಯುಸ್ಯ ಇದ್ದವರ್ನ ತಂದೆಯೋ, ಆಯುಷ್ಯ ಇಲ್ಲದವರ್ನ ತಂದೆಯೋ?" ಹೇಳ್, ವಂದ್ ಪ್ರಶ್ನೆ ಇಟ್ಟ ಆವಾಗೆ.

"ಆಯುಸ್ಯ ತೀರ್ದವರ್ನ ತಂದೆ" ಅಂದ. "ತೊಟ್ಲ ಕೆಲಗೆ ಇದ್ದವರ್ನ ನೋಡು" ಅಂದಾ ಯಮನ ಹತ್ರ. ಆಗ ನೋಡ್ಕಂಡಿ, "ತಾನು ನೋಡ್ಲೇ ಇಲ್ಲಾ" ಅಂದ.

"ನೀನ್ಯಾಕೆ ಬಂದೆ ಇಲ್ಲಿ?" ಹೇಳಿ ಈಶ್ವರ ಕೇಲ್ದ ಹುಡ್ಗಿ ಹತ್ರ. "ನನ್ನ ಗಂಡನೇ ಇಲ್ಲಾದಪೆಟೆಯ ನಾನಿದ್ದೇನ್ ಸ್ವಾರ್ತಕ? ಅದಕಾಗ್ ನಾನ್ ಬಂದೆ" ಅಂತು ಅದು.

"ನಿನಗೆ ಗಂಡ ಶಿಕ್ಕ; ಶಿಕ್ವ ಹಾಗೇ ಇಲ್ಲ. ನಿನ್ನ ಮನೆಗ್ ಕಲಿಸ್ ಕೊಡ್ತೆ. ನೀನು ಮನೆಗೆ ಹೋಗು."

"ನನ್ನ ಗಂಡ ಸಿಕ್ಕಸಿವಾಯ್ ತಾನು ಮನೆಗೆ ಹೋಗುದಿಲ್ಲ" ಅಂತು. "ಗಂಡನ ಬೆನ್ಗೆ ನನ್ನನೂ ಇಲ್ಲೇ ಬಸ್ಮಾ ಮಾಡ್ಬಿಡಿ" ಅಷ್ಟ್ ಹೇಳಿದ ಕೂಡಲೆ ಸಿವನಿಗೆ ವಂದ್ ತರದ ಪಚ್ಚಾತ್ತಾಪ ಆಯ್ತು, "ಇಂತಾ ಹುಡ್ಗಿ ಹಾಲ ಮಾಡಬೇಕಾಗ್ತದಲ್ಲವೋ?"

ಅವನ ಕಮಂಡಲ ನೀರ ಹೊಡದಿ ಹುಡ್ಗನಿಗೆ ಜೀವಾ ಮಾಡ್ಸ್. ಜೀವಾ ಮಾಡ್ಸಿ– ಅದ್ಕ್ ನೂರ ವರ್ಸ ಆಯುಸ್ಸು, ಇವನಿಗೆ ನೂರಾ ವಂದ್ ವರ್ಸ ಆಯಸ್ಸು ಕೊಟ್ಟು ಆವಾಗೆ, ಯಮನ ಹತ್ರ ತೊಟ್ಲ ಮೇಲೆ ಕುಲ್ಸಿ, "ಅವರು ಯಾವ ಜಾಗಾದಲ್ಲಿದ್ರೋ ಅಲ್ಲಿಗ್ ಬಿಟ್ ಬಾ" ಅಂದ್ ಹೇಳಿ ಕಲ್ಸದ.

ಆ ಕಟ್ಟೆ ಮೇಲ್ ತಂದ್ ಬಿಟ್ಟ ಯಮ. ಆವಾಗಿತ್ಲಾಗೆ, ಇಲ್ಲಿ ಮಾವನ ಯೇಲ್ಸಿ, ತಿಂಬೂ ಕಜ್ಜಾಯ-ಬಿಜ್ಜಾಯ ಯೆಲ್ಲಾ ತಕಂಡ್ ಹೋದದ್ದು ಯೆದ್ ತಿನ್ವಂತೋರಾದ್ರು.

"ನಾಲಿ ನೀವ್ ಪರತ್ ಮನೆಗೆ ತಿರ್ಗ್ ಹೊಗಬೇಕಿದ್ರೆ ನಮ್ಮ ಕಾನಾವಲಿಯದೇ, ಆ ಕಾನಾವಲೀಲೆ ಊಟ್ಕ್ ಹೋಗ್ಬೇಕ್ ನೀವು" ಅಂತ ಹೇಳಿ ಹೇಳ್ತು ಅದು.

ಬೆಲಗಾಗ್ ಯೆದ್ದಿ, ಇವರ್ ಮಾವಾ, ಅಲಿನೂವ, ಕಾಸಿಗ್ ಹೋಗವಂತೋರಾದ್ರು. ಹೋಗಿ, ಕಾಸಿ ಯಾತ್ರೆನೇ ಮುಗಿಸಿ ಪರತ್ ಹೋಗ್ವಂತೋರಾದ್ರು. ದಿಬ್ಬಣದವರು ಬೆಲಗಾಗ್ಕೆದ್ದಿ ನೋಡವದರೊಲಗೆ ಅಪ್ಪ ಯೆದ್ದಿ ಹುಡಗಿ ಕರೆತ.

"ತಾನು ಈಗ ಯೇಲುದಿಲ್ಲ" "ಬೆಲ್ಗಾಗದೆ. ಹೊತ್ ಮೂಡಿ ಸಾದಾರಣ ಹತ್ ಗಂಟೆಗೆ ಬಂದದೆ". ರಾತ್ರಿಡೀ ನಿದ್ರಿಲ್ಲ ಆ ಹುಡುಗಿಗೆ ಯೇಲ್ಲೇ ಇಲ್ಲಾ.

"ತನ್ನ ಗಂಡ ಬರವವನವನೆ" ಅಂತ ಹೇಳ್ದ ಕೂಡ್ಲೆ ಈ ದಿಬ್ಬಣದವರಿಗೆ ಕೊಲಗ ರೂಪಾಯೂ ಹೋಯ್ತು; ಹುಡುಗೀನೂ ಹೋಯ್ತು. ಎಲ್ಲ ಆಸೆ ಬಿಟ್ಟಿ ಮನೆಗೆ ಹೋಗವಂತೋರಾದ್ರು ಅವರು. ಸಾಯಂಕಾಲ್ದ ವಲಗಾಗಿ ಕಾಸೀಯಾತ್ರೆ ಮುಗಿಸಿ, ಅಲ್ಲಿಗ್ ಬರವಂತೋರಾದ್ರು, ಅವರು ಕಾಸಿಗ್ ಹೋದವರು.

ಕಾನಾವಲಿಯಲ್ ಊಟಾ ಮಾಡಿ, ಹುಡಗಿ ಗಂಡನ ಕೈ ಹಿಡಕಂಡಿ ಮನೆಗ್ ಕರಕಂಡು ಹೋಯ್ತು ಅಪ್ಪನಿದ್ದಲ್ಲಿ, "ನನ್ನ ಗಂಡ ಕಾಸೀಯಾತ್ರೆ ಮುಗಿಸಿ, ಈಗ ಬಂದರೆ" ಹೇಳಿ ತಾಯಿ-ತಂದೆ ಹತ್ರ ತಿಲಿಸ್ವಂತದಾಯ್ತು.

"ನಾನು ಮಾಡ್ಸಿರವಂತಾ ಶಿನ್ನದ ಉಂಗಲಕ್ಕೆ ಮತ್ತ್ ಕೊಲ್ಲಿಗ್ ಹಾಕ್ದ ಶ್ಯೆನಗೆ ನನ್ನದೇ ವಿಲಾಸ ಹಾಕಿದ್ದೇನೆ. ಇದೇ ನನ್ನ ಗಂಡನ ಕೊರಲಲ್ ಇಟ್ಟದ್ದೇ ಹೌದು. ಹಾಕಿದ್ದೇನೆ ನಾನು". ಆವಾಗ ಅವರು ಊಟ-ಉಪಚಾರ ಯೆಲ್ಲಾ ಮುಗಿಸಿ, ಅವರಿಗೆ ಕೊಡ್ವಂತಾ ಉಡಗರೆ, ವಸ್ತ್ರಯೆಲ್ಲಾ ಕೊಟ್ಟಿ ಆ ಹುಡಗಿ ಬೆನ್ಗೆ ಕರಕಂಡ್ ಮನೆಗೆ ಬರವಂತವರಾದರು, ಮಾವ, ಅಲಿಯನೂವ ಕಾಸಿಗ್ ಹೋದವರು. ಕಾಸೀಗ್ ಹೋದಂತಾ ಮಗ ಮದವೀನೂ ಆಗ್ ಬಂದ ಹೇಳಿ, ಅಪ್ಪ-ಅವಿಗೂ ಬಹಲ ಮನಸಿಗೆ ಆನಂದವಾಯ್ತು. ಸುಕಸಂತೋಸದಿಂದ ರಾಜ್ಯವನ್ನೇ ಆಲಕಂಡಿ ಉಲಿವಂತವರಾದರು.

- **ಕೆಲವು ಪದಗಳ ವಿವರಣೆ**

| | |
|---|---|
| ಬಿಕ್ಸಿ = ಬಿಕ್ಷ | ವ್ಯತೆ = ದುಃಖ |
| ರಕೋಲಿ = ರಕ್ಷಣೆ | ಅಲಿಯ = ಅಳಿಯ |
| ಅಸ್ವಂತ = ಅಶ್ವತ್ಥ | ವರು = ವರ, ಹಣ |
| ಯತೆ = ದುಃಖ | ತೀಹೋರ್ದ = ಸತ್ತುಹೊದ |
| ಸ್ವಾರ್ತಿಕ = ಸಾರ್ಥಕ | ಪೆಟಿಯ = ನಂತರ |
| ಕಜ್ಜಾಯ = ಸಿಹಿತಿಂಡಿ | ಕಾನಾವಲಿ = ಖಾನಾವಳಿ, ಹೊಟೆಲ್ |

▪ ಹೇಳಿದವರು : **ಜಂಗ (ಗಣಪು) ನಾಗ ಗೌಡ,** ಉಪ್ಪಿನ ಪಟ್ಟಣ.

❖

# ರಕ್ಕಸನ ಮೇಲಿನ ಬೊಕ್ಕಸ

ಸೂರ್ಯವತಿ ಅರಸು ಅಜ್ಜಿ-ಮೊಮ್ಮಗ ನಿತ್ಯಾದಿಂದಲೂ ಸೌದಿಹೊರೆ ತಕಂಡೋಗೂದು, ಅರಸರ ಮನೇಲಿ ಹೊತಾಕೊದು, ಶಿದ್ದಕ್ಕಿ ತರೂದು. ಬೇಶಕಂಡು ತಿಂಬೂದು. ಇದೇಯಾಪ್ತಿಲಿದ್ದೋರು.

ಆಶೆಗೊಂದು ದೆಸೆವಂತರಾಟಾಗ್ತಿತ್ತು. ಕೇರಿ ಮೇಲಿನ ಜನರೆಲ್ಲ 'ಬಾರೋ ಆಟಕ್ಕೆ ಹೋಪ' ಅಂದ್ರು. 'ಅಡಿಗೆಯಾಗಲಿಲ್ಲ, ಊಟಾಗ್ನಿಲ್ಲ' ಅಂದ. ಆದ ಮೇಲೆ ಬೇರೆ ಕೆಲವರ ಸಂಗಡ ಆಟಕ್ಕೆ ಹೋದ. ಆಟ ಒಳ್ಳೆ ಲಾಯ್ಕಾಯ್ತು. ಇಡಿ ರಾತ್ರೆ ಆಟ ನೋಡಿದ. ಬೆಳಗುಸಾರೆ ಎದ್ದ. ಕತ್ತಿ, ಬಲ್ಲಿ ಎಲ್ಲಾ ಹಿಡ್ಕಂಡೋಗೆ ಬೆಟ್ಟಕ್ಕೆ ಹೋದ. ಹೊರೆ ಕಟ್ಟಿಗೆ ತಂದ. ಅರಸರ ಮನೇಲಿ ಹೊತಾಕಿದ. ಕೊಡ್ಲಿ ಹಿಡ್ಕಂಡು ಅಲ್ಲೇ ಅಶ್ವತ್ತಮರ ಒಣಗಿತ್ತು. ಕಪ್ಪು ಹೊಡೆದ- ' ಏಳು ಹೆಡೆ ಮಾಶೇಶ್ರ...' ಅವ, "ಯಾರೋ ನರಮನಶ" ಅಂತು. "ನಾನೇ ಸೈವೋ ಅಜ್ಜಿ ಮೊಮ್ಮಗ" ಅಂದ. "ಅದೇ ಶಕ್ಕೇಲಿ ನನ್ನ ಸುಟ್ಟು ಬಸ್ಮ ಮಾಡಿಕ್ಕಿ ಹೋಗುದಾದ್ರೆ ನನ್ನ ನೆತ್ತಿಮೇಲಿರುವಂತಾದು ಮಾಣಿಕಾ ನಿನಗೆ ಕೊಡತೆ. ಬೇಕಾದ್ದಾಗಿರುವಂತಾದ್ದ ಬೇಡಿಕೋ ಆಗ್ತದೆ" ಅಂತು.

ಏಳ ಹೆಡೆ ಮಾಶೇಶ್ರ ಜೀವ ಕಲೆಬೇಕಾದ್ರೆ ಮಾಣ್ಕಿ ಕೊಡ್ತು. ಅಜ್ಜಿಮಗ ಕಟ್ಟಿದ ಪಾವಡಕ್ಕೆ ಅದರ ಕಟ್ಟಕಂಡ. ಅದೇ ಶಕ್ಕೇಲಿ, ಎಳ ಹೆಡೆ ಮಾಶೇಶ್ರನ್ನ ಸುಟ್ಟ ಬಸ್ಮ ಮಾಡಿದ. ಅವನ ಪೆತನ, ಮಾಶಿಕ ಎಲ್ಲಾ ತಾನೇ ಸಾಗಿಸಿದ.

ಮನೆಗೆ ಬಂದ, "ಎಲಾ ತಾಯಿ, ಮನೆಲ್ಲೆ ಜಲ್ಕ. ನಾನೊಂದು ದೇಸ ತಿರೀಕಂಡೆ ಬರ್ತೇನೆ" ಅಂದ. ಹೈಟಬೀಲುರಟ್ಟಗೆ ಬಂಡಾರಿ ಸಿಕ್ದ. ಮದಿಮುಂಜಿ ಬಾರಿಸಕ್ಕೆ ಹೋದೋನು. "ಎಲಾ ಬಂಡಾರಿ, ನಿನ್ನ ಜೋಲೆ ಕೊಡೋ," "ಅಂದು ಮದಿಮುಂಜಿ ಸರಾಯ, ನಿನ್ನಗೆ ದೊಲ್ ಕೊಟ್ಟಂಡಿಬಿಟ್ರೆ ಬಾರ್ಸೂಕಿನ್ನ?" ಅಂದ. 'ಹೊಸದಾಗಿ ಕಟ್ಕ' ಅಂದಿ ಹತ್ತು ರೂಪಾಯಿ ದೋಲಿನವಗ ಕೊಟ್ಟಾ. ಹೊಸದಾಗಿ ಮಾಡಿಸು ಅಂದಿ ದೋಲ ತಾ ತಕಂಡ. ಜೋಗಿ ಬೇಡಕೋದೋನು ಜೋಳಿಗೆ ತಕ್ಕಂಬತ್ತಿದ್ದ. "ಎಲಾ ಜೋಳಿಗಪ್ಪ, ನಿನ್ನ ಜೋಳಿಗಿ ಕೊಡು ತಾಗಿದ ಮಜೂರಿ ಕೊಡ್ತೆ" ಅಂದ, ಐದು ರೂಪಾಯಿಗಿರುವಂತಾದ ತೆಗೆದು. 'ಐದು ರೂಪಾಯಿ ಬೇಡ' ಅಂದ ಜೋಗಿ ಯೆಯ್ಡ ರೂಪಾಯಿ ತಕ್ಕಂಡ ಕೊಟ್ಟ.

ದೋಲಾಗಿರುವಂತಾದು ಜೋಳಿಗಿ ವಲಗಿಟ್ಟಕೊಂಡ ಮುಂದೆ ಹೋದ. ಒಬ್ಬ ಗೌಡ ಗೆದ್ದೆ ಕಡೀತಿದ್ದ. "ಎಲಾ ಗೌಡಾ, ಕುಟಾರಿ ಮುಕ್ಕು ಕೊಡೂ" ಅಂದ. "ಗದ್ದೆ ಬಿತ್ತದ ಬಂತು." ಅಂದ, "ನಿನಗೆ ಕೊಟ್ಟ ಬಿಟ್ರೆ ನನಗೆಲ್ಲಿ?" ಕೇಳಿದ. ಐದು ರೂಪಾಯಿ ತೆಗೆದುಕೊಟ್ಟ ಗೌಡಗೆ, ಜೋಳ್ಗೆಲಾಕೊಂಡ ಮುಂದೆ ಹೋದ. ಅಲ್ಲೊಂದು ಶಾಪ ಹರೆತಿತ್ತು. ಅದೊಂದ ಹಗೂರಕ್ಕೆ ಹಿಡ್ಕಂಡ ಜೋಲ್ಗಗೆ ತುಂಬ್ಕಂಡ, ಮುಂದೆ ಹೋದ.

ಎಲ್ಲಿ ಹೋದ? ರಾಕೇಸನ ಮನೆಗೆ ನಡೆದು ಬಿಟ್ಟ. ರಾಕೇಸ ಹೊಟ್ಟೆ ಆಯಾರಕ್ಕೆ ಹೋಗಿದ್ದ. ರಾಕೇಸನ ಮಗಲಾಗಿರುವಂಥೋಲು ಮನೇಲಿದ್ಲು, ತಂದೇ ಕೂಡೆ. " 'ಗಂಡನ ತಕಂಬಾ" ಹೇಳಿ ಮೂರು ವರ್ಸಾಗಿತ್ತು. 'ತತ್ತೆ ತತ್ತೆ' ಅಂತ ಬಾಯಲ್ಲಿ ಹಾಕಂಡ ಬತ್ತ. ನೀ ನನ ಗಂಡ ನಾನ ಹೆಂಡ್ತಿ" ಅಂತು. ರಾಕೇಸನ ಮಗಲು ಹಾಗೆಂಬುರಟ್ಟಗೆ, "ನನ್ನ ತಂದೆ ಬಂದದ್ದು ಹೌದಾದರೆ ನಿನ್ನ ಜೀವ ಗೂಡಿ ಇಡನಾರ ಮ್ಯಾನೆ ಮೆತ್ತ ಹತ್ಕಂಕೂತ್ಕ." ರಾಕೇಸನ ಮಗಳಾಗಿರುವಂಥೋಳು ಮೆತ್ತ ಹತ್ತಿ ಕೂರಸ್ಕಬಿಟ್ಲು. ರಾಕೇಸಾಗಿರುವಂಥೋನು ಬಂದ. "ಯಾಕೆ? ತಂಗಿ ನರಮನಸರ ಪರಿಮಲೋ" ಅಂದ ಬಿಟ್ಟ. ಇವ ಮೆತ್ತಿನ ಮೇಲಿಂದ, "ನಾನು ಆಕಾಸನ ಮನೆಯ ಪಕಾಸೋ" ಅಂದ. "ಆಕಾಸನ ಮನೆಯ ಪಕಾಸೊ ಆದ್ರೆ ತೋರೆಲೆ ನಿನ್ನ ಜಡೆಯ" ಅಂದ. ಶಾಪಿ ತೆಗೆದೊಗೆದ ಅಂಗಲಕ್ಕೆ. "ತೋರೆಲೆ ನಿನ್ನ ಹಳ್ಳ" ಅಂದ. ಕುಟಾರಿ ಮುಕ್ಕ ತೆಗೆದೊಗೆದ. "ಅಲಾಲಾ! ನಿನ್ನ ಮನೆ ಹಾಲಾದ ಹಳ್ಳ" ಅಂದ . "ಜಡೆ ನೋಡಿದೆ ಒಂದು ಮಾರು ಈತು. ಬಡಿಯಲ ನಿನ್ನ ಹೊಟ್ಟೆಯ" ಅಂದ ರಾಕೇಸ. ಅಜ್ಜಿಮೊಮ್ಮಗ ದೋಲ ಹಿಡ್ಕಬಾರಸೂ ಹೊತ್ಗೆ ದೋಲು ಹರಿದು ಹೋದರೂ ಬಿಡಲಿಲ್ಲ. ರಾಕೇಸ ಬಿದ್ದಾಕೋಟಿ ವೋಡಿದ. ಓಡಬೇಕಾದ್ರೆ ಬಂದು ನರಿಯಣ್ಣ, "ಎಲ್ಲಿ ಓಡತಿಯೋ?" ಕೇಳಿತು. "ಯಂತಾ ಹೇಲುದು ನರ್ಯಣ್ಣ? ಆಕಾಶನ ಮನೆ ಪಕಾಸ ಬಂದ್ಯ 'ತೋರೆಲ ನಿನ್ನ ಜಡ್ಯ' ಅಂದೆ. ಇಷ್ಟು ನೀಟ ಜಡೆ ಕಿತ್ತೊಗೆದ. 'ತೋರೆಲ ನಿನ್ನ ಹಳ್ಳ' ಅಂದೆ. ಇಟ್ಟು ನೀಟ ಹಳ್ಳು ಕಿತ್ತೊಗೆದ. 'ಬಡಿಯಲ ನಿನ್ನ ಹೊಟ್ಟೆ' ಅಂದೆ ಇಡೀ ಊರೆಲ್ಲ ಮರಗೋಯ್ತು." "ನೀ ಅವರ ಕಂಡಿ ಯಾಕೆ ಹೆದರಿಬಂದೆಯಾ? ನಾನಾಗಿದ್ರೆ ನೋಟ ನುಡಿ ಮಾಡಿ ಅವನ್ ತೆಗೆದು ಬಿಡತಿದ್ದೆ" ಅಂತು ನರಿಯಣ್ಣ. "ಏಲು ಹೋಪ" ಅಂತು ನರಿ. ಮತ್ತೆ ನರಿ-ರಾಕೇಸ ಹಿಂತಿರುಗಿ ಬಂದ್ರು. ರಾಕೇಸನ ಮಗಳು ಏನು ಮಾಡಿಬಿಟ್ಲು ಅಂದ್ರೆ, ಹೊಳ್ಳಿ ಮೇಲೆನೆ ದೊಡ್ಡ ಮುಟ್ಟಿತ್ತು. ಮುಟ್ಟಿ ಒಲಹಾಕಿ, ಮುಟ್ಟೇಲಿ ಕನ್ನಿತ್ತು ಗೋದಿಕಳ್ಳ ಹೊಳವೆ ಇಕ್ಕಿತು. ಸಮಾ ಆಯ್ತು ಹೊಳಪೆಗೂ, ಕನ್ನಿಗೂ. ರಾಕೇಸ-ನರಿಯಣ್ಣ ಬಂದರು. ರಾಕೇಸ ಕಾಲಲ್ಲೇ ಒಳಗಿನ ಮನೆಕೊರ್ಟ ತೆಗೆದ ಮುಂದೆ ಹೋಕೆ ದೈರ್ಯಿಲ್ಲ. ನರಿಯಣ್ಣ ಗೋದಿಕಲ್ಲ ಹೊಳಪೇ ಮೇನೆ ಕೂತಬುಡ್ತು. ನರಿಬಾಲ ಗೋದಿಕಲ್ಲ ಹೋಳಪೆಲಿ ವಗಿದು ಹೋಗಿ ವಳಗೆ ನಡೆದು ಬಿಡ್ತು. ಶಿಕು ಕಟ್ಟಾಗೆ ಮುಟ್ಟಿ ವಲಗಿದ್ದೊನು ಅಜ್ಜಿಮೊಮ್ಮಗ ನರಿಬಾಲ ಗಟ್ಯಾಗಿ ಹಿಡ್ಕಬಿಟ್ಯ. ರಾಕೇಸ ಆಯಾ ಹಾಕೋನು, ನರಿ ನೋಟ ನೋಡೋದು. ನರಿ, "ಅಯ್ಯಾಯ್ಯೊಪೋ ಪ್ರಾಣ" ಅಂತದೆ. ರಾಕೇಸ ಕಂಗಾಲಕ್ಕೆ ಬಿದ್ದ ಹೋಗ್ಯ. ತಿಪ್ ತಿಪ್ ಬಾಲ ತುಂಡಾಗೊಯ್ತು. ನರಿಕಿಂತು ಮುಂದೆ ರಾಕೇಸ, ರಾಕೇಸನ ಮುಂದೆ ನರಿ ಬಿದ್ದಾಕಿ ಓಡಿದರು.

ರಾಕೇಸನ ಮಗಳು, "ನಾವಿಲ್ಲಿದ್ದಂಗಾರೆ ನನ್ನ ತಂದೆ ನಿಮ್ಮಿಲ್ಲಿ ಇಡಾಂಗಿಲ್ಲ. ನಿನ್ನ ಊರೆಲ್ಲಿ? ಮನೆಯೆಲ್ಲಿ? ಅಲ್ಲಿಗೆ ನಡೆದು ಬಿಡುವ" ಅಂತು. ಮಗಳಾಗಿರುವಂತಾದ ಕರಕಂಡಿ ಅಜ್ಜಿಮೊಮ್ಮಗ (ಹಿಂಡ್ತಿ ಕರ್ಕಂಡಿ) ಹೋಪೆಬೇಕಾದ್ರೆ ರಾಕೇಸ ಏನಮಾಡಿದ ಅಂದ್ರೆ... ಹತ್ತಿಪ್ಪತ್ತು ರಾಕೇಸರ ಒಟ್ಟಮಾಡ್ಕಂಡಿ ಬಂದ. ಇವ ಹೆಂಡ್ತಿ ಬಾಚ್ಕೊಂಡು ದೊಡ್ಡ ಮರಹತ್ತಿಬಿಟ್ಟ. ರಾಕೇಸರು ಒಬ್ಬನ ಹೆಗಲ ಮೇಲೆ ಒಬ್ಬ ಹತ್ತಿ ಕಾಲತೊಟ್ಟ ಸೊಗಿಬೇಕು ಹೇಳಿ

ನಿಂತ್ರು. ಮೊದಲ ಹೆದರಿದವ ಅಡೂಕೆ ಹೆಗಲ ಕೊಟ್ಟ. ಮುಟಬೇಕು ಅಂಬುರಷ್ಟಹೊತ್ತೆ ಅಜ್ಜಿಮೊಮ್ಮಗ "ಅಡೂಗಿದ್ದನ ತಿಂತೆ" ಅಂದ. ಅಡೂಗಿದ್ದವ ಸೋಗಿದ್ ಹಾರಿಬಿಟ್ಟ. ಕೈಕಾಲು ಮುರಕಂತ ಎಲ್ಲಾ ಓಡಿ ಹೋಗಿಬಿಟ್ರು.

ಹೆಂಡ್ತಿ ಹಗೂರ ಇಲಿಸಕಂಡ ಕರಕಂಡು ಮನೆಗ್ಹೋದ. ಹೆಂಡ್ತಿಗೆ ಮನೇಲಿಟ್ಟ. ಅರಸರ ಮನೆಗೆ ಹೋದ ಅಜ್ಜಿಮೊಮ್ಮಗ. "ಇಷ್ಟ ದಿವ್ಸ ಎಲ್ಲಿಗೋಗಿದ್ದೆ?" ಕೇಳಿದ ಅರಸು. "ನನಗೆ ವರ್ಷಾಯ್ತು. ಮುಪ್ಪಿನ ಕಾಲಾಯ್ತು. ನಗ್ನಾಕಂಡ ಬರಬೇಕು ಹೇಳಿ ಹೋಗಿದ್ದೆ" ಅಂದ. "ನಗ್ನಾಕಂಡಬಂದ್ಯೋ?" ಕೇಳಿದ್ರು. "ಹೆಂಡ್ತಿಯೆಲ್ಲಿಟ್ಟೆ?" ಕೇಳಿದರು. "ಮನೆಯಲ್ಲಿಹೆಂಡತೀತು" ಅಂದ. "ನೀನು ದಿನಕೊಂದು ಶಿದ್ದಕ್ಕಿ ನನ್ನ ಮನೆಲಿಂದ ತಕ್ಕೊಂಡು ಹೋಗೆ ಬೇಶಿಕೊಂಡು ತಿಂಬುವವ. ಹೇಗೆ ನಗ್ನಾಕಂಡಿ ಬಂದೆ?" ಕೇಳಿದ. "ದೇವರ ನಂಬಿಕಂಡಿದ್ದನೆ, ಯಾವ ದಾರೀಲಿ ಹೋದ್ರೂ ದಾರಿ ತೋರ್ತ. ಅರಸು ಆಗಿರುವಂತೋನು ಅಜ್ಜಿಮೊಮ್ಮಗನ ಮನೆಗೆ ಬಂದ. ಬರುವಟ್ಟಿಗೆ ಅವನ ಮಡದಿ ನೋಡ್ಕಂಡಿ, ಅರಸಾಗಿರುವಂತೋನು ಮಲ್ಲಾಗಿಬಿಟ್ಟ. "ಈ ಅಜ್ಜಿಮೊಮ್ಮಗನ ತೆಗೆಬೇಕು. ಅವನ ಮಡದೀಯ ತಾನನುಭವಿಸಬೇಕು" ಹೇಳಿ ಮಲ್ಲಾಗಿಬಿಟ್ಟು ಮನೆಗ್ಹೋದ. "ಅಜ್ಜಿಮೊಮ್ಮಗ, ಇವತ್ತು ನೀನು ಹುಲಿಹಾಲು ತರಬೇಕು" ಅಂದ. "ಹುಲಿಹಾಲ ತರ್ತೇನೆ" ಅಂತ ಮನೆಗೆ ಬಂದು ಮುಚ್ಕಾಕಂಡ ಮನಿಕಬಿಟ್ಟ. ಹೆಂಡ್ತಿ ಉಂಬೂಕೆ ಏಳಿಸಿತು. "ನಿನಗೆ ಉಣಬೇಕಾಗೀದು. ಅರಸರ ಮನೆಯಲ್ಲಿ ಹುಲಿಹಾಲು ತರಬೇಕಂತೆ. ನಾ ಹುಲಿ ಮುಂದೆ ಹೋಗುದು ಬದ್ದವೋ? ಹುಲಿ ಹಾಲು ತರೋದು ಬದ್ದವೋ? ಅರಸರಿಗೆ ಕೊಡೋದು ಬದ್ದವೋ?" ಕೇಳಿದ. "ಮಿಂದು ಊಟ ಮಾಡಿ" ಅಂದಳು ಅವನ ಮಡದಿ. ಮೂರು ಮಾಣಿಕದ ಹರಳಾಗಿರುವ ದಾರ ಕೊಟ್ಟು. "ಗುಡ್ಡೆ ಮೇನೆ ನಿತ್ಕಂಡ್, 'ಹುಲಿ, ಹುಲಿಮರಿ ಎರಡೂ ಬರಲಿ' ಎಂದು. ಒಂದು ಹೊಡಿರಿ. 'ಹುಲಿ ಹುಲಿಮರಿ ಬಂದ್ತು ಕವಲಿಗೆ ತುಂಬಾ ಹಾಲಾಗ್ಲಿ' ಹೇಳಿ ಒಂದು ಹೊಡಿರಿ. 'ಹುಲಿ ಹುಲಿಮರಿ ಹಿಂದೆ ಹೋಗ್ಲಿ' ಹೇಳಿ ಮೂರನೇ ಮಾಣಿಕ ಹೊಡಿರಿ."

ಹಾಲ ತಂದಿ ಅರಸರ ಮನೆಗೆ ಕೊಟ್ಟ ಅಜ್ಜಿಮೊಮ್ಮಗ. ಬರಬೇಕಾದ್ರೆ ಅರಸು ಹೇಳಿದ, "ಇವತ್ತು ಕರಡಿ ಹಾಲು ತರಬೇಕಂ"ದ. "ಕರಡಿಹಾಲ ತರ್ತೇನೆ" ಅಂತ ಮನೆಗೆ ಬಂದು ಮುಚ್ಕಾಕಂಡ ಮನಿಕಬಿಟ್ಟ. ಹೆಂಡ್ತಿ ಉಂಬೂಕೆ ಏಳಿಸಿತು. "ನಿನಗೆ ಉಣಬೇಕಾಗೀದು. ಹುಲಿಹಾಲು ತಂದೆ, ಈಗ ಕರಡಿ ಹಾಲು ತರಬೇಕಂತೆ. ನಾ ಕರಡಿ ಮುಂದೆ ಹೋಗುದು ಬದ್ದವೋ? ಕರಡಿ ಹಾಲು ತರೋದು ಬದ್ದವೋ? ಅರಸರಿಗೆ ಕೊಡೋದು ಬದ್ದವೋ?" ಕೇಳಿದ. "ಮಿಂದು ಊಟ ಮಾಡಿ" ಅಂದಳು ಅವನ ಮಡದಿ. ಮಾಡ್ದ. ಮೂರ ಹಳ್ಳ ಕೊಟ್ತು. "ಅದೇ ಗುಡ್ಡೆಮೇನೆ ನಿತ್ಕಂಡ 'ಕರಡಿ, ಕರಡಿಮರಿ ಬರಲಿ" ಹೇಳಿ ಹೊಡಿರಿ, ಬರತೀರು. ಬರ್ವತ್ತಿಗೆ 'ಕವಲಿಗೆ ತುಂಬ ಹಾಲಾಗ್ಲಿ ಹೇಳಿ' ಹೊಡಿರಿ. ಹಾಲಾಗ್ತಿವು. 'ಕರಡಿ, ಕರಡಿಮರಿ ಹಿಂದೋಗ್ಲಿ' ಹೇಳಿ ಹೊಡಿರಿ ಹೋಗ್ತಿವು" ಅಂದ್ಲು. 'ಕರಡಿ, ಕರಡಿಮರಿ ಬರಲಿ' ಎಂದ ಹೊಡೆದ. 'ಬಂದು ಕವಲಿಗೆ ತುಂಬಾ ಹಾಲಾಗ್ಲಿ' ಹೇಳಿ ಹೊಡೆದ. ಕವಳಿಗೆ ತುಂಬಾ ಹಾಲಾಗಿದ್ದವಂತಾಯ್ತು. 'ಕರಡಿ, ಕರಡಿಮರಿ ಹಿಂದ ಹೋಗಲಿ' ಹೇಳಿ ಹೊಡೆದ. ಅವು

ಹಿಂದೆ ಹೋಗ್ತೀವು. ಅರಸರ ಮನೆಗೆ ತಕಂಡೋಗಿ ಕೊಟ್ಟ. "ಅಜ್ಜಿಮೊಮ್ಮಗ, ಇವತ್ತೂ ತಂದಿ." ಸುಳ್ಳಿಗೆ ಸುಳ್ಳೇರು. "ಇವತ್ತೆ ಸರ್ಪನ ಹಾಲಾಗಿರುವಂತಾದ ತರಬೇಕು." "ಹೂಂ" ಅಂದ. ಮನೆಗೆ ಬಂದ ಮುಚ್ಚಾಕಂಡ ಮನಗಿಬಿಟ್ಟ. ಹೆಂಡ್ತಿ ಉಂಬೂಕೆ ಏಳಿಸಿತು. "ಉಂಬೇಕಾಗಿದ್ದು ನಿನ್ಗೆ. ಮೊನ್ನೆ ಹುಲಿ ಹಾಲ ತಂದೆ, ನಿನ್ನೆ ಕರಡಿ ಹಾಲ ತಂದೆ. ಇವತ್ತು ಸರ್ಪನ ಹಾಲ ತರಬೇಕಂತೆ. ನಾ ಸರ್ಪನ ಮುಂದೆ ಹೋಗುದು ಬದ್ದವೋ? ಸರ್ಪನ ಹಾಲು ತರೋದು ಬದ್ದವೋ? ಅರಸರಿಗೆ ಕೊಡೋದು ಬದ್ದವೋ?" ಕೇಲಿದ. "ಮಿಂದು ಊಟ ಮಾಡಿ" ಅಂತು ಅವನ ಮಡದಿ. ಮೂರು ಹಳ್ಳು ಕೊಟ್ಟು, " 'ಸರ್ಪಸರ್ಪನ ಮರಿ ಬರಲಿ' ಹೇಳಿ ಹಳ್ಳ ಹೊಡೆರಿ, ಸರ್ಪ ಸರ್ಪನ ಮರಿ ಬರ್ತಿದ್ದು. 'ಕವಲಿಗೆ ತುಂಬ ಹಾಲಾಗ್ಲಿ' ಹೇಳಿ ಹೊಡಿರಿ. ಆಗ್ತೀದು, 'ಸರ್ಪ ಸರ್ಪನ ಮರಿ ಹಿಂದೆ ಹೋಗ್ಲಿ' ಹೇಳಿ ಹೊಡಿರಿ ಅವು ಹಿಂದೆ ಹೋಗ್ತಿವು. ಸರ್ಪನ ಹಾಲ ಅರಸನ ಮನಿಗೆ ಕೊಡಿರಿ" ಅಂತು. ಅರಸನ ಮನೆಗೆ ತಂದ ಕೊಟ್ಟ. "ತಂದಿದಷ್ಟು ಸುಳ್ಳೇವ. ಹುಲಿ-ಹುಲಿಮರಿ, ಕರಡಿ-ಕರಡಿಮರಿ, ಸರ್ಪ-ಸರ್ಪನಮರಿ ಮೂರೂ ತಂದು ನನ್ನ ಮನೆ ಬಾಕ್ಲ ಮೆಟ್ಟ ಹಚ್ಚಿದ್ದೆ ಹೌದಾದ್ರೆ ತಂದಿದ್ದು ಖರೆ ಅಂತ ನಂಬತೆ" ಅಂದ ರಾಜ. "ತತ್ತೇನೆ" ಅಂದ ಮನೆಗೆ ಬಂದ. ಮುಚ್ಚಾಕ್ ಮನಗಬಿಟ್ಟ. ಹೆಂಡ್ತಿ ಉಂಬೂಕೇಳಸತು. "ಹುಲಿ-ಹುಲಿಮರಿ, ಕರಡಿ-ಕರಡಿಮರಿ, ಸರ್ಪ- ಸರ್ಪನ ಮರಿ ಬಾಕ್ಲಿಗೆ ತಂದದ್ದೆ ಹೌದಾದ್ರೆ ತಂದುದ್ದು ಖರೆ ಅಂದ್ರು."

ನಾಲ್ಕು ಹರಳ ಕೊಟ್ಟು, ಅದೇ ಗುಡ್ಡೆ ಮೇನೆ ನಿಂತ್ಕಣಿ. " 'ಹುಲಿ-ಹುಲಿಮರಿ, ಕರಡಿ-ಕರಡಿಮರಿ, ಸರ್ಪ -ಸರ್ಪನಮರಿ ಅರಸನ ಮನೆ ಬಾಕ್ಲ ಹತ್ಲಿ" ಅಂದಿ ಹೊಡಿರಿ. ಗುಡ್ಡೆ ಮೇನೆ ಬಂದು ಹಾಗೆ ಹೇಳಿ ಹೊಡೆದ. "ಬಾಗ್ಲ ಮೆಟ್ಟ ಹತ್ತಿರಿ" ಅಂದ ಹೊಡೆದ ಅಜ್ಜಿಮೊಮ್ಮಗ. ಎಲ್ಲ ಬಂದು ಹತ್ತೀದು. "ಹುಲಿ-ಹುಲಿಮರಿ, ಕರಡಿ - ಕರಡಿಮರಿ, ಸರ್ಪ-ಸರ್ಪನಮರಿ ವಾಪಾಸ್ ಹೋಗ್ಲಿ" ಹೇಳಿ ಹೊಡೆದ. ಅವೆಲ್ಲ ಹಿಂದೆ ಹೋಗ್ತಿವು. "ನೀ ತಂದಿದ್ದೆಲ್ಲ ಖರೆವ, ನಿನಕೂಡೆ ಹುಕಮತೀತು. ನಮ್ಮ ಹಳೆಯಾವ್ರು ಸಾಗರದಲ್ಲವರೆಯೋ, ಸರಬದಲ್ಲವರೆಯೋ ನೋಡ್ಕ ಬರಬೇಕು." ಅಜ್ಜಿಮೊಮ್ಮಗ, 'ಹೋಗ ಬರತ್ತೇನೆ' ಅಂದು ಮನೆಗೆ ಬಂದ. ಮುಚ್ಚಾಕ ಮನಿಕಬಿಟ್ಟ. ಹೆಂಡ್ತಿ ಉಂಬುಕೇಳಸತು. "ಅವ್ರ 'ಹಳೆಯಾವ್ರು ಸಾಗರದಲ್ಲವರೆಯಾ? ಸರಬದಲ್ಲವರೆಯಾ? ನೋಡಿಕೊಂಬಾ' ಹೇಳಿದರು. ಕೊಂಡದ ಬೆಂಕೀಲಿ ಬೀಳುದು ಬದ್ದವೋ? ನೋಡ್ಕ ಬರದೋ ಬದ್ದವೋ?" ಕೇಳಿದ. "ನಿಮಗ್ಯಾಕೆ? ಮಿಂದು ಊಟ ಮಾಡಿ" ಅಂತು. "ಊಟ ಮಾಡಿ ಅರಸರ ಕೂಡ ಹೋಗಿ... ಐವತ್ತು ಆಳು ಕಂತ, ಐವತ್ತು ಮಾರು ನೀಟ, ಐವತ್ತು ಹರು ಕೊಂಡ ಕಡಿರಿ ಹೇಳಿ, ಕೊಂಡತುಂಬೆ ಸೌದಿ ಸರೆಬೇಕು. ಕೊಂಡಕೆ ಬೆಂಕಿ ಹಾಕಬೇಕು. ತಯಾರಾಗಿ ಬರ್ತೆನೆ ಹೇಳಿ ಬನ್ನಿ" ಅಂತು.

ಅರಸ ವಂದ್ ದಿನಕ್ಕೆ ಕಡಿಸಿ ಕೊಂಡಕ್ಕೆ ಬೆಂಕಿ ಹಾಕಿಸಿದ. ಅಜ್ಜಿಮೊಮ್ಮಗನ ಹೆಂಡ್ತಿ, "ನೀವು ಚಡ್ಡಿ-ಅಂಗಿ ಹಾಕಣಿ, ಛತ್ತರಗಿ ಕೊಡೆ ಹಿಡ್ಕಣಿ" ಅಂತ್ಹೇಳಿ ನಿಂಬೆಹಣ್ಣು ಕೊರೆದಿ, ಗಂಡನ ಯೆರಡ್ ಕಾಲಿಗೆ ಯೆರಡ್ ಕಡೆ ಹಚ್ಚಿದಳು. "ಅರಸು, ಹಿಂದ್ರು ನಿತ್ತ ನೋಡ್ತಿರಬೇಕಾದ್ರೆ, ಉರು ಬೆಂಕೀಲಿ ಬೀಳಿ. ರೊಣೆ ಗರೂದಿಲ್ಲ ಅಡಿಗಿನ ಪದ್ರ ಬಿಡಿ. ಮೇಲಿನ ಪದ್ರ ಬಿಡಿ,

ನಡುಮಧ್ಯೆ ನಡದ ಬನ್ನಿ. ನಮ್ಮನೆಬಳ್ಗೆ ಬಂದ ಕೂಡ್ತೀರು" ಅಂತು. ಕೊಂಡದಿಂಬ ಮೇಲೆ ನಿಂತ, "ನೋಡಿ ಬರ್ತೇನೆ" ಎಂದು ದುಮುಕಿ ಅಡಿ ಪದ್ರ ಬಿಟ್ಟ, ಮೇಲಿನ ಪದ್ರ ಬಿಟ್ಟ. ನಡುವೆ ಬಂದು ಒಳಗೆ ಹೈಯ್ದು ಬಿಟ್ಟ. ನಾಲ್ಕೈದು ದಿನ ಕಾಣಿಸಿಕೊಳ್ಳಲಿಲ್ಲ. ಐದ್ ದಿನದ ಮ್ಯಾಗೆ, "ಅರಸರ ಮನೆಗೆ ಹೋಗಿ, ನಿಮ್ಮ ಹಳೆಯಾವು ಸಾಗರದಲ್ಲವರೆ, ಸರಬಕೆ ಹೋಗಲಿಲ್ಲ. 'ನೋಡಬೇಕಂದ್ರೆ ದಿನೊಪ್ಪತ್ತ್ನಲ್ಲಿ ಬರಬೇಕು' ಅಂತೇಳಿ ಹೇಳವ್ರೆ ಅಂತ ಅರಸರ ಮನೆಗೋಗಿ ಹೇಳಿ" ಅಂತು. ಅಜ್ಜಿಮೊಮ್ಮಗ ಅರಸರ ಮನೆಗೋಗಿ ಹಾಗೆ ಹೇಳಿದ.

ದಿನೊಪ್ಪತ್ನಲ್ಲಿ ಬರಬೇಕಂತೆ ಅಂದ. ಕೊಂಡಕೆ ಬೆಂಕಿ ಹಾಕಿದ, ಸೌದೆ ಹೊತ್ತು ಹಾಕಿ ಬೆಂಕಿ ಮಾಡಿದ ಅರಸು ಹುಡುಗರು, ಹೆಂಡತಿ, ಅರಸು, ಮನೆಬದಿ ನೋಡ್ತಿರು. "ನೋಡ್ಕ ಬತ್ತೀರು" ಅಂದ್ರು. ಆಗೆ ಚಡ್ಡಿ-ಅಂಗಿ, ವಯ್ಯಾರದ ಪೊಗಡೆ, ಅಟ್ಟೂ ಕಟ್ಟಂಡಿ ಬೆಂಕಿ ಏರಿ ಮೇನೆ ನಿತ್ತು, 'ಹೋಗಿಬರತೆವಂ'ದ್ರು.

ಬೆಂಕೀಲಿ ಅರಸು, ಹುಡುಗರು ಎಲ್ಲ ಬಿದ್ದರು. ಹೆಂಡ್ತಿನೂ ಬಿತ್ತು– ಕರಗಿ ನೀರಾದರು. ಅರಸರ ಭೂಮಿ, ಬದುಕು, ಶಿನ್ನಶಿಗರು, ಗಂಟಿ ಕರಗೊಲು ಅಟ್ಟೂ ಇಟ್ಕಂಡಿ ಅಜ್ಜಿಮೊಮ್ಮಗ ಅರಸರ ಮನೇಲಿ ವಳ್ಕಂಡಿ ಆಳಕಂತಿ ಈವ.

- **ಕೆಲವು ಪದಗಳ ವಿವರಣೆ**

ಹೊಗೆಹಾರಿಸಿಕೊಂಡು = ಬೇಯಿಸಿಕೊಂಡು
ವೆತನ = ವೇತನ
ಹೈಟ್ = ಹೊರಟು
ಸರಾಯ = ಶ್ರಾಯ, ವೇಳೆ, ಸಮಯ
ಅಯಾರ = ಅಹಾರ
ರಾಕೇಸ = ರಾಕ್ಷಸ
ಮುಟ್ಟಿ = ಬುಟ್ಟಿ
ಕನ್ನು = ತೂತು
ಅಡೂಕೆ = ಕೆಳಗೆ
ಹಳೆಯಾವು = ಹಳೆಯವರು (ಹಿರಿಯರು)
ಹರು = ಅಗಲ
ಕೊಂಡ = ಹೊಂಡ
ಗರೂದಿಲ್ಲ = ಸುಡೂದಿಲ್ಲ
ನನ್ಮೊಳಗೆ = ನಮ್ಮ(ಮನೆ) ಒಳಗೆ
ಶಕ್ಕಲಿ = ಚಕ್ಕೆಯಲ್ಲಿ
ಪಾವಡ = ಚಕ್ಕೆಯ ಹೊರೆ
ಜೋಲೆ = ಜೋಳಿಗೆ
ದೋಲ = ಡೋಲುಬಾರಿಸುವ ಸಾಧನ
ಹಳ್ಳ = ಹರಳು
ಶಾಪ = ಸರ್ಪ
ಗೋದಿಕಲ್ ಹೊಳಪೆ = ಗೋದಿಕಲ್ಲಿನ ಅರ್ಧಭಾಗ
ಶಿಕಲಿ = ಬಾಲದ ಗೊಂಡೆ
ಹುಕುಮತು = ಟ್ರಿಕ್
ಸರಬ = ಸ್ವರ್ಗ
ನೀಟ = ಉದ್ದ
ರೊಣೆ = ಕೂದಲು
ಹೈಟ್ ಬಿಟ್ = ಹೋಗಿಬಿಟ್ಟ
ಗಂಟಿ ಕರಗೊಲು = ಆಕಳು ಮತ್ತು ಕರುಗಳು

▪ ಹೇಳಿದವರು: **ದಿ. ಪುಟ್ಟು ನಾಗು ಗೌಡ,** ದುಗ್ಗೂರು, ತಾ. ಹೊನ್ನಾವರ.

# ಶಿದ್ದಕ್ಕಿ ಬಟ್ಟನ ಮಗ

ನೂರು ಮನೆ ಬೇಡಿದರೂ ಆಗೋದು ಶಿದ್ದಕ್ಕಿ. ನಾಕೇ ಮನೆ ಬೇಡಿದರೂ ಶಿದ್ದಕ್ಕಿ. ಅವನ ಹೆಂಡ್ತಿ ತುಂಬಿದ ಗರ್ಬೂಣಿ. ದೊರಗೋಲ ಹೆಂಡ್ರು ಅವನ ಮನೆ ಕೆರೆಗೆ ಮೊಕ ತೊಲೂಕೆ ಬಂದ್ರು. ಅವರ ಹೆಂಡ್ತಿ ನೋಡ್ಕಂಡಿ, "ಎಲಾ ಶಿದ್ದಕ್ಕಿ ಬಟ್ಟ, ನಿನ್ನ ಹೆಂಡ್ತಿ ಹೊಟ್ಟೆವಳಗೆ ಮೂರು ನೂತನ ಮಾಣಿ ದೊರಕಿಯ (ಮೂರು ಪಟ್ಟು ದೊಡ್ಡ)ನಿನ್ನ ಹತ್ತರ ಸಂರಕ್ಷಣ ಮಾಡನಿಕ್ಕೇನು ಅಗ್ಲಿಲ್ಲ" ಅಂದ್ರು. ಆಗ ಭಟ್ಟ ಕೇಲ್‌ಕಂಡ್ ಬಡಗಿರ ಮನೆಗೆ ಹೋದ. "ಎಲಾ ಬಡಗಿರಣ್ಣ, ತೊಟ್ಲ ಗೆಯ್ಯಕೊಡು" ಅಂದ. ಆ ಬಡಗಿರಣ್ಣ ಊಟ ಬಿಟ್ಟ, ಕೆಲಸ ಬಿಟ್ಟ, ತೊಟ್ಲ ಗೆಯ್ದಕೊಟ್ಟ. ಬಟ್ಟ ತಾಗಿದ ಮಜೂರಿ ಕೊಟ್ಟ. ತೊಟ್ಲ ತೆಕಂಡ ಬಂದ. ಗಂಡ-ಹೆಂಡ್ತಿ ಊಟ-ಉಪಚಾರ ಮಾಡ್ಕಂಡಿ ಎಲೆ ಪಟ್ಟಿ ತಿಂದರು.

ಕಾಯಗೆಂಚಿನ ಪಲಕಾಯಿ ಹಿಡ್ಕಂಡಿ, ತೊಟ್ಲ ಹೊತ್ಕಂಡಿ ಆನಂದಡವಿಗೆ ಹೋದ– ಹೆಂಡ್ತಿ ಕರಕೊಂಡು. ಹೋದ ಕಂಚಪಾಂಡವರೆ ಕಡಿದ ಕೆರೆ ಏರಿಮೇನೆ ಬಂದು ಕಟ್ಟೆಕೂಡೆ ತೊಟ್ಲಿಟ್ರು. ಬಟ್ಟನ ಹೆಂಡ್ತಿಗೆ ಕೋಟಲೆ ತೊಡಗಿತು. 'ನೆಲೆ ಕಟ್ಟಿಕೋಗಿ' ಅಂತು. ನೆಲೆಕಟ್ಟಿ ಆಶೆಕೂತ, ಜನ್ನ ಆಯ್ತು. ಮೂರು ನೂತನ ಮಾಣಿ. ಅದೇ ಕೆರೆಲಿ ಮೀಸಿ, ತೊಟ್ಟಿಲು ಕಟ್ಟಿ ಬಾಲಿ ತೊಟ್ಲಲ್ಲಿ ಮೀಸಿ, ವೀಲೆಪಟ್ಟಿ ಇಟ್ಟು, ಬಿಟ್ಟ ಬಂದ್ರು. ಬರೆಬೇಕಾದ್ರೆ ಮದಸೊಕ್ಕಿದ ಆನಿ ಬೇಣದಲ್ಲಿ ಮೇಯತಿತ್ತು. ಬಟ್ಟ ಬಟ್ಟನ ಹೆಂಡ್ತಿ ಕಂಡು ಬಿದ್ದಾಕೊಟ್ಟಿ ಓಡ್ತು. ಒಂದಾನಿ ಕಟ್ಟೆಗೆ ಓಡ್ತು ಹೋದ್ದೇಯಾ, ಕಟ್ಟೆ ಹತ್ತಿದ್ದೇಯಾ ತೊಟ್ಟಿಲವಳಗೆ ಶಿಶು ತೀಡಿತು. "ಶಿಶು ಹೆಚ್ಚಾಗಿ ಬಿಟ್ಟಿಕೋಗಿರು." ಹೇಳಿ, ನೆಗಿದಿ ತನ್ನ ಮೊಲೆ ಕೊಟ್ತು. ಕೊಟ್ಟಿ ವಂದ್ ತಿಂಗಲ ಸಾಕಿತು ಆನೆ. ತನ್ನ ಹುಟ್ಟಿದ ಮಕ್ಲು ಜತ್ರಗಾರ್‍ರು ಯೆಲ್ಲಾ ಬಿಟ್ಟು ಸಾಕ್ತು. ದೊಡ್ಡ ಮಾಡಿ, ಮಾಣಿ ದೊಡ್ಡಾದ. ಆನೆ, 'ಯಾವ್ ಮೊಕದಲ್ಲಿ ಬಿಟ್ಟಿ ಕೋಪೇಕು' ಹೇಳಿ ಬೆನ್ನಮೇಲೆಚ್ಚಿಕೊಂಡು ಬಂತು.

ಮಾಣಿ ಒಂತಟಿ ಮರಕೆ ಹಾರ್ತ, ಒಂತಟಿ ಆನೆ ಬೆನ್ಗೆ ಹಾರ್ತ, ಸುಮ್ಕನೆ ಬಂತು. 'ಕೆರಿಗ್ ಬಂದು ಬೆನ್ನ ಮೇನಿಲ್ಲ. ಬಿದ್ದನೋ ಏನೋ' ಅದೇ ದಾರೀಲಿ ಮತ್ತೆ ಹೋಯ್ತು. ಹೋಗಬೇಕಾದರೆ ಬೆನ್ನ ಹಾಕಿ ಮರದ ಮೇಲೆ ಶಿಶು ಕೂತಿತ್ತು. ದಾರೀಲು ಕಾಣಲೇ ಇಲ್ಲ. ಕಟ್ಟೆಗೆ ಹೋದ್ದು. "ಮಾಣಿಗೆ ಹಸಿವಾಗೂಕಿಲ್ಲ, ಅಸ್ರಾಗೂಕಿಲ್ಲ. ವಂದೂರ ಮೊಗದಲ್ಲಿ ಸೇರಬೇಕು" ಹೇಳಿ ಹರಕೆ ಕಟ್ಟಿ ನಡಿತು. ಆಗ ಅದೇ ಕೆಲಗೆ ಅರಸತನದಲ್ಲಿ ಹುಡುಗಿ ಮಿಂದಿ ಯೇಲ ದಿವ್ಸ ಆಯ್ತು. "ಆನಿ ಹಾಲ ಕುಡಿದವನ ನಗ್ನಾಗಬೇಕು" ಹೇಳಿತ್ತು. ಅರಸು ಪರದಾನಿಗೆ ಕರೆಬಟ್ಟ. ಬಂದ ಪರದಾನಿ, "ಆನಿಹಾಲು ಕುಡಿದೋನು ಎಲ್ಲಿದ್ದರೂ ತಪಾಸ ಮಾಡ್ಕಬರಬೇಕು' ನಿನ್ನ ತಲೆ ಹೋಡು ಹುಕ್ಕುಂ ಕೊಡ್ವೆ ಅಲ್ಲದರೆ" ಅಂದ. ಪ್ರದಾನಿ ಗರಸೂಕೆ ಹೋದ. ಎಲ್ಲ ಹುಡಕಿ ಕಾಲಾಗಿನ ಜೋಡು ಸೊಪ್ಪಾದರೂ– 'ಆನಿ ಹಾಲು ಕುಡ್ಡೋನ ಕಂಡೆ' ಹೇಳ್ದೋನೆ ಇಲ್ಲಾ. "ಅರಸು ತಲೆ ಹೋಡು ಹುಕುಂ ಕೊಟ್ಟರೆ ಕೊಡಲಿ"

ಎಂದು ಮನೆಗೆ ಬಂದ. ಅಲ್ಲೆ ಕೆಲಗೊಂದ ಅರಸತನದಲ್ಲಿ ಮಾಣಿ ಕುಂತ ಮರದ ಕೆಲಗೆ ಕೆರೆ ಈತು. ಮಾಣಿ ನೀರ ಕುಡಿದು ಮರದ ಮೇಲೆ ಕೂತಿದ್ದ.

ಪರದಾನಿ ಮೊಕತೊಲೂಕೆ ಅದೇ ಕೆರೆಗೆ ಹೋದ. ತೊಲಿಬೇಕಾದ್ರೆ ಮಾಣಿ ಮರದ ಮೇಲಿಂದ ಎಂಜಲ ಉಗಿದಬಿಟ್ಟ. ಪರ್ದಾನಿ ಬೆನ್ನ ಮೇನೆ ಬಿತ್ತು ಎಂಜಲ. "ಆನಿ ಹಾಲಕುಡದೋನಲ್ವೋ?" ಎಂದ. "ಹೌದು" ಅಂದ.

"ತಮ್ಮಾ, ಇಳಿದು ಬಾ. ಕೆಲಗೊಂದ ಅರಸತನದಲ್ಲಿ 'ಅರ್ಧರಾಜ್ಯ ಉಂಬಳಿ ಬರಕೊಡತೆ' ಅಂದಿರು, 'ಹುಡಗಿ ನಗ್ನ ಮಾಡ್ಕೊಡ್ತೆ' ಅಂದಿರು, ನಲ್ಲನ ಮಾತಿಗೆ ಬಾ" ಎಂದ.

ಆತ ಇಲಿದು ಬಂದ. "ಉಂಬ್ಲಿ ಕೊಡೋದು ಹೌದೋ?" ಕೇಳಿದ, "ಶಾವಿರ ರೂಪ್ಯಾ ಕೊಡುದು ಹೌದೋ?" "ಹೌದು." "ಹುಡ್ಗಿ ನಗ್ನ ಮಾಡಿಕೊಡೋದು ಹೌದೋ?" "ಹೌದು".

ಕರಕೊಂಡಹೋದ. "ಆನಿಹಾಲ ಕುಡದೋನೋ?" "ಹೌದು." "ಏನೇನಾಬೇಕು?" ಹೇಳಿದ. "ಆಗೋದು" ಅಂದ. ಮದ್ವಿ ತಯಾರಿ. ಕೇಲದ ರಾಜ್ಯಕ್ಕೆ ವಾಲೆ ಬರೆದು ಹಾಕಿದರು; ಕೇಲು ರಾಜ್ಯಕ್ಕೆ ಡಂಗರ. ಮದಿವೆ ದಿನ ರಾತ್ರೆಗೆ ಗಂಡ-ಹೆಂಡ್ತಿ ಕೋನೆಲಿ ಹಾಕಿದರು. ಒಂತಸರ (ಒಂದು ಸಲ) ಏದ್ದಿ 'ಎಲ್ಲೋಗತೀರಿ' ಕೇಲ್ತು. 'ಬತ್ತೆ'. ಅಂತು ಕವ್ಲ ಮೆಂದು ಬಿದ್ದ ಗಲ್ಗ ಮೇನೆ ಎದ್ದ. "ಮೈನೀರಿಗೆ ಹೋಗ್ತನೆ", ಮೆತ್ತಿನ ಮೇನೆ ಕಿಡಕಿ ಗುಟ್ಟ ಕಿತ್ತು ಕೊಟ್ಟು. ಮೈನೀರ ಬಿಟ್ಟ. ಮನಗಿದ. ಇದಕೆ ನಿದ್ರೆ. ಅಲ್ಲಿಂದ ಕಿಡಕಿಗಂಡಿಂದ ಹಾರಿ ಅದೇ ಮರಕೆ ಬಂದು ಕುಂತ. ಅತ್ತೆ ಬೆಲ್ಗ ಮುನ್ನ ಕಂಚಿನ ಚಂಬನಲ್ಲಿ ನೀರ ತಂದು ಮೆತ್ಗೆ ಬಂದು, "ಆನಿಹಾಲ ಕುಡಿದವ ಎಲ್ಲಿ?" ನೋಡತನ ಅಲ್ಲಿಲ್ಲ. 'ಎಲ್ಲಿ ಹೋದನೋ? ಯಾವ ಊರೋ, ದೇಸವೋ?' ಮರುಗಿದರು. "ಮಗಲು ಮರಗಬೇಡಿ, ನಾಲೆ ಬೆಲ್ಗಾಗ ತಂದ ಕೊಡ್ತೆ" ಅಂತು. ಅದೇ ಮರುದಿನ ರಾತ್ರೆ, "ಎಲ್ಲಾ ಹೇಳಿ ನುಗಲಬಿಡಿ. ನಾನು ಬರ್ತೇನೆ" ಹೇಳಿ ಪಾರ್ತನೆ (ಪ್ರಾರ್ಥನೆ) ಮಾಡ್ತು. ನುಗಲಬಿಟ್ಟ. ಆ ಮರಕ್ಕೆ ಹತ್ಕಂಡು ಹೋಯ್ತು. "ಹೀಗೆ ಮಾಡುದು ಯೋಗ್ಯಲ್ಲ. ಅತ್ತೆ-ಮಾವ ಮರಗತಿರು" ತಿಲಿ ಹೇಳಿ ಕರೆತಂದು ಹಮ್ಮಿಸಿಕೊಂಡಿತು.

ಅರಸ ಮಡಿದ; ವಂದ ತಿಂಗಳಲ್ಲಿ ಅರಸು ಹೆಂಡ್ತಿ ಹೋಯ್ತು. ಗಂಡ-ಹೆಂಡ್ತಿಗೆ ಮನೆಯಾಯ್ತು. ಸಂತೋಷದಿಂದರಬೇಕಾದ್ರೆ ಶಿದ್ದಕ್ಕಿ ಬಟ್ಟ, ಬಟ್ಟನ ಹೆಂಡ್ತಿ ಬೇಡ್ತ ಹೋದರು. ಆಗ ಗಂಡ ಮಲಗಿದ್ದ. ಹೆಂಡ್ತಿ ಬಿಕ್ಷ ತಂದದ್ದು, ಅವರ ನೋಡಿ, "ಹೆರಗೆ ಬನ್ನಿ" ಅಂತು. "ಹೋದ್ಯನೋಡಿ" ಅಂತು. ಬಟ್ಟ ಹೇಳಿದ, "ನಮಗೆ ಮೂರು ನೂತನ ಮಾನಿ ದೊರಕ್ಕಿದ್ದ. ಆನಂದಡವಿಲಿ ಬಿಟ್ಟಿ ಬಂದಿದ್ದೆ." ಮಾಣಿ, "ತಾನೆ ಸೈಯು". ಹೇಳಿದ್ದ. ಅಕಲ ಮಾಡ್ಕಂಡಿ ಹೆಂಡ್ತಿಗೆ, "ಇಕ ನಿನ್ನ ಮಾಮ, ನಿನ್ನ ಅತ್ತೆ, ಲೈಕದಿಂದ ಸಾಕಿಸಲಗಬೇಕು" ಹೇಳಿ ಸುಂಸ್ಥನದಲ್ಲಿವ್ರು.

- **ಕೆಲವು ಪದಗಳ ವಿವರಣೆ**

ಗರ್ಬೂಣಿ = ಗರ್ಭಿಣಿ
ಕೋಟಲೆ = ನೋವು
ಮೇಲೆಚ್ಚಿಕೊಂಡು = ಮೇಲಿಟ್ಟುಕೊಂಡು
ಗರಸೂಕೆ = ಹುಡುಕಲಿಕ್ಕೆ
ಕೋನೆ = ಕೋಣೆ
ಮೈನೀರು = ಮೂತ್ರ
ಹೋದ್ಯ = ಹೌದಾ(ಗಂಡನಿಗೆ ಮಾಡುವ ಸಂಭೋಧನೆ)
ಸುಂಸ್ಥನ = ಸುಖ-ಸಂತೋಶ (ಷ)
ಬಾಲಿ = ಶಿಶು
ವೀಲೆಪಟ್ಟಿ = ವೀಳ್ಯದೆಲೆ ಪಟ್ಟಿ
ಒಂತಟಿ = ಒಂದು ಸಲ
ನಲ್ಲನ ಮಾತು = ಒಳ್ಳೆಮಾತು
ಕವ್ಲ=ಕವಳ , ವೀಳ್ಯ
ಹಮ್ಮಿಸಿ = ಮಲಗಿಸಿ
ಲ್ಯಾಕಾ = ಒಳ್ಳೇದಾಗಿ

▪ ಹೇಳಿದವರು: **ನಾಗು ಗೌಡ,** ದುಗ್ಗೂರು, ತಾ. ಹೊನ್ನಾವರ.

❖

# ಸೂಳೆ ಸಂದದ ಹೆಣ್ಣು

ವಂದು ಅರಸು. ಅರಸೂಗೆ ಮದಿಯಾಗಿ ವಂದ್ ಹುಡ್ಗ ಹುಟ್ದಾ. ಆದ್ರೆ, ಆ ಹುಡ್ಗನಿಗೆ ಇದ್ದಿ-ಬುದ್ಧಿಯಿಲ್ಲ. ಬರ-ಸರ ಕಲ್ಸ್‌ದಾ-ಆನಂತ್ರದಲ್ಲಿ ವಂದ ಮದಿ ಮಾಡಬೇಕು ಹೇಳಿ, ಸೂಳೆಸಂದದ ಹೆಣ್ಣ ಮದಿಯಾಗಬೇಕು ಹೇಳಿ ಗರಸಿದ. ಅಪ್ಪ ಮುಪ್ಪಾಗ ಹೋಗಿನಲ್ರಾ? ತಾನೂ ಸೂಳೆಸಂದದ ಹೆಣ್ಣೇ ಮದಿಯಾಗಬೇಕು ಹೇಳಿ ಹುಡ್ಕದ. ಆಗೇನಿವ್ ಮಾಡ್ದ ಕೇಳಿದ್ರೆ, ಮನ್ಯಲ್ಲಿ ವಂದ್ ನೌಕರಿ ಕೆಲಸಕ್ ವಂದ್ ಹೆಣ್ ಹುಡ್ಗಿ ಇಟ್ಕಂಡಿದ್ದ. ಆ ಹೆಣ್ ತನ್ಗಬೇಡ ಹೇಳಿ, ತನ್ನಪ್ಪ ಸೂಳೆಸಂದದ ಹೆಣ್ಣ ಮದ್ಯಾಗಿದ್ದ. ತಾನೂ ಮದ್ಯಾಗಬೇಕು ಹೇಳಿ ಹೊರಟ್ದಾ ಕುದ್ರೆ ಮೇನೆ ಹತ್ತಿ. ಹೆಣ್ ಕೇಳು ಬಗ್ ಹೊರಟೆದ್ದಾ. ಹೊರಟ್ ಹೋಗಿ. ಆ ಹುಡಗೀನೂ ಅವನ ಬೆನ್ನಿಗೇ ಹೋಯ್ತು. ಹೋಗಿ ಆದ್ರೆನ್ ಮಾಡ್ದ? ಆ ಹುಡಗಿ ಬಿಟ್ಟ ಯೆಲ್ಲಿ? ವಂದ್ ಕಟ್ಟೆಮೇನ್ ಬಿಟ್ ಹೋದ. ಹೋಗ್ ಹೋಗ್, ಹೋಗ್ ಹೋಗಿ ತಗಟೇಲ ಸಮದರ ದಡಿಗೆ ಹೋದ. ಅಲ್ಲಿ ಕಟ್ಟೆಮೇನ್ ಕುಂತಾ. ಕುಂತು ಯಾಳೆದಲ್ಲಿ, ಗರಡ ಮರನ ಮೇನೆ ಗೂಡ ಮಾಡಿ ಮರಿಹಾಕದೆ. ಆ ಮರಿ ತಿನ್ನಲಿಕ್ಕೆ ಯಪ್ಪತ್ತೇಲ ಹೆಡೆ ಮಾಸೇಸ ಹೋಗಿ ಬಾಯ್ ಹಾಕ್ತದೆ. ಅದು ಗೂಡ್ ಎಲೆ ಬೇಕಾರೆ ಅವ ಆಗ ಆ ಹೊತ್ತಿಗೆ ಮೇನೆ ನೋಡ್ದ. ಅದೇ ಯಳ್ಯದಲ್ಲಿ ಆ ಮರಿಕೊಂದ್ ಹಾಕ್ತದೆ ಹೇಳಿ ಪಟದ ಕತ್ತಿ ಇತ್ತು ಇವ್ನಹತ್ರ. ಅದ ಮೂರೆ ತುಂಡ ಮಾಡ್ ಕೆಳ್ಗೆ ಕೆಡ್ಗದ. ಆ ಗರಡನ ಮರಿಯೇನ ಹೇಳ್ತು? ಇಟ್ಟ್ ಹೇಳ್ತು, “ಮನಶಾ...

ನೀನೇ ನಮ್ಮ ಜಲ್ಮ ಇಟ್ಟೆ" ಅಂತು. "ಯೇನ ವರ ಬೇಡ್ರೆ ಆ ವರ ಕೊಡಶ್ತಿ" ಹೇಳ್ತು. ಅಪ್ಪ-ತಾಯಿ ಬರುವಾಗೆ, "ತನ್ಗೆ ಯೇನೂ ಬೇಡಾ. ತಗಟೇಲ ಸಮುದ್ರಾಶೇಲಿ ತಕಂಡ್ ಹೋಗಿ ತನ್ ಬಿಡಬೇಕು. ಯೇನೂಂದ್ರೆ ನನ್ನ ಅಪ್ಪ ಸೂಳೆಸಂದದ ಹೆಣ್ಣ ಮದಿಯಾಗಿದ. ನಾನೂ ಸೂಳೆಸಂದದ ಹೆಣ್ಣೆ ಮದ್ಯಾಗಬೇಕು ಹೇಳ್ ಬಂದಿದೆ. ಆ ಹೊತ್ತಿಗೆ ತಾಯಿ-ತಂದೆ ಬಂದ್ರು ಗೂಡ್ಗೆ. ಆಗ ಅವ್ರು ಯೆರೆ ಕೊಡತ್ರು. ದಿನಿಶೂ ಯೆರೆ ತಕತಿತ್ತು. ಇವತ್ತಿನ ದಿವ್ಸದಲ್ಲಿ ಯೆರೆ ತಕಲ್ಲೂದಿಲ್ಲ. "ಯೇನಾಯ್ತು ನಿಮಗೆ?" ಇಸಾರ ಮಾಡ್ರು ತಂದೆ-ತಾಯಿ. 'ಯೇನಿಲ್ಲ, ನೋಡಿ... ಕೆಲ್ಗೆನೋಡಿ" ಅಂತು. ಮಾಸೇಸ ಕೆಲ್ಗೆ ತುಂಡಾಗ ಬಿದ್ದಾನೆ. "ಆ ಮನಶ ಯಾರು? ಅಟ್ ಮಾಡ್ದ ಮನ್ಶ್ಯಗೆ ಯೇನ ಬೇಕಾದ್ರೂ ವರ ನಾಮು ಕೊಡತ್ರು" ಹೇಳ್ತು. "ಯೇನೂ ಬೇಡ ತನಗೆ, ತನ್ನ ತಗಟೇಲೆ ಸಮುದ್ರದ ಆಶೇಲಿ ತಕಂಡ ಹೋಗ್ ಇಕಬೇಕು. ನಾನೂ ಸೂಳೆಸಂದದ ಹೆಣ್ಣ ಮದಿಯಾಗಬೇಕು ಹೇಳ್ ಹೋಗ್ತೇನೆ."

ಅವಾಗ, "ಅಟ್ಟೆಯಾ? ಅಡ್ಡಿಲ್ಲ" ಹೇಳಿದ್ರು. ವಬ್ಬ ಕುದ್ರೆ ಕಚ್‌ಕಂತು. ವಬ್ಬ ಅವನ ಕಚ್‌ಕಂತು. ತಗಟೇಲ ಸಮುದ್ರದ ಆಶಿಲ್ ತಕಂಡ ಹೋಯ್ತು. ಅಲ್ಲೊಂದು ಮುನಿ ಇದ್ದ, ದೇಶತನ ಇತ್ತು. ಹೌದು. ಅವರ ಹತ್ರ ಹೋಗಿ ಇಶಾರ ಮಾಡ್ದ ಇವ. ಆಗೆ, "ತಮ್ಮ ಅಡ್ಡಿಲ್ಲ. ನೀನ್ ಮದ್ಯಾಕ್ ಹೋಗುಕಡ್ಡಿಲ್ಲ" ಹೇಳ್ದ. "ವಂದ್ ಕಯ್ಯೆಲ್ ವಂದ್ ಟುವಾಲ್ ತಕಂಡ್ ಬರಬೇಕು. ಇದೇ ಮೂರ ಕಲ್ ತಾನು ಮಂತ್ರಿಸಿ ಕೊಡ್ತೇನೆ. ನೋಡು ಆ ದಂಡೆವಲ್ಗೆನ ದಾಲಿಂಬೆ ಮರ ಅದೆ. ನೀನು ಆ ದಾಲಿಂಬೆ ಮರಕ್ ಹೋಗಬೇಕು. ಅದ್ಕೆ ಬಾಲು-ಸರಪರಣಿ ಬಾಲ ಕಾವ್ಲ್ ಅದೆ. ಅದ್ಕೆ ಅವಾಗೆ, 'ಆ ಮರಕಿದ್ದದ್ ಯೇನದೆ ಅಟ್ಟೂ ಹೋಪೇಕ್' ಹೇಳಿ ವಂದ್ ಕಲ್ಲ ಹೊಡಿ." ಅಂದ್ರು. "ಅವಟ್ಟು ಬಿಟ್ ಹೊರ್ಗೆ ಹೋಗ್ತದೆ. 'ತಲಾ ಬುಡಾ ಮೇನ್ನವರಿಗೂ ಮುಲ್ಯೇನದೆ ಬಗಲಾಗಬೇಕು' ಹೇಳಿ ವಂದ ಕಲ್ ಹೊಡೆ. ಆ ನಂತ್ರದಲ್ಲಿ ಮೇನ್ ಮರಹತ್ ಹೋಗಿ ಕಯ್ಯೆಲ್ ಮಾತ್ರ ಕಿಟ್ ಬಾರ್ದು. ಟುವಾಲ ಕೆಲಗ ಹಿಡದಿ, 'ದಾಲಿಂಬೆ ಹಣ್ಣು ಬೀಲು ಬೀಲು' ಹೇಳ್ಬೇಕು. ಆ ಹಣ್ ಬಿದ್ದಕೂಡಲೇಯಾ ಹಾಂಗೇ ಕಟ್ಟ್‌ಬಿಡಬೇಕು. ಟುವಾಲದಲ್ ಹಾಕಿ ಕಟ್‌ಕಂಡ್ ಕೆಲ್ಗೆ ಇಲ್ದ್ ಬರಬೇಕು. ನೀನು ಹತ್ತ ಮಾರು ಇಶೇಲ್ ಬಂದ್ಕಂಡು, 'ಅದ್ಯೇನದೆ ಅಲ್ಲೇ ಕೂಡ್ ಹೋಗಬೇಕು' ಹೇಳಿ ವಂದ್ ಕಲ್ ಹೊಡ್ಡಿಕೆ ಬಾ" ಅಂದ. ಅಲ್ ಹೋಗಿ ತಕಂಡ್ ಬಂದ.

ಆ ನಂತ್ರದಲ್ಲಿ ಮುನಿ ಹತ್ರ ಬಂದ. "ಇದಯೇನದ್ಯೋ, ನಿಮ್ ನಡ್ ದಾರಿಲ್‌ಯೆಲ್ಲೂ ಬಿಚಬಾರದು. ನಿನ್ ಮನೆಗೋಗಿ ಬಿಚಬೇಕು." ಕಟ್ ಬಂದ.

ಅದೆ ಕಟ್ಟೆಮೇನೆ ಕೆಲಗಿಲದಿ ಕುದ್ರೆ ಹತೆದಾ. ಹತ್ತಿ ಅದೆ ಮಾರ್ಗದಲ್ಲಿ ಹಿಂತಿರ್ಗಿ ಮನೆಗ್ ಹೊಂಟ್ ಬಂದಾ. ಬರುಹೊತ್ನಲ್ಲಿ ಆ ಹುಡುಗಿ ಇದೆ ಕಟ್ಟೆಕೂಡೆ ಬರುರೊಲಗೆ ಆಡ್ಡಗಟ್ಟ್ ಹಿಡಿತು ಕುದರ್ಯಾ. ಆ ನಂತ್ರದಲ್ಲಿ ಅವ್ನ ಕುದ್ರೆ ಹಿಡೂರೊಲ್ಗೆ ಕೆಲ್ಗೆ ಇಲ್ದಾ. ಆಗೆ, "ಒಹೋ...! ನೀ ಸೂಳೆಸಂದದ ಹೆಣ್ ಮದಿಯಾಗೋಕೆ ಹೋಗಿದೆ. ನೀನ್ ಹಿಂಗ್ ಹೋದ್ರೆ ಮನಿಹತ್ರ ಯೇನ ಹೇಳೂರು?" ಅದ್ರ ಮಾತ್ನ ಕೇಲಿ ಅದರ ಬಿಚಬಿಟ್ಟ. ಬಿಚ್ಚುರೊಳಗೆ

ಆಕಲ್ ಹಾರಹೋಯ್ತು. ಅವ ಹಾರ್ ಕೆಲ್ಗೆಬಿದ್ದ. ಕೂಡಲೆಯಾ ಆ ಹುಡ್ಗಿ ಯೇನ ಮಾಡ್ತು? ಸೂಳೆಸಂದದ ಹೆಣ್ ತಕಂಡಿ, "ತಂಗೀ, ಅವನಿಗೆ ಶಂಗಟಾಗಿ ಬಿದ್ದ. ನೀರ ತೆಕ ಬರ್ವಾ" ಹೇಳಿ ಕೆರೆಗೆ ಕರಕಂಡ ಹೋಯ್ತು. ಕರಕಂಡ ಹೋಗಿ ಅದ್ರ ಕೆರೇಲಿ ದೂಡಹಾಕಿಕೆ ಬಂದ ಬಿಡ್ತು– ಆ ಸೂಳೆಸಂದದ ಹೆಣ್ಣಾ. ಆ ಹೆಣ್ಣು ನೀರ ತಂದಿ ಇವ್ನಿಗೆ ಹಾಕ್ತು. ಆಗ, "ನಿಮ್ಗ್ ಯೇನಾಗೋಯ್ತು? ತನ್ ಕಾಂಬೂದ್ರೊಳ್ಗೆ?" ಹೇಳ್ತು. ಯಚ್ಚರಾಯ್ತು ಅವನಿಗೆ. ಇದು ಆಬರ್ನ ಹಾಕಂಡ್ತು. ಆನಂತ್ರದಲ್ಲಿ ಗುತ್ತಾಗಿ ಅದ್ರೂ ಕುದ್ರೆ ಮೇನೆ ಹತ್ಸ್ಕಂಡೇ ಬಂದು, ಮನಿಹತ್ರ ದಿಬ್ಬಣ ಬಂತು ಹೇಳಿ ಅಲ್ಲಿ ಚುದ್ದಿಹೇಲ್ದ್ರು. ಬೇಕಾದ ಕಜ್ಜಾಯ ಮಾಡಿದ್ರು. ಮದಿ ಬಂತು ಹೇಳಿ. ಆಗ ದಿಬ್ಬಣ ಮನೆ ದುಂಬಿತು. ಬೇಕಾದ ಯೆಲ್ಲಾ ಉಪಶರ ಮಾಡದ್ರು ಬಂದ ಮಂದಿಗೆ. ಆ ನಂತ್ರದಲ್ಲಿ ಮದಿ ಆಯ್ತು.

ಕೆರೆವಲ್ಗೆ ಯೇನಾಯ್ತು ಕೇಲದರ. ಅರಸರ ಮನೆಗೆ ಕೆಲಸಾ ಮಾಡೂಕೆ ಹೋಗು ಮುದ್ಕಿ, ಕೆರೆಗೆ ವಶ್ತ್ರಾ ಶೆಲೂಕೆ ಹೋಯ್ತು. ಹೋಗಿ ವಶ್ತ್ರಾ ಶೆಲಿಬೇಕಂದ್ರೆ ಕಲ್ ನಡ್ಗೆ ಮಾವ್ನ ಹಣ್ಣಾಗಿ ತೇಲ್ತಾ ಬಂತು. ಬರವಾಗ- 'ನನ್ಗೆ ಹಾ! ಅಪರೂಪಕೆ ಶಿಕ್ತು.' ಹೇಳ್ತು. ಮನೆಗೆ ತಕಂಡ್ ಬಂತು. ತಟ್ಟಿ ಬಿಡಾರ ಅದರದು. 'ಆಗಲಿ, ವಂದ ಅಪರೂಪ ಸಿಕ್ಕದೆ' ಹೇಳಿ, 'ನಾಳೆ ತಿನ್ನವಾ' ಹೇಳಿ ಅಕ್ಕಿ ಮಡಕಿಲಿ ಹಾಕಿಟ್ತು. ಆಗ ಮರದಿನ ಕೆಲಸಕೆ ಹೋಯ್ತು ಅರಸರ ಮನೇಲಿ. ಕೆಲ್ಸ ಮಾಡಕಂಡ ಹಿಂತಿರ್ಗೆ ಮನೆಗೆ ಹೋಯ್ತು. ಅನ್ನಾ ಮಾಡಬೇಕು ಹೇಳಿ ಅಕ್ಕಿ ಮಡಕೇಲಿ ಅಕ್ಕಿ ತರೂಕೆ ಹೋಯ್ತು. ಮಡಿಕೆ ತುಂಬ ಹುಡ್ಗಿಯೇ ಅದೆ! "ಅಯ್ಯೋ ಮೊಮ್ಮಗಳೆ.... ಇಲ್ಯಾಕೆ ಹೊಕ್ಕಂಡಿದೆ?" ಹೇಳಿ ಹೆರ್ಗೆ ಕರ್ಕಬಂತು. ಬಂದಿ ಬಾಲ್ ವಪ್ಸರ ಮಾಡ್ತು ಅದ್ಕೆ. ಆಗದ್‌ಕೆ, "ಇಲ್ಲೆ ವಲಿ, ನಾನು ಅರಸರ ಮನೆಗೆ ಹೋಗಬತ್ತಿ" ಹೇಳಿ ಹೋಯ್ತು.

ಆಗ ಅರಸರಿಗೆ ಸುದ್ಯಾಯ್ತು. 'ತನ ಮನೆ ವಲ್ಗೆ ಇಂತಾದೊಂದು ಹುಡ್ಗಿಯದೆ. ತಾನೆ ಹೀಗ ಮಾಡಿದೆ. ಹೀಗೆ ಮಾಡ್ಕಂಡಿ ತಂದೆ.' ಬೆನ್ನತ್ತಿ ಬಂದ್ರು ಅವರು. ಹುಡ್ಗಿ ಕರ್ಕಂಡ ಹೋದ್ರು. ಆಗೆ ಮನಿಹತ್ರ ಇಟ್ರು. ಇಟ್ವಾದ ನಂತ್ರದಲ್ಲಿ, "ಇವತ್ ನಾನ್ ವಂದ್ ಹುಡ್ಗಿ ತಂದನೆ. ಶಲೋ ಊಟ ಮಾಡಬೇಕು. ಶಲೋ ಅಡಗಿ-ಬಿಡಗಿ ಮಾಡು" ಹೇಳಿ ಅವರು ಶಿರಗಾಡುಕೆ ಹೋದ್ರು. ನಂತ್ರದಲ್ಲಿ ಇದೆ ಯೆಲ್ಲಾ (ಮದುವೆಯಾದ ಕೆಲಸದ ಹುಡುಗಿ) ಕೆಲಸಾನೂ ಮಾಡಿ, ಆ ಹುಡ್ಗಿ ಹತ್ರ, "ಇದೇ ಕೋಣಿವಲ್ಗೆ ಮನಿಕ" ಹೇಳ್ತು. ಆಗಿದು ವಡೆ ಬಂಡಿ ಯೆತತು. ವಡೆ ಸುಡತೆ ಇರಬೇಕಾದ್ರೆ. ಆ ಮಗೂಗೆ ನಿದ್ರೆ ಬಂದ ಹೋಯ್ತು. ನೋಡ್ಕಂಡು ಅದ್ಕೆ ನಿದ್ರೆ ಬಂದ ಯೇಳೆದಲ್ಲಿ ಬಿಸಿ ಯೆಣ್ಣೆ ತಕಂಡ ಅದ್ರ ಬಾಯ್ಗೆ ಹೊಯ್ದಬಿಡ್ತು. ವಂದ ವಡೆನಾದ್ರೂ ತೆಗ್ದ್ ಅದ್ರ ಬಾಯ್ಲೆಟ್ತು. ಅದೆ ಅಲ್ಲೇ ಕಲಾಸಾಯ್ತು ಹುಡ್ಗಿ.

ಅವಾಗೆ ಅಲ್ಲಿ ಅವ್ರ ಮನೆಲ್ ಪೊಲೀಸ್ರ ಇದ್ದೊರ್ ಕೂಡೆ, 'ಆ ಹುಡ್ಗಿ ತಕಂಡ ಬಸಮ ಮಾಡಿಕೆ ಬಾ' ಹೇಳಿದು. ಅಲ್ಲಿ ತಕಂಡ ಹೋಗಿ ಬಸಮ ಮಾಡ್ದಲೆ ಹಬ್ಬರಗಿ ವನವಾಯ್ತು. ಅವ್ರ ಯಾರು ಹೋದ್ರೂವ ದೂರ ಕಾಣ್ತದೆ. ಹೊಂಗ ಕೊಯ್ಯುಕೆ ಕಾಣ್ಸದಿಲ್ಲ. ಆಗ ಅರಸ

ಇವರಿಗೆ ಸುದ್ಯಾಗಿ ಹೋದ್ರು. ಹಬ್ಬರಗಿ ಹೊಂಗ ಕೊಯ್ಕಂಡ ತಕಂಡ ಬಂದ್ರು. ಅಟ್ಟೂವ ತಂದಿ ಮನೇಲಿರೊಳ್ ಕೂಡೆಯ, "ಗನಾ ಹೂವುದಂಡೆ ಮೆಟ್ಕಂಡೆ ಸೂಡ್ಕೊ." ಸೂಡಾದ ನಂತ್ರದಲ್ಲಿ ತಲೆ ದೂಡ ಹೊತಾಕ್ದ ಹಾಂಗಾಯ್ತು. ಅದ್ಕೆ ಅದ ಕೂಡ್ಲೆ, ದಂಡೆ ಗಿಪ್ಪರಿಸಿ ವಂದ್ ಕೆರೆವಲ್ಗೆ ವಗೆದಿ ಬಂದ್ಬಿಟ್ಟು. ಅಲ್ಲಿ ಏನಾಯ್ತು? ವಂದೆ ತಾದಿಬಾರ ನೆಲ್ಲಿ ಹುಂಗ್ ಹುಟ್ಟು. ಆ ಹುಂಗು ಯಾರೆ ಬಂದ್ರೂ ಕಣ್ಗೆ ಕಾಂಬೋದು, ಕೈಗೆ ಸಿಕ್ಕೂದಿಲ್ಲ. ಮುಳ್ಕಂಡ್ ಹೋಗ್ತದೆ. ಆಗ ಅದೇ ಅರಸರಿಗೆ ಸುದ್ಯಾಯ್ತು. ಆಗ ಅದ್ರ್ ಕೂಯ್ಕಂಡ ತಕಂಬಂದ್ರು. ಮನೆಗೆ ತಕಬಂದ್ ಮ್ಯಾಲೆ ಇದು ತಾನೆ ಸೂಡ್ಕಂತೆ ಅಂದ್ ಮತ್ತೆ ಸೂಡ್ತು. ಸೂಡದ ಮೇನೆ ಅದೇ ನಮೂನಿ ತಲೆದೂಡಹಾಕೂ ನಮೂನ್ಯಾಯ್ತು. ಆ ಹೂಂಗ ಚುಪ್ಪರಸಿ ಗೋರಾನೆ ಅಡವಿಗೆ ತಕಂಡ ಹೋಗ್ ವಗ್ದೆ ಬಂದಬಿಡ್ತು. 'ಅಲ್ಲೇನಾಯ್ತು?' ಕೇಲಿದ್ರೆ. ಬರೀ ನಾಣೀ ಗಿಡ ಆಗಿ ಹುಟ್ಟೂ. ಹೂತಾಕ್ದಲ್ಲಿ ಎಲ್ಲಾರೂ ನಾಣಿ ಗೆಡಾಗದೆ ಅಂದ್ ಹೋಗ ನೋಡತ್ರು. ಕೈಹಾಕಿದರಂದ್ರೆ ಬರಿ ಎಲ್ಯಾಗಿ ಹೋಗ್ತದೆ. ಆಗ ಇದೇ ಅರಸರಿಗೆ ಸುದ್ಯಾಯ್ತು. ಆನಂತ್ರದಲ್ಲಿ ಇವ್ರ ಹೋಗಿ ಅಟ್ಟೂವ ಕೂಯ್ದಿ ತಕಂಡ ಬಂದ್ರು. ಅರಸರು ಆ ದೇವರ ಗುಡಿಗೆ ಬಂದ್ರು. ವಂದ್ ದೇವಸ್ಥಾನ ಇತ್ತು. ಅಲ್ಲಿ ಆಗ ದೇವರಲ್ಲಿ ಬಂದ್ಕಂಡಿ ಕೆಲ್ಗೆ ನಾಣಿ ಎಲ್ಲಾ ಹೊಯ್ದರು. ಅದು ಹುಡ್ಗಿಯಾಗಿ ಹೋಯ್ತು. "ಇದೇ ನೀ ತಂದ ಹೆಣ್ಣು" ಹೇಳ್ತು ಆ ದೇವರು. ಅಲ್ಲಾಗಿ ಮನೆ ಹತ್ರೆ ಶುದ್ದಿ ಮುಟ್ಸಿದ್ರು. ಅವರು ಯೇನೆಂದ್ರೆ ಪೊಲೀಸ್ರ ಹತ್ರೆ, "ಆ ಹೆಣ್ಯೇನದೆ ಅದ್ರ ಸಾಮಾನ ಪೂರಾ ತೆಗದೀ ಅಡವಿ ಅರಾಣಕೆ ತಕಂಡ ಹೋಗಿ, ಶಮಾ ಮೂರ್ ಪಾಲ್ ಮಾಡಿ ಕಡ್ದ್ ಹಾಕ್ ಬನ್ನಿ. ಆನಂತ್ರದಲ್ಲಿ ಊರ ಸಮೇತ್ಯೆಲ್ಲ ಸರ್ವರೂವ ದೊಡ್ಡ ದೊಡ್ಡ ಸಾವಕಾರ ಬೀವ್ಕಾರೆಲ್ಲಾ ಒಟಗೂಡಿ ಬಿಜ್ಜಯ ಮಾಡಬೇಕು. ದಿಬ್ಬಣ ಬರತದೆ." ಇಲ್ಲಿ ವಾದಿಯೆಲ್ಲ ತಕಂಡ ಬಂದ್ರು. ದಿಬ್ಬಣೆಲ್ಲ ತಂದ್ರು. ಈವಾಗೆ ಸುಕ ಸಂತೋಶದಿಂದ ಗಂಡ-ಹೆಂಡ್ತಿ ಆನಂದದಿಂದ ಇದ್ರು.

- **ಕೆಲವು ಪದಗಳ ವಿವರಣೆ**

| | |
|---|---|
| ಸಂದದ = ಚಂದದ | ಯಾಳೆ = ವೇಳೆ |
| ದಿನಶೂ = ದಿನಾಲೂ | ಯೆರೆ =ಊಟ |
| ಇಕಬೇಕು= ಇಡಬೇಕು(ಬಿಡಬೇಕು) | ದೇಶವನ = ದೇವಸ್ಥಾನ |
| ಇಶಾರ = ವಿಚಾರ | ಸರಪರಣಿ = ಕಬ್ಬಿಣದ ಸರಪಣಿ |
| ಉಪಶರ = ಉಪಚಾರ | ವಶ್ತ್ರಾ= ವಸ್ತ್ರ |
| ವಪ್ಸರ = ಉಪಚಾರ | ಗಿಪ್ಪರಿಸಿ = ಚಿಪ್ಪರಿಸಿ (ಚೂರು ಮಾಡಿ) |
| ಗೋರಾನೆ = ದಟ್ಟ | ನಾಣೀ ಗಿಡ = ನಾಣ್ಯದ ಗಿಡ |
| ಬಿಜ್ಜಯ = ಸಮಾರಾಧನೆ | ವಾದಿ = ವಾದ್ಯ |

- ಹೇಳಿದವರು: **ದಿ. ರಾಮಕೃಷ್ಣ ಮಾರು ಗೌಡ,** ಕಲ್ಕೋಡು, ಹೆಗಡೆ ಊರು, ದಿ: 29.09.1972,

# ಹತ್ತುಂಡೆ -ಬಿಟ್ಟುಂಡೆ

ಗೌಡಗೆ ಹುಡುಗ ಇದ್ದ. ತಾಯಿ-ತಂದೆ ತೀರಿದರು. ದೇಸಾಂತರ ಹೋಗಲು ಶರಕ ಮೊಟ್ಟೆ ಕಟ್ಕಂಡ ಹೈಟಬಿದ್ದ. ಸೋದರಮಾವ ಬಂದ, "ಎಲಾ ಅಲಿಯ, ಎಲ್ಲಿ ಹೋಗ್ತೆ?" ಕೇಳಿದ. "ತಾಯಿ-ತಂದೆ ತೀರಿದರು. ಇದ್ದೇನು ಬಾಳಿಮಿ? ದೇಸಾಂತರ ಹೋಗುವ ಹೇಳಿ ಹೈಟಬಿಟ್ಟೆ ಮಾಮ" ಅಂದ. "ಅಲಿಯ, ಹೋಗಬೇಡ. ಮೂರು ಹೆಣ್ಣುಮಕ್ಕಲಿವರು. ಒಂದಲ್ಲ ಒಂದು ಲಗ್ನ ಅಗಲಕ್ಕ. ಕಂಡ ಕೆಲಸ ಗೈಕಂಡಿ, ಬಿಂದ ಗಂಜಿ ಉಂಡ್ಕಂಡಿ, ನನ್ನ ಮನೆಲುಲ್ಕ" ಅಂದ.

ಮನೆಗೆ ಕರಕಂಡ ಹೋದ. ಕಂಡ ಕೆಲಸ ಗೈದು ಉಳಿದ. ಹಿರಿಮಗಳು ಅಲಿಯಂಗೆ ಸುದ್ದಿಲ್ದೆ ನೆಂಟಸ್ತನ ಮಾಡಿದ. "ಎಲಾ ಅಲಿಯ, ಗೇರಸಪ್ಪೆಗೆ ಹೋಗಬೇಕು. ಬಾಳೆಕಟ್ನ, ಎಲಿಕಟ್ಟು, ಸಕ್ರೆ, ಸರೂ ಜೀನ್ಸ ತರಬೇಕು." ಹೇಳಿ ಕಳಿಸಿದ. ಜಾಗ್ರತೆ ತಂದ. ದಿಬ್ಬಣ ಬಂತು. ಮದಿ ಸಾಗಿಸಿದ. ಈವಾಗೂ ಬೇರೆ ನೆಂಟಸ್ತನ ಮಾಡಿದ. ಯೆರಡನೇದೂ ಸುದ್ದಿಲ್ಲದೆ ನೆಂಟಸ್ತನ ಮಾಡಿದ. "ಸಾಮಾನ ತರಬೇಕು" ಅಂದ. ತಂದ. ದಿಬ್ಬಣ ಬಂತು. ಮದಿ ಸಾಗಿಸಿದ.

ಕಿರಿ ಹುಡುಗಿಗೂ ಸುದ್ದಿಲ್ಲದೇ ನೆಂಟಸ್ತನ ಮಾಡಿದ. "ಪೇಟೆಗೆ ಹೋಗಿ ಸಾಮಾನು ತಾ." ಅಂದ. ಆ ದಿನ ಜಾಗ್ರತೆ ಸಾಮಾನ ತಂದ. ದಿಬ್ಬಣ ಬರವನಕ ತಂದ. "ಕತ್ಯಲ್ಲಿ ಕಡಿಬಾರ್ದು. ಬಳ್ಳಲಿ ಕಟ್ಟಬಾರ್ದು. ಸೌದೆ ತರದೆ ಬರಬಾರದು. ಸೌದಿಗೆ ಹೋಗಬೇಕು" ಅಂದ. ಆನಂದ ಅಡವಿಗೆ ಹೋಗಿ ಮರುಗಬಿಟ್ಟ. ಆಗ ಅಚ್ಚಗನ್ನಿ ದೇವಗನ್ನಿರು ಅಕ್ಕತಂಗಿರು ಯೇಳ ಮಂದಿ ತಣ್ಣೀರ ತಾನಕೆ ಹೋದವರ್‍ರು ಬಂದ್ರು. "ನರಮನಸ ಮರಗತಾನೆ" ಅಂದ್ರು.

"ಸ್ವಾಮಿ, ತಾಯಿ-ತಂದೆ ತೀರಿ ಹೋಗೂರಟ್ಟಕೆ ದೇಸಾಂತರ ಹೋಗಬೇಕೆಂದು ಹೊರಟಬಿದ್ದಿದ್ದೆ. ಸೋದರ ಮಾವ ಮೂರು ಹುಡ್ಗೀರಿವ್ರು. ಒಂದ ನಗ್ನಾಕಂಡಿ ಬೆಂದ ಗಂಜಿ ಉಡ್ಕಂಡಿ, ಕಂಡ ಕೆಲಸ ಗೈಕಂಡಿ, ಅಂದ. ಕರ್ಕಬಂದ. ಯೆಯ್ಡು ಹುಡ್ಗಿರಗೆ ನಗ್ನ ಆಯ್ತು. ಕಿರಿ ಹುಡ್ಗಿ ನಂಟಸ್ತನ ಮಾಡ್ಕಂಡ್ಯ. 'ಕತ್ಯಲಿ ಕಡಿಬಾದ್ದು, ಬಳ್ಳಿಲಿ ಕಟ್ಟಬಾರ್ದು, ಸೌದೆ ತರದೆ ಬರಬಾರದು' ಅಂದ."

"ಸಣ್ಣ ಜಿಗ್ಗೆಲ್ಲ ಮುರಿದು ಒಟ್ಟು ಮಾಡು, 'ಹತ್ತುಂಡೆ' ಅನ್ನು. ಹತ್ತತದೆ. 'ಬಿಟ್ಟುಂಡೆ' ಅನ್ನು, ಬಿಟ್ಕೊಂತದೆ" ಅಂದರು, ಹೋದರು.

ಜಿಗ್ಗೆಲ್ಲ ಮುರಿದು, ಒಟ್ಟೆಸಿ, 'ಹತ್ತುಂಡೆ' ಅಂದ. ಬಂದ ಹೊತಾಕಿ. 'ಬಿಟ್ಟುಂಡೆ' ಅಂದ. ತೆನೆಗೆ ಹೋಗಿ ಕೂತ. ಅಲ್ಲಿ ಕಿರಿಮಗಳ ದಿಬ್ಬಣ ಬಂತು. ಪುರೇತ ಭಟ್ಟ ದಿಬ್ಬಣ ಬಂತಂತಂದು ಮೂತ್ರ ಬಿಡ ಹೋದ. ಕೈಗೂ ಕಟ್ಟಿಗೂ 'ಹತ್ತುಂಡೆ' ಅಂದ. 'ಬನಿ' ಅಂತಿರು, "ಕೈ ಬಿಡುತ್ತಿಲ್ಲ ನಾ ಹೇಗೆ ಬರಲೋ?" ಕೇಳಿದ.

ಸೋದರಮಾವ ದೇವಸ್ತಾನಕ್ಕೆ ಹೋಗಿ, ದೇವರ ತಕ್ರೀರ ಹಳಿ, ಹೇಳಾನ ಹೇಳಿಕಿ ಮಾಡ್ಕಂಡ (ಕೈಹಣಿಗೆ ಹಚ್ಚಿಕೊಂಡ) ಕೈಗೂ ಹಣಿಗೂ "ಹತ್ತುಂಡೆ" ಅಂದ. ಅತ್ತೆ ನೀರಿಗೆ ಹೋಗಿದ್ಲು. ಕೊಡಪಾನಕ್ಕೂ ಸೊಂಟಕ್ಕೂ, "ಹತ್ತುಂಡೆ" ಹೇಳಿದ. 'ಕೊಡಪಾನ ಇಡೆಂ'ತಿರು, 'ಸೊಂಟ ಬಿಡತಿಲ್ಲೆ' ಅಂದ್ರು.

ದಿಬ್ಬಣದವರು ಹೇಳಿದರು, ''ಮಗಳ ಅವಗೇ ಕೊಡು'' ಅಂದ್ರು, ಆಗೊದಂದ ಮಾವ. "ಬಿಟ್ಟುಂಡೆ" ಅಂದ. "ಬಿಟ್ಟು ಹೋಗಲಿಂ"ದ, ಬಿಟ್ಟು ಹೋಯ್ತು. ದಿಬ್ಬಣ ಹಿಂದೆ ಹೋಯ್ತು. ಬರು ಬಿಲಿ ಬುದವಾರ ನಗ್ನಕಿಟ್ರು. ಸೋದರಲಿಯಂಗೆ ಮಗಳ್ನ ನಗ್ನ ಮಾಡಿಕೊಟ್ಟ ಅರಸುತನದಲ್ಲಿರುವ.

- **ಕೆಲವು ಪದಗಳ ವಿವರಣೆ**

ಶರಕ =ಸಾಮಾನು
ಬಾಳಿಮಿ = ಬಾಳ್ವೆ
ಜೀನ್ತ = ಸಾಮಾನು
ತಾನಕ್ಕೆ = ಸ್ಥಾನಕ್ಕೆ
ನಗ್ನ= ಲಗ್ನ
ಅಲಿಯ = ಅಳಿಯ
ಬಿಂದ = ಬಿಂದಿಗೆ , ತಂಬಿಗೆ
ಮರುಗು = ಅಳುವುದು
ಹೇಲಾನ ಹೇಲಿಕಿ = ಪ್ರಾರ್ಥನೆ

▪ ಹೇಳಿದವರು. **ದಿ.ಪುಟ್ಟು ನಾಗು ಗೌಡ,** ದುಗ್ಗೂರು.

❖

# ಹುಲಿ ಗಲಿಬಿಲಿ

ಯೆಲ್ಯಣ್ಣ, ಹುಲ್ಯಣ್ಣ ಇದ್ದಿದ್ರು. ಯೆಲ್ಯಣ್ಣ ತಾ ಹೆಚ್ಚಂತಿ, ಹುಲ್ಯಣ್ಣ ತಾ ಹೆಚ್ಚಂತಿ ತಿರಗತ ತಿರಗತ ವಳೆದ್ರು. ಶರ್ತ ಬಿತ್ತು. "ಯಾವ ದಿನ ಕುಸ್ತಿ ಆಡ್ವನೇ?" ಯಲ್ಯಣ್ಣ, "ಯಂಟ ದಿನದ್ ವಳಗ ಕುಸ್ತಿ ಆಡ್ವನೇ" ಅಂತು. ಯೆಲಿ ಯೇನ ಮಾಡ್ತು? ಏಕ್ದಂ ಬಂಡಿ ಗೋಳಿ ಮೇಣ ಕಚ್ಕಂಡಿ, ಮೇಣ ತಕಂಡಿ ನೆರ ಮಾಡುದು. ದಿನಕೂ ವಂದ ಗುಂಡ ಮಾಡ್ತು ಇಷ್ಟ ದೊಡದು. ಸೋಮಾರ ನಾಳಿಕೆ ಕುಸ್ತಿ ಮಾಡಬೇಕಂದಿ ಮಾತಾಡಕಂಡ್ರು.

ಯೆಲಿ ಮೇಣದ ಗುಂಡ ಹಾಗೆ ಮಾಡ್ತು. ಅದ್ರಲ್ ಹೊಕ್ಕದ್ದು. ಆ ಬದಿಕೆ ಹುಲಿ, ಈ ಬದಿಕೆ ಯಲಿ. ಕುಸ್ತಿ ಯೆಯಡ ಮಂದಿ ಕುಸ್ತಿ. ಅದು, 'ಹುಲಿ ತಿಂತೆ' ಅಂತ. ಹುಲಿ, 'ಇದ್ರ ತಿಂತೆ'

ಅಂದಿ, ಹುಲಿ ಅದ್ರ ಮೈಮೇನೆ ಹಾರತೆ ಯೆಲಿಗೆ ಬಾಯಲೇ ಕಚಬಿಡ್ತು. ತಿಂಬೂಕೆ ಯೆಲಿ, 'ತಿನ್ನಲಿ' ಅಂದ್ಕಂಡಿ ಹೆರ್‌ಗೆ ಬಿತ್ತು ಮೇಣದತ್ತ. ಹುಲಿ ಕಚ್ಚದೆ ಇಡೀ ಬಾಯಿಗೆ ಮೇಣ.

ಬಾಯೇ ತೆಗುಕಾಗುದಿಲ್ಲ. ಹುಲಿ ಫಜೀತಿ ಬೇಡ. ಇಲಿ ಹುಲಿ ತೈಡ್ ಹರ್ದಿ ಹರ್ದಿ ಬಿಸಾಕ್ತು. ಹುಲಿ ಬೊಬ್ಬಿ ಹಾಕ್ತೇ ವೋಡತು. ಇಲಿ-ಹುಲಿ ತೈಡ್ ಕಚಕೊಂಡಿತ್ತು. ಅಲ್ಲಿ ಇಲ್ಲಿ ಲಾತ ಹೊಡಿತದೆ. ಹುಲಿಗ್ ಬೇಡ ಶಂಶಾರಾಗ ಮೇಣ ಬಾಯಿ ತೆಗೂಕಾಗುದಿಲ್ಲ. ಹುಲಿ ವೋಡೆ ವೋಡೆ ಹೋಯ್ತು ಅಲ್ಲೆ ಗೆದ್ದಿಲಿ ವಕ್ಲಗೌಡ ಇದ್ದ. ಗೆದ್ದಿ ಹೂಡ್ತೇ ಈವ. ತೌರಿಕಂಡ್ ಹೋಗಿ ಕಂಬ್ಳಿ ಹಾಲಿ ಮೇನೆ ಇಕ್ದ. ವಕ್ಲಗೌಡ್‌ನ ಕೂಡೆ ಹೇಳಿ, "ಕಂಬ್ಳಿ ಮುಚ್‌ಹಾಕಂಡಿ ಯೆಲಿ ಬತ್ತೀದು" ಅಂತು. ಹುಲಿ ಕಂಬ್ಳಿಲಿ ಹೊಕ್ಕಂಡೆ ಬಿಡ್ತು. ಯೆಲಿ ಯೆಲ್ಲಾ ಗರಸತ ಮನೆಗೆ ಹೋಯ್ತು.

ವಕ್ಲಗೌಡ ವಾರ್ಲ ಬಿಟ್ಟ. "ಎಲ್ಯಣ್ಣ ಮನೆಗೆ ಹೋಯ್ತು" ಅಂದ. "ತಾ ತನ್ ಮನೆಗೆ ಹೋತೆ, ಯೆಲಿಗೆ ಹೇಳು, 'ಹುಲಿ ಅಡಗಿತ್ತು' ಹೇಳಿ. ಹೇಳಬೇಡ ತಾ ಇಲ್ಲಿ ಈವೆ ಅಂದಿ." ಹೆದ್ರಕಂಡಿ ಕಂಬಳೀಲಿ ಹೇತ್ಕಂಡಿ ನಡೀತು.

ವಕ್ಲಗೌಡ ಕಂಬಳಿ ತಕಂಡಿ ನಡೆದ. ನೆಕ್ಕಂಡಿ ಹಳ್ಳಕೆ ಹೋದ (ಕಂಬಳಿ ತೊಳಕೊಂಡ ಬಂದಿರಬೇಕು.).

ಹಳ್ಳದಲ್ಲಿ ಕಲ್ಯೆಶಡಿ (ಏಡಿ) ರಾಶಿರಾಶಿ ಇತ್ತು. ಎಂಟು ಕಲ್ಯೆಶಡಿ ಹಿಡಕಂಡಿ ಕಂಬ್ಳಿಮೇನೆ ತಕಂಡಿ ಮನೆಗೆ ಬಂದ. ಕರದಾ, "ಹೆಂಗಸೇ, ಇಲ್ಲಿ ಬಾ" ಅಂದ. ಬಂತದ ಹೆಂಡ್ತಿ. "ಏನತಂದ್ಯೋ?" ಹೇಳ್ತು. "ಹೊರೆಯಂತಾ ತಂದ್ಯೋ?" ಅಂತು. "ಯೇನಾರೂ ತಕಂಡಬಾ. ಯಾರಿಗೂ ಹೇಳಬೇಡ" ಅಂತ್ಯ.

ಮಡಕೆ ತಂತು. ಕಲ್ಯೆಶಡಿ ಅರಸದ 'ಗನಾ ಆಶಿಮಾಡು' ಹೇಳ್ದ. ಇದ ಲ್ಯಾಕ ಆಶಿಮಾಡ್ತು. ಶಂಜಾಯ್ತು. ಗಂಡ ತಿರಗಾಟ್ಕ ಹೋದವ ರಾತ್ರಿಯಾಯ್ತು. 'ಬಡಶುದಿಲ್ವ?' ಕೇಳ್ದ. 'ಬಡಶತಿ' ಅಂತು. ಯೆಲೆ ಹಾಕ್ಕಂಡಿ ಬಡಶತು. ಕಲ್ಯಶಡಿ ಆಶಿಹಾಕ್ತು. ತಿಂತೇ ಈವ. ಗಪಗಪಾ ಅಂದಿ ಕಾಲ ಬೀಲು ಕಡ್ಯಿತ ಕಟಕಟಂದಿ.

"ಯಲ್ಯಣ್ಣಗೂ, ಹುಲ್ಯಣಗೂ ನ್ಯಾಯಾದ್ದು. ಹುಲಿ ಕಂಬಳಿಲ್ ಹೇತ್ಕಂಡು. ವಾಶಣಿಗೆ ಯೆಶಡಿ ಬಂತು ಹೊರೆಗಟ್ಟಿ. ಯಾರಿಗೂ ಹೇಳಬೇಡ" ಅಂದ.

ಗಂಡ-ಹೆಂಡ್ತಿ ತಿಂತೆ ಈವರು. ಹುಲಿ ಬೇಗ ಬಂದ್ಕಂಡಿ ಕೀವ್ಳಲಿ ಅವ್ರು ಮಾತಾಡ್ದ್ ಯೆಲ್ಲಾ ಕೇಳ್ಕಂಡ್ತು. 'ಇವನಿಗೆ ನಾಳೆಗೆ ನಾ ತಿಂದ್‌ಕಂತಿ' ಅಂದಿ ಮಾಡ್ಕಂಡ್ತು.

ಗಂಡ-ಹೆಂಡ್ತಿ ಮನಿಕಂಡ್ರು. ಬೆಳ್ಗಾಗೆ ಯೆದ್ಕಂಡಿ ಮೊರೆ ತೊಳ್ದ. ವಾರ್ಲ ಯೆಬ್ಕಂಡಿ ಗದ್ದೆಗೆ ಹೋದ. ವಾರ್ಲ ಕಟ್ಕಂಡಿ ಗದ್ದೆ ಹೂಡ್ತೇ ಈವ್ಯ. ಮೇಣ ರಾತ್ರಿಗೆ ತೆಗದು

ಶಾಪಾಯಾಗಿತ್ತು. ಅಗೆ ಹುಲಿ ಶಿಟ್ಟಿದ್ದ ನೋಡ್ತೆ ಅಡಗ್ತೇ ಬತ್ತೀದು– 'ಅವನ ತಿನ್ಲೇ ಬೇಕ' ಹೇಳಿ. ಅದ್ಕೆ ಯೇಕ್ದಂನೆ ಕಾಡ್ಗೆ ಅವನ ಹಿಂದೆ ಬಂತು. "ಹಾತ್, ವಕ್ಲಗೌಡ ನಿನ್ನಾಗೆ ಯೇನೆ ಹೇಳಿದೋ ನಿನಗೆ?" ಅಂತು.

"ನಿಂಗೆ ಬಿಡೋದಲ್ಲ ಯೇಗ, ನಿಂಗೆ ತಿಂದ್ಕಂಡ ಹೋತಿ" ಅಂತು. ಅವನ ತಿಂಬೂಕೆ ಹೋಯ್ತು. ಇವ ಹೇಳ್ದ, "ತಿಂಬೂದಾರೆ ತಿಂದ್ಕಂಡೋಗು ನಿನ್ನ ಹೊಟ್ಟೆಲಿ ಬಿದ್ರೂ ಸಮ, ತಾಯಿ ಹೊಟ್ಟೆಲಿ ಬಿದ್ರೂ ಸಮ" ಅಂದ. ವಾರ್ಲ ಬಿಟ್ಟ ಹಾಕ್ದ. ಅದ್ರ ಶಿಟ್ಟೇ ಹೋಗಲಿಲ್ಲ- 'ಮಾಡ್ತೇ ನಿಂಗೆ...' ಅಂದ್ಕೊಂಡ್ತ್ ಹುಲ್ಯಣ್ಣ. 'ವಂದೆ ವಂದ್ ಶಾರೆ ಬಿಡು ತಪ್ಪಾಯ್ತು' ಅಂತ್ಯ. "ಈಗ ಯೇನೂ ಬಂದ್ರೆ ಬಿಡೂದಿಲ್ಲ" ಅಂತು, "ತಿಂದಕಂಡ ಹೋತಿ" ಅಂತು ಹುಲ್ಯಣ. ಗಡಗಡ ನಡಗ್ತಾ, "ತಿಂತ್ಯಾ?" ಕೇಲ್ದ. "ಹೌದು." ಅಂತು ಹುಲ್ಯಣ್ಣ.

"ನಂಗೆ ಹೆದರಿಕೆಯಾಗಿದು. ನೀನು ಮೊಕ್ಕ ತಿಂಬೇಡ. ಹಿಂದೆ ಮುಕಳೀ ಬದಿ ತಿನ್ನು" ಅಂದ. "ಮುಕಳಿ ಬದಿ ತಿಂತೆ" ಹೇಳ್ತು ಹುಲಿ, "ತಿರುಗೂ" ಅಂತು. ಹುಲಿ ಹಿಂದೆ ಕಡಿಗಾಯ್ತು. ಕಚ್ಚೆ ಬಿಚ್‌ದ ಹಣಕದಾ ಕಡಿಗೆ, "ಹಣಿಕಂಡಿ ತಿನ್ನು" ಅಂದ. ದೊಡ್ಡ ಬಾಯಿ ತೆಗದಿ ತಿಂಬುಕ ಹೋಗಿ, ಮುಕಳಿ ಮಿಕಿ ಮಿಕಿ ಅಂತಿದಿ. ಅದ ಕಂಡ್ತು ಹುಲಿಯಣ್ಣ, "ನಿನ್ನ ಮುಕಳಿ ಮಿಕಿ ಗುಟ್ತ ಯಾಕೆ?" ಕೇಳ್ತು. "ಮಿಕಿ ಮಿಕಿ ಅಂತ್ಯಾ ನನ ಪುಕಳಿ? ಯೆಲಿಯಣ್ಣ ನನ್ನ ಪುಕಳಿಲಿ ಹೊಕ್ಕಿ, ಈಗ್ಯೇನೆ ಮಾಡಬೇಕು?" ಅಂತ್ಯ. "ವಕ್ಲಗೌಡ, ಕೈಮುಗಿತಿ ನನ್ನ ಬಿಡಬೇಕು" ಅಂತಿ. "ಬಿಡ್ತೆ ಬಿಡ್ತೆ" ಅಂತ್ಯ. ಹುಲಿಯಣ್ಣ ಹೆದರಿಕೊಂಡು ವೋಡೆ ಪಾರು ಕಡಿಕೆ ಹೋಯ್ತು. ಅವ ತನ್ ಮನಿಗೆ ಹೋದ.

- **ಕೆಲವು ಪದಗಳ ವಿವರಣೆ**

| | |
|---|---|
| ನೆರೆ = ಒಟ್ಟು | ಲಾತ = ಹೊಡೆತ |
| ಗದ್ದಿಲಿ = ಗದ್ದೆಯಲ್ಲಿ | ಗರಸತ = ಹುಡುಕುತ್ತ |
| ಅಂತ್ಯ= ಹೇಳುತ್ತಾನೆ | ಅರಸದ = ಹಾಕಿದ |
| ಕೀವ್ಳಲಿ = ಮನೆಯ ಮಾಡು | ನ್ಯಾಯಾದ್ದು = ಹೊಡೆದಾಟ , ತಕರಾರು |
| ವಾಶಣೆ = ವಾಸನೆ | ಯೇಕ್ದಂ = ಕೂಂಡಿಂದ ಕೂಡ್ಲೆ |
| ವಡ್ಡೆಗೆ = ಗುಡ್ಡೆಗೆ | |

▪ ಹೇಳಿದವರು: **ಬುದ್ದು ಶೇ ಶುಗೌಡ,** ಬಿಣಗಾ ತಾಲೂಕು, ಕಾರವಾರ.

# ಹೊಸಬಂಟ

ಚಂದ್ರಾವತಿ ಅರಸುಗೆ ಯಿಯ್ಡು ಜನ ಹುಡುಗರು. 'ಗಾಳಿ ಹವಾಯಿಗೆ ಹೋಪ' ಅಂದ್ರು. ದೊಡ್ಡ ವಡ್ಡೆಗೆ ಹೋದರು.

ತಮ್ಮ, "ಅಣ್ಣಯ್ಯ, ನಾವು ಹೀಗಿರುವದೇನು ಯೋಗ್ಯಲ್ಲ. ಒಂದೂರಿಗೆ ಹೋಗಿ ನೆಂಟಸ್ತನ ಮಾಡಬೇಕು" ಅಂದ. ಅರಸ ತಾವಕೆ ಹೋದರು. ತಾಯಿಗೆ ಒಂದೇ ಹುಡುಗಿ, ಅಣ್ಣ-ತಮ್ಮ ಹೋಗಿ ದೊಡ್ಡೋನ ಮಕ್ಕಳು ಎಂದು ಬಹಳ ಸಮಾನ ಮಾಡಿದರು. ತೆನೆಮೇಲೆ ಕೂತರು. "ಏಕೆ ಬಂದವ್ರು?" ಕೇಳಿದರು. "ಹುಡುಗಿ ಈತು ಕೊಡಲಿಕ್ಕೆ ಅಡ್ಡಿಲ್ಲ. ಬಾಗಿಲ ಮುಂದೆ ದುರವಿನ ಕಣಜ ತುಂಬಿದರೆ ಕೊಡಲಿಕ್ಕೆ ಅಡ್ಡಿಲ್ಲ."

"ನಮ್ಮ ದುರುವಿನ ಕಣಜ ಬರಮಾಡಿಕೊಂಡು ಬಂದು ಈ ಕಣಜ ತುಂಬಿಸ" ಅಂದರು. 'ಹೂ' ಅಂದವರು ಏನು ಮಾಡಿದರು? "ನಮ್ಮ ದುರುವಿನ ಕಣಜ ಎತ್ತು, ಕತ್ತೆ ಮೇಲೆ ಮಂದಿ ಮಾರ್ಬಲ ಮೇನೆ ಕಲಸೆಂ"ದು ಅಪ್ಪಗೆ ಬರ್ದು ಕಳಿಸಿದರು. ಆ ದುರವಿನ ಕಣಜದ ಮುಕಳಿಗೂ ಆಗಿಲ್ಲ. ಬರದರು, 'ಸೋಲು ಹೋತ್ತು ಬಂತು. ಆದ್ರೂ ಅಡ್ಡಿಲ್ಲ.' ಭೂಮಿ, ಮನೆ, ಅರಸತನ ಪೂರಾ ಮಾರಾಟ ಮಾಡಿ ಕಳಿಸಿದರು. ಆಗಲೂ ತುಂಬಲಿಲ್ಲ ದುರವಿನ ಕಣಜ.

ಏನು ಮಾಡಬೇಕು? 'ಒಕ್ಕಲು ಮಕ್ಕಳ ಮನೆ ಈತು. ಸೋರಿಗಿ ಮಾಡಿ ಅವ ಕಂಚು, ತಾಮ್ರ ಮಾರಾಟ ಮಾಡಿ ಹಣ ಕಳಿಸಿಬೇಕು' ಹೇಳಿ ಬರೆದರು.

ಬಡವರ ಗಂಟಿ ಕರ್ಗೂಳು, ಶಿನ್ನಶಿಗ್ರು ಅಟ್ಟೂ ಮಾರಾಟ ಮಾಡಿ ತಂದು ತುಂಬಿದರು. ತುಂಬಿತು. ಮಗಳನ್ನು ಎಡಕ್ಕೆ ಕೂಡಿಸಿ ಅಳಿಯ (ಹಿರಿಯ) ಬಲಕ್ಕೆ ಕೂರಿಸಿ ನಗ್ನ ಮಾಡಿದರು. ನಾಕುದಿನ ಉಳಿದರು. "ತಮ್ಮಾ... ನೀವು ಬಂದು ಬಾಳ ದಿವಸಾಯ್ತು, ಊರಿಗೆ ಹೋಗಲಿಕ್ಕೆ ಅಡ್ಡಿಯಿಲ್ಲ" ಅಂದರು.

ಮದ್ಯಾನ ಮೇನೆ ಊಟ-ಉಪಚಾರ ಮಾಡ್ಕಂಡಿ, ಅಣ್ಣ-ತಮ್ಮ ಎರಡೂ ಜನ ಹೊರಟು ಬಂದು ನೀಲಾನದಿ ಅರಸು ಮನೆ ಮುಂಗಡೆ ಅಸ್ವತ್ತ ಕಟ್ಟೆ ಮೇನೆ ಕೂತರು. "ಹರಹರ! ಏನ ತಿನ್ನಬೇಕಾಯ್ತು? ಎಲ್ಲಾ ಮಾರಾಟಾಯ್ತು."

ಅಣ್ಣನ ಹೆಂಡ್ತಿ, "ಮೈದ..." ಅಂತು. "ಓ.." ಯೆಂದ. ಅವಳು ಅರ್ಧ ದುಡ್ಡ ಶಾಲೆ ಸೆರಗಿಗೆ ಕಟ್ಟಿತ್ತು. ಅದರಲ್ಲಿ, "ವಂದ ದಮಡಿ ಸೂಜಿ, ವಂದ ದಮಡಿ ದಾರ ತಕ್ಕ ಬಾ" ಅಂತು. ತಂದ. ಸುದ್ದಿಲ್ದೆ, "ಪದರ ಶರಗ ಹರಿತೇನೆ" ಅಂದಿ ಶಾಲೆ ಶೆರ್ಗ ಹರ್ದು ರವ್ಕಿಕಣ ಮಾಡ್ತು. "ಮೈದ, ರವ್ಕಿಕಣ ತಕ್ಕಂಡಿ ಪೇಟೆಗೋಗಿ ಮಾರ್ಕಂಡ ಅಕ್ಕಿ, ಬೇಳೆ... ಎಲ್ಲ ತಕ್ಕಂಬಾ" ಅಂತು. "ದರ?" ಎಂದ. "ವಕಾರಿಲಿ ಬಿಚ್ಚು. ಅದೇ ದರ ಹೇಳ್ತದೆ" ಅಂತು.

"ಅಲ್ಲಿ ಕಿಮ್ಮತ್ತೇನು?" ಕೇಳಿದರು. "ನೂರು ರೂಪಾಯಿ." "ಐವತ್ತೈದು ಕೊಡತೆ" ಅಂದರು. ಕಬೂಲಾಗಿಲ್ಲ. ಮತ್ತೊಂದು ವಕಾರಿಲಿ, "ನೂರೈವತ್ತ ರೂಪಾಯಿ ಕೊಡತೇನೆ ಕೊಡು" ಅಂದರು. ಕೊಟ್ಟ. ಪ್ಯಾಟೆಂದ ಬೇಳೆ, ಬೆಲ್ಲ, ಹುಟ್ಟು ತಟ್ಟೆ, ಸರ್ವ ಜಿನಸು ತಂದು ಅತ್ಗೆಗೆ ಕೊಟ್ಟ. ಅತ್ಗೆ ಕೆಳಗೆ ಕಲ್ಲ ಹೂಡಿ ಅಡಿಗೆ ತಯಾರ ಮಾಡಿದಳು. ಕೆರೆನೀರು ತಂದು ಅಡಿಗಿ ಮಾಡಿದಳು. ಗಂಡ, ಮೈದಗೆ ಬಡಿಸಿ ತಾನೊಂದು ಬದಿ ಊಟ ಮಾಡಿತು. ಪಾತ್ರ ತಿಕ್ಕಲು ಅದೇ ಕೆರೆಗೆ ಹೋಯ್ತು. ನೀಲಾ ನದಿ ಅರಸರ ಮನೇಲಿ ಎರಡು ಒಕ್ಕಲಿಗರ ಹೆಂಗಸರು, "ಒಂಟಿ ಹೆಂಗಸು ಪಾತ್ರ ತಿಕ್ಕಲು ಬಂದಿದ್ದಲು... ನಿಮಗೆ ಸಲತಕ್ಕ ಹೆಣ್ಣು" ಎಂದರು. ಅರಸು, "ಮಾತಾಡಿ ಹೋಗು ಎನ್ನಿ" ಎಂದ. "ಅಮ್ಮಾ... ಅರಸು ಹತ್ರ ಮಾತಾಡಿಕೊಂಡು ಬರಬೇಕಂತೆ" ಅಂದರು.

ಗಂಡ-ಮೈದ, "ಹೋಗಿ ಬಾ" ಎಂದರು. "ಹೂಂ" ಎಂದು ಪಾರ ದಾಟು ಹೊತ್ತಿಗೆ, "ದಬ್ಬ ಹಾಕಿ" ಎಂದ ಅರಸು ಸೇವಕರಿಗೆ. ಅರಸು ಏಳು ಮೆಟ್ಟಿಲ ಸದರಿಮೇಲೆ (ಉಪ್ಪರಿಗೆ) ಕೂತಿದ್ದ, ಅವಳನ್ನು ನೆಕ್ಕಂಡು ಹೋಗಿ ಸದರಿಗೆ ಮೇಲೆ ಕೂರಿಸಿದ. ಚಹಾ, ಆಸ್ರ ಎಲ್ಲ ತಂದ. ಆಸ್ರ ಕುಡಿದು, ಕವಳ ಮೆಂದಿತು. 'ಇವ ತನ್ನ ಬಿಡವನಲ್ಲ.' ಅಂತು ಅಕಲ ಮಾಡಿತು. "ಅರಸರೆ, ಕೂಡಲಿಕ್ಕಡ್ಡಿಲ್ಲಾಗಿತ್ತು. ಏಳಹಗಲು- ಏಳರಾತ್ರಿ ನಾನು ಧರ್ಮ ಇಡಬೇಕು. ಇಟ್ಟ ಬಳಿಕ ಕೂಡಲಿಕ್ಕಡ್ಡಿಲ್ಲ" ಅಂತು. "ಹೆಣ್‌ಕೂಲ ಏನು? ಧರ್ಮ ಇಡೋದು. ನನ್ನ ದುರವಿನ ಕಣಜ ಹಾಲ ಬಿದ್ದಿಲ್ಲ." ಅಂದಿ ಕಣಜ ತಂದ ಕೊಟ್ಟ. "ಏಳ ಹಗಲು, ಏಳ ರಾತ್ರಿ ಧರ್ಮ ಮಾಡ್ತದೆ, ಕೇಳವವರು ಬರಬೇಕು" ಡಂಗರು ಸಾರಿದ. ವಂದು ಆಳಿಗೆ ಒಂದೊಂದು ಬೊಗಸೆಯಷ್ಟು ಕೊಟ್ಟಳು. ವಂದು ರಾತ್ರಿಯೂ ಸಾಲಲಿಲ್ಲ ಕಣಜ. "ಅವಳು ಸೋಲಬೇಕು" ಅಂದಿ ಅರಸ ತನ್ನ ಭೂಮಿ, ಮನೆ ಮಾರಾಟ ಮಾಡಿದ. ಸಾಲಲಿಲ್ಲ. ಮೂರು ರಾತ್ರಿಗೆ "ಬನಿ" ಅಂದಳು.

ರಾಜ ಮದುವೆಯಾದ ಹೆಂಡ್ತಿ ದಾಗೀನಿ ಮಾರಾಟ ಮಾಡಿ ಹಣ ತಂದು ಸೊರಗಿದ. ಏಳು ದಿನ ಆಗಿತ್ತು. "ಮೈನೀರಿಗೆ ಹೋಗಿ ಬರುವೆ. ಬಾಕ್ಲ ಪಾರದವರಿಗೆ ಬಾಕ್ಲ ಬಿಡಿಸಿ" ಅಂದಳು. ಅದು ಹೈಟು ಬಂದದ್ದು. ನೀಲಾ ನದಿ ಅರಸು ಕೀಬ್ಳಲ್ಲಿ ಕುದರೆ ಜಾಡಕಾರನಿದ್ದ. "ಕುದುರೆ ಜಾಡಕಾರಣ್ಣ, ನಾನು ಹೆಂಡ್ತಿ, ನೀನು ಗಂಡ ದೂರದೇಶ ಹೋಗಣ, ನನಗೊಂದು ಜೈಡು (ಕುದುರೆ) ಚಲೋದು, ನಿನಗೊಂದು ಜೈಡು ತಕ್ಕ" ಅಂತು. ಅವ ವಂದ ಹತ್ಕಂಡ, ಇದೊಂದು ಹತ್ಕಂಡ್ತು. ಸಂತೆಗುಳಿ ಹತ್ರ ಹೋಗುದಟ್ಟಕ್ಕೆ, "ಕುದುರೆ ಜಾಡಕಾರಣ್ಣ, ನೀಲಾ ನದಿ ಅರಸರ ಮನೆ ಮುಂಗಡೆ ಎರಡು ಜನ ಗಂಡಸರು ಕೂತಿರು. ಅವರ ಕೂಡ ನಾ ಬಂದು ಮಾತಾಡಿಕೊಂಡು ಹೋಗಿ ಹೇಳಿದ್ದೆ ಹೇಳು" ಅಂದಳು. ಬಂದವ, "ಒಡತಿ ಅಲ್ಲಿಲ್ಲ" ಎಂದು ಹಿಂತಿರುಗಿ ನಡೆದ. ಕಟ್ಟೆಗೆ ಬರಲಿಲ್ಲ. "ತಮ್ಮ ನಾಲ್ಕಾಣೆ ಅವಲ್ಲಕ್ಕಿ, ನಾಲ್ಕಾಣಿ ಕಾಯ್ಬುಗ ತಕಂಬಾ" ಎಂದಳು. ಹೆಂಡ ಕುಡ್ಕಂಡಿ ಅದರ ಮದಕರಗಿಸುವ ಹೇಳಿ ಮಾಡಿ.

ವಂದ ಆಣಿ ಕಾಯಿಬಗ ತಂದ. ಮುಕ್ಕರಿಶಿ ಬಿದ್ದ. ಕುದ್ರೆ ಹಾರಿಸಿಕ ಮುಂದೆ ಬಂದು ಬಿಟ್ತು. ಅವ ಯೆದ್ದು ಕುಳ್ಳುವಟ್ಟಕ್ಕೆ ಹೆಣ್ಣು ತನ್ನ ಕುದ್ರೆ ಮುಂದ ಹಾರಿಸಿಕ ಬಂತು. ಕುದರಿ ಜಾಡಕಾರಣ್ಣ ಕಾಶಿಗೆ ಹೋದ.

ಗಂಡ-ಮೈದ ಮನೆಬದಕು ಶಿನ್ನಶಿಗರು ಅಷ್ಟ ಕರ್ಶ ಮಾಡಿ, "ಈ ಹೆಣ್ಣು ಎಲ್ಲಿ ಹೋಯ್ತೊ ಏನೋ" ಅಂತ ಕಾಶಿಗೆ ಬಂದರು.

ಅವಳು ಕುದುರೆ ಹಾರಿಸಿ ಹೋಗಬೇಕಾದ್ರೆ ಎರಡು ಜನ ಶಿಪಾಯರು, "ನನ್ನ ಹೆಂಡ್ತಿ-ತನ್ನ ಹೆಂಡ್ತಿ" ಅಂದರು. "ನಾ ಬಾಣ ಬಿಡ್ತೆ, ಆ ಬಾಣ ಹೆಕ್ಕ ಬಂದನಿಗೆ ನಾ ನಗ್ನಾಗ್ತೆ" ಅಂತು. "ಕುದ್ರೆ ಹಿಂಡಿಗೆ ಬಿಗಿರಿ. ನಿಮ್ಮಂಗಿ ಶಡ್ಡಿ, ಕೋವಿ, ಕತ್ತಿ ಇಡಿ" ಅಂತು. ಬಾಣ ಬಿಡ್ತು. ವಂದು ಮೈಲಾಶೆ ಹೋಗಿ ಬಿತ್ತು. ಓಡಿ ಬಾಣ ಹಿಡ್ಕ ಬರುವಟಗೆ ಕುದ್ರೆ ಮುಂಗಡ ಕಡಿತು. ಹೆಣ್ಣೇಸ ಬಿಟ್ಟು, ಗಂಡೇಸ ತಾಳ್ತು. ಕತ್ತಿ, ಕೋಮಿ, ಗಡ್ಡ ಹಾಕಂಡಿ ಕುದ್ರೆ 'ಹೋ' ಕುಪ್ರಿ ಗುಡ್ಡ ಮುಂದೆ ಬಂತು. ಅಲ್ಲೊಬ್ಬ ಗಂಟಿ ಕಾಯ್ವೋನು ಗಿಳಿ ತಕ್ಕಂಡ ಬಂದ (ರಾಮ ಹೆಸ್ರು). "ತಮ್ಮಾ ಒಂದು ಗಿಳಿ ಕೊಡತೆಯಾ?" ಕೇಳಿತು. "ಇಲ್ಲಾ ಅಮ್ಮ, ನನಗೆ ಹೊಟ್ಟೆ ಆಪ್ತಿ ಆಗೋದೇ ಇದ್ರಲ್ಲಿ. ಏನು ಹತ್ತಿಪ್ಪತ್ತು ರೂಪಾಯಿ" ಅಂದ. ಕೊಟ್ಟಳು. ಗಿಳಿ ಹಿಡ್ಕಂಡು ಇಪ್ಪತ್ತು ರೂಪಾಯಿ ಕೊಟ್ತು, ಮುಂದೆ ಹೋಯ್ತು.

ಗಂಡ-ಮೈದ ಕಾಶಿಗೆ ಹೋಗಿದ್ರು. ಶಿಪಾಯರೂ ಯರಡು ಜನ ಕಾಶಿಗೆ ಹೋದ್ರು. "ಸುಕರವಾನರಾಗಿ 'ನನ್ನ ಹೆಂಡ್ತಿ... ನನ್ನ ಹೆಂಡ್ತಿ' ಅಂದಿ ಯಾಕಂದ್ರೊ." ಕಾಶಿಗಾರು ಹೋಪ.

ಅಜ್ಜಿ ಮುದ್ಕಿ ಮನೇಲಿ ಪಿಣಿಪಿಣಿ ದೀಪ ಹೊಳಿತಿತ್ತು. "ಯಾರವ್ವಾ?" "ನಾನು ಅಜ್ಜವ್ವ." ಗಂಡೇಸ ತಾಳಿದ್ದಳು. "ಅಯ್ಯೋ ಮೊಮ್ಮಗನೇ, ಎಟ್ಟ ಜನ ದಾರಿ ಪಯಣದೊರು ಬಿದ್ದು. ಬೆಳಗ ಮಾಡಿಕೊಂಡು ಹೊಗ್ತೀರು, ಬಾರೊ."

"ಅಜ್ಜವ್ವ, ಇಲ್ಲೆಲ್ಲಾರೂ ಸಾಕ್ರಿಬೀಕ್ರಿ ಸಿಕ್ಕೂದೊ?" ಕೇಳಿದ. "ಅಯ್ಯೋ ಮೊಮ್ಮಗನೇ, ಇದೇ ರಾಜರಲ್ಲಿ ಬೇಕಾದಟ್ಟು ಶಾಕರವನರು ಅವ್ರೆ. ಬೇಕಷ್ಟು ಕೆಲಸ" ಅಂತು.

ಅರಸರ ಮನೆಗೆ ಹೋದ. ಅರಸು, ಪರದಾನಿ ಕಿಡಿಕಿ ಒಳಗೆ ಮೇಜಿನ ಮೇಲೆ ಕವಳ ಮೇಯತಿದ್ರು. "ಸಲಾಂ" ಎಂದ ಹೋದೋನು. "ಏನಾ?", "ಸಾಕರಿಬೀಕರಿ ಸಿಕ್ಕದೋ?"

"ಬೇಕಷ್ಟು ನೌಕರಿ-ಸಂಬಳ?" ಕೇಳಿದರು. "ಎಡಕ್ಕೆ ಸಾವಿರ, ಬಲಕ್ಕೆ ಸಾವಿರ, ತೊಟ್ಟ ಪಟ್ಟಕ್ಕೆ ಸಾವಿರ, ತಿಂಗಳಿಗೆ ಮೂರು ಸಾವಿರ..." ಅಂದಳು.

'ಹೂಂ' ಅಂದರು. ಅಜ್ಜಿ ಮುದ್ಕಿ ಮನೆಗೆ ಬಂತು. ಊಟ-ಉಪಚಾರ ಮಾಡ್ತು.

ಗಿಳಿ ಬಿಟ್ವಾಕ್ತು. ಅರಸು, ಪರದಾನಿ ಕುಳ್ಳು ಕಿಡಕಿ ಗಂಡಿಲಿ ಗಿಳಿ ಕೂತ್ತು. ಪರದಾನಿ, "ಅರಸು, ಅದು ಹೆಣ್ಣಾಗೆ ಕಾಣ್ತಿದಪ್ಪ" ಅಂದ. ಅರಸು, "ಹೆಣ್ಣು, ಗಂಡು ನೋಡೂ ಬಗೆ ಏನ ಮಾಡಬೇಕು?" ಕೇಳಿದ. "ಹನ್ನೆರಡು ಅಂಗಳ ಬಯಲಲ್ಲಿ ಕಡಿಸಬೇಕು. ನೀನು ಅದೂ ಏಳೇಲಿ ಹಾರಿಸಿಕೊಂಡು ಹೋದರೆ ಗಂಡು; ಅಲ್ಲಾದರೆ ಹೆಣ್ಣು." ಅಂದ.

'ಸಲಾಂ' ಅಂತು. "ಎಲಾ ಹೊಸಬಂಟ... ಶಿಪಾಯಿ... ಗೆಣೆಯಾ" ಅಂದ. "ಇವತ್ತೆ ದೊಡ್ಡ ಬಯಲಲ್ಲಿ ನಾಟಕಕ್ಕೆ ಹೋಗಬೇಕು." ಅಂದ. 'ಹೂಂ'. ಅಂದ. ತಾನ ಹತ್ತು ಶೇಜ ಹತ್ಕಂಡಿ ಹೂಗಿನ ಎಲವಸ್ತ್ರ ಹಿಡ್ಕಂಡಿ ಹೋದ. ಶೇಜಿನ ಕೊಳ್ಳಿಗೂ, ತನ್ನ ಕೊಳ್ಳಿಗೂ ಹೂಗಿನ ಯಲವಸ್ತ್ರ ಬಿಗಿತು. ಇಬ್ಬರೂ ಶೇಜ ಹತ್ತಿ ಕೂರಾಡ ಹೋದರು. ಅರಸ ಯೇಳ ಅಗಲ ಹಾರಿಸಿಕಂಡು ಅಲ್ಲಿ ನಿಲ್ಲಿಸಿದ. ಇದು ಯೇಳ ಅಗಲ ಹಾರಿಸಿಕಂಡ ಹೋಗಿ ಮತ್ತೆ ಹಿಂದ ಕಾಲಲ್ಲಿ ಹಾರಿಸಿಕೊಂಡು ಬಂದು ನಿಲ್ಲಿಸಿತು. "ಗಂಡೇ ಸೈ" ಅಂದರು.

ಇದು ಅಜ್ಜಿ ಮುದ್ಕಿ ಮನೆಗೆ ಹೋಯ್ತು. ಅಲ್ಲಿ ಗಿಳಿ ಬಿಟ್ಟಹಾಕಿತು. "ಮತ್ತೇನು ಹೇಳತಿರು, ಕೇಳ್ಕಂಬಾ" ಹೇಳಿ ಬಿಟ್ಟಹಾಕಿತು.

ಪರದಾನಿ, "ಅರಸೂ, ಅದು ಹೆಣ್ಣಾಗೇ ಕಾಣಲೇದು" ಅಂದ. "ಹೆಣ್ಣು, ಗಂಡು ನೋಡೂ ಬಗೆ ಏನೋ?" ಕೇಳಿದ. "ದಂಡಿಗೆ ಕಳಿಸಬೇಕು. ಸಂಗಡ ಎರಡು ಹಳೆ ಶಿಪಾಯಿ ಕಳಿಸುವಾ, ದಾತ್ರೆ ಮನಿಕಂಡಾಗ ಶಿಪಾಯರ ಹತ್ರ ನೋಡು ಹೇಳಬೇಕು."

ಗಿಳಿ ಹೇಳಿತು. 'ಹೀಗೆ ಹೇಳಾಡಿರು' ಅಂತು. "ಆಗ್ಲಿ" ಅಂತು. ಬೆಳಗಾಗ ಅರಸರ ಮನೆಗೆ ಹೋಗಿ, 'ಸೊಕ್ಷ' ಅಂತು. "ಹೊಸ ಸಿಪಾಯಿ ಗೆಣೆಯ... ಇವತ್ತು ದಂಡು ಕಾಯಕೆ ಹೋಗಬೇಕು" ಅಂದ. "ಯೆಯ್ಡು ಹಳೆ ಶಿಪಾಯಿ ಕಳಿಸಿಕೊಡತೆ" ಅಂದ. "ಕೊಡುದಾಯ್ತು ನನಗೆ ಒಬ್ಬನಿಗೇ ಕೊಡಬೇಕು. ಅವರೂ, ನಾನೂ ಹೋದರೆ ನಾನು ಗೆದ್ದೆ ಅಂಬೂದಿಲ್ಲ, ಅವರೂ ಗೆದ್ದರು ಅಂಬೂದಿಲ್ಲ" ಅಂತು. "ಹಾಗದರೆ, ನೀನೇ ಹೋಗ್ ಬಾ" ಅಂದಿ ಈಲೆ (ವೀಳ್ಯ) ಕೊಟ್ಟರು. ಬೆಳ್ಗ ಮುನ್ನ ಕತ್ತಿ, ಕೋಮಿ, ಬಾನ-ಬಿಲ್ಲು ಯೆಲ್ಲಾ ಹಿಡಿದು, "ಅರಸರೆ, ನಾನು ದಂಡಿಗೆ ಹೋಗಿ ಬರತೇನೆ" ಅಂದಳು. ಸೇಜಿನ ಕೊಲ್ಲಿಗೂ, ತನ್ನ ಕೊಲ್ಲಿಗೂ ಯಲವಸ್ತ್ರ ಬಿಗಿದಳು. ಬಿಕ್ಕಂಡು, "ಹತ್ತು ಶೇಜಿ ಹಾರುವಂತ ಹಾರಬೇಕು, ಕೈಗೆ ಭುಜ ಬೆಗರಬೇಕು, ದಂಡಾಗಿರುವ ರೊಂಡ ಬೀಳಬೇಕು" ಅಂತ ಹಾರಿತೂ, ಭುಜ ಬೆಗರಿತು, ದಂಡಾಗಿರುವಂಥ ರೊಂಡಬಿತ್ತು, ಅರಸರ ಮನೆ ಮುಂಗಾತ ಬಂದು ಇಳಿದು, 'ಗಂಡೇ ಸೈ' ಅಂದರು ಅರಸು, ಪರದಾನಿ.

ಅಜ್ಜಿ ಮುದ್ಕಿ ಮನೆಗೆ ನಡೆದು ಗಿಳಿ ಬಿಟ್ಹಾಕಿತು. ಅರಸರು ಪರದಾನಿ ಮನೆ ಮುಂದೆ ಕೂತ್ತು, "ಮತ್ತು ಹೆಣ್ಣಾಗೇ ಕಾಣ್ತಿದು" ಅಂದ ಪರದಾನಿ. 'ದಂಡ ಗೆದ್ಕಂಡಿ, ರಕ್ತ ಬಡಕಂಡ ಬಂದ್ಯ.' ಒಕ್ಕಲ ಹೆಂಗಸರ ಕೂಡೆ, "ಒಂದು ಹಾಡ ಎಣ್ಣೆ ತುಂಬಿ ಅವನ ಮೀಸ ಬರಬೇಕು." ಗಿಳಿ, "ನಿಮ್ಮ ಮೀಶೂಕೆ" ಬತ್ತಿರು, "ಗಂಡು-ಹೆಣ್ಣು ನೋಡು ಬಗೆಗೆ ಬತ್ತೀರು" ಅಂತು. ಹೆಂಗಸರು ಒಂದು ಹಾಡ ಎಣ್ಣೆ ಹೊತ್ಕ ಹೋತಿರು. "ಎಲ್ಕೆ ಹೋತಿರಿ" ಕೇಳ್ದ. "ನಿಮ್ಮ ಮೀಸಿಬಾ ಅಂದೀರು ಅರಸು- ಪ್ರಧಾನಿ." "ದಣಪೆ ದಾಟಿರೆ ಸೊಂಟ ಮುರಿತೆ" ಅಂತು. ಹಿಂದೆ ಬಂದ್ಬುಟ್ರು. "ಏನಾಯ್ತು?" "ದಣಪೆ ದಾಟಿರೆ ಟೊಂಕ ಮುರಿತೆ" ಅಂದ. "ನಮಗೆ ಹೆದರಿಕೆಯಾಗೋಯ್ತು." ಗಿಳಿ ಬಿಟ್ಟ, ತುಂಕೆ ಮೇಲೆ ಕೂಡ್ತು. "ಹೆಣ್ಣು-ಗಂಡು ನೋಡು ಬಗೆ

ಏನ ಮಾಡಬೇಕು? ಹೆಣ್ಣಾ ನೋಡು ಬಗೆಗೆ ನೀನು ಹೋಗುವಂತ ಪದ್ಮಾವತಿ ಸೂಳೆ ಇದ್ದಲ್ಲಿ ಅವನ ಕಳಸಬೇಕು. ಸೂಳೆ ಕೂಡ– ಗಂಡಾ? ಹೆಣ್ಣಾ? ನೋಡು" ಹೇಳಬೇಕು.

ಗಿಳಿ, "ನಿನ್ನ ಕಲಸತೀರು, ನಿನಗೆ ಅದಕ್ಕೆ ತಾಲ ಹೂಡುಕೆ ಲ್ಯಾಕಾಕ್ತಿದು" ಅಂತಾ. ಬೆಳಗಾಗ "ಸಲಾಂ" ಅಂದ. "ಎಲಾ ಹೊಸಬಂಟ ಗೆಣೆಯ, ನಾನು ಹೋಗುವಂಥ ಪದ್ಮಾವತಿ ಸೂಳೆ ಹತ್ರ ನೀನು ಇವತ್ತು ದಾತ್ರೆ ಹೋಗಬೇಕು." "ನಿಮ್ಮಂಥವರು ಹೋಗುವಲ್ಲಿ ನಾನು ಹೊಪೆಕೆ?" ಬಂದವ ಶಾಕಷ್ಟು ಹಣಗೋಲ ಕೈಯಲ್ಲಿ ಹಿಡಕಂಡ ಪೇಟೆ ಬಜಾರಕೆ ಹೋದ. ಒಬ್ಬ ಕಂಬಳಿ ಜಾಡಕಾರಣ್ಣ ಸಿಕ್ಕಿದ. "ಜಾಡಕಾರಣ್ಣ, ಪದ್ಮಾವತಿ ಸೂಳಿದ್ದಲ್ಲಿ ಇವತ್ತು ರಾತ್ರಿ ನೀ ಹೋಗಬೇಕು. ಐವತ್ತು ರೂಪಾಯಿ ಕೊಡ್ತೆ." "ಆಗ"ಯ "ಹೋಗಲೇ ಬೇಕು" "ಹಾಂ". ಅಜ್ಜಿ ಮನೆಗೆ ಬಂತು. ಊಟ-ಉಪಚಾರ ಮಾಡಕಂಡಿ ಕಂಬಳಿ ಜಾಡಕಾರಣ್ಣನ ಕರ್ಕಂಡು ಹೋಯ್ತು. ಅಂಗಳದಲ್ಲಿ ಜಾಡಕಾರಣ್ಣನ ಕೂರಿಸಿತು. "ನಾನು ಹೋಗಿ ಹಾಸ್ಗಿ ಗೀಸ್ಗೀ ಹಾಸಿ, ಆಸ್ರ ಕುಡ್ಕಂಡಿ ಹಿಂದಿಂದೆ ಬತ್ತೆ. ನೀನು ಮೆತ್ತು ಹತ್ತು ವನಕ ಮಾತಾಡಬೇಡ. ಲಾಟನ್ನು ಮೆತ್ತಿನ ಬಾಗಲಲ್ಲ ಇಡತೆ ಹತ್ತೊಗೋಕೆ" ಅಂದ. ಜಾಡಕಾರಣ್ಣ ಮೆತ್ತತ್ತಿ ಹೋದ. "ಸೂಳೆ, ನಿನ್ನ ಶಾಕ್ರಟ್ಟೊ ಆಯ್ತೋ" ಕೇಳಿದ. "ಆಯ್ತು". "ಮೇಲ್ಲೂಕೆ ಹಣ್ಣು, ಕುಡುಕೆ ಹಾಲು ತಂದಿಕ್ಕು" ಹಣ್ಣ ಮೆಂದ, ಹಾಲ ಕುಡಿದ, ಕವಲಾ-ಗಿವಲಾ ಮೆಂದ್ಕಂಡಿ, "ಸೂಳೆ, ನಿಂಗೆ ತಡವಿತ್ತೆ. ಆಯ್ತೋ" ಕೇಳಿದ, "ನಾನ ಸ್ವಲ್ಪ ಮೈನೀರಿಗೆ ಹೋಗ್ಬರ್ತೇನೆ ನೀ ಬೀಲುದೇಲ್ಲಿ?" ಕೇಳಿದ. "ಅದೇ ಮೇಜಿನ ಮೇಲೆ ಬೀಳತೆ" ಅಂತು. "ನೀ ಸೀರೆ-ಗೀರೆ ಬಿಚ್ಕಂಡಿ ರೈಟ್ ಆಕ್ಕಂಡಿ ಮಲಕೋ" ಅಂದ ಕಂಬಲಿ ಜಾಡಕಾರಣ್ಣ. ಹತ್ರಕೂತ, ದೀಪ ನಂದಿಸು ಹೊತ್ತಾಯ್ತು. ಜಾಡಕಾರಣ್ಣ ದೀಪ ನಂದಿಸ್‌ಬಿಟ್ಟ. ಹೆಂಗಸರು ಮೊರೆ ನೋಡದವ ಜಾಡಕಾರಣ್ಣ ಇವ. ಏನ ಹೇಳಿಯ, "ಬೆಳಗವರೆಗೆ ನೆಲಕೆ ಬೀಲಳ್ ಕೂಡ ಇಂದ್ರಿಯ ಬೀಲವಟ್ಟವರೆಗೂ ಹೊಟ್ಟೆ ಮೇಲೆ ಹೋರಾಡಬೇಕು" ಅಂದ. ಮಂಚದ ಕಾಲಷ್ಟೊ ಮುರಿದು ಹೊಡ ಬಂದಿದೆ.

ಬೆಳ್ಗುವರೆಗೆ ನಿದ್ದಿಲ್ಲ. 'ಕೋಕೋಕೋಕೋ' ಅಂತು. ಜಾಡಕಾರಣ್ಣ ಮೆತ್ತಿಲಿದ ಐವತ್ ರೂಪಾಯಿ ಕೊಟ್ಟ ಹೋದ. ಇದು ಹಗೂರಕ್ಕೆ ಮೆತ್ತು ಹತ್ತಿ ಕೂತ್ಕಬಿಟ್ಟ. ಇವಗೆ ಮೀಸಿಲ್ಲ. ಮೀಸೆ ತಿಪ್ರತ ಕೂತ್ಯ. ಅರಸು, "ಪರದಾನಿ, ಸೂಳೆ ಕೇಳ್ಕಬಾ" ಅಂದ್ರು. ಬತ್ತಿದ್ದ ಹೆಂಗಸರಿಗೆ, "ಸೂಳೆ, ಹೆಣ್ಣೆ ಗಂಡೆ?" ಕೇಳಿದರು. "ನಿಮ್ಮ ಅರಸರ ಉಶಾಪತಿಗೆ ಬೆಂಕಿ ಬೀಳಲಿ. ಮಂಚದ ಕಾಲೆಲ್ಲಾ ಮುರಿದು, ನನ್ನ ಮೈಯೆಲ್ಲಾ ನೋವೆಬ್ಸಿಬಿಟ್ಟ. ಗಂಡೇಯ. ನನಗೆ ಮೂರು ತಿಂಗಳು ಬೇಕು. ಮೈಕೈನೋವು ಹೋಗಿ ನಾ ಹುದವಾಗೋಕೆ" ಅಂತು. ಅರಸುನೇ ಬಂದ, "ಸೂಳೆ, ಗಂಡೋ ಹೆಣ್ಣೊ?" ಕೇಳಿದ. "ನಿಮ್ಮ ಮೊಕಕ್ಕೆ ಬಿಸನೀರು ತೋಕಬೇಕು. ಮೂರು ತಿಂಗಳ ಬೇಕು ನನಗೆ ಹುದವಾಗೋಕೆ. ಗಂಡೇ" ಅಂತು. ಆಗ ಅರಸು ಮನೆಗೆ ಬಂದ. ಪ್ರಧಾನಿಗೆ 'ಗಂಡೇ' ಅಂದ.

ಅರಸುಗೆ ಒಂದು ಹುಡುಗಿತ್ತು. ಹುಡುಗಿಯ ಕೊಡುಕೆ ಮಾತಾಡಿಕಂಡ್ರು. ಗಿಳಿ ಕಿಡಕಿಲಿ ಕೂತು ಬಂದದ್ದು. "ನಿನಗೊಂದು ಹೆಣ್ಣ ಕೊಡುಕೆ ಮಾಡಿರೂ ಏನ್ಮಾಡ್ತೆ?" ಕೇಳ್ತು. "ನಿನಗೆ

ನಗ್ನಾಗಿದೋ ಏನು?" ಕೇಳಿದರು. "ನನಗೆ ನಗ್ನಾಗಿದು, ಮನೆಯಲ್ಲಿ ಮಡದೀತು." "ನಿನಗೊಂದು ಹೆಣ್ಣ ಕೊಡಬೇಕು. ಅರಸತನ, ಭೂಮಿಮನೆ, ಗಂಟಿಕರೆಗೋಲು, ಶಿನ್ನಶಿಗ್‌ರೂ, ಪೂರಾ ನಿನಗೆ ಬರಕೊಡ್ತೆ." ಅಂದ ಅರಸು. 'ಆಗೋದು' ಅಂತು ಇದು. "ನನ್ನ ತೊಟ್ಟ ಪಟ್ಟಕ್ಕೆ ನಗ್ನ ಮಾಡಿಕೊಟ್ರೆ ನಗ್ನಾಗ್ತೆ, ಕಂಚು, ತಾಮ್ರ, ಶಿನ್ನ್ -ಶಿಗರು ನನ್ನ ಹೆಸ್ರಲ್ಲಿ ಬರಕೊಟ್ರೆ ನಗ್ನಾಗ್ತೆ" ಅಂತು.

ಪಟ್ಟಕ್ಕೆ ನಗ್ನಾ ಮಾಡು ತಯಾರಿ ಮಾಡಿದರು. ಪೇಟೆ-ಪಟ್ನ, ಗುಡಿಗಟ್ಟೀ, ಕೇಳೂ ರಾಜ್ಯಕ್ಕೆ ದಂಗರ ಕೊಟ್ಟ. ಕೇಳದ ರಾಜ್ಯಕ್ಕೆ ಓಲಿ ಬರೆದು, ಪಟ್ಟಕ್ಕೆ ನಗ್ನ ಮಾಡ್ಲಿಕ್ಕ ಶಪ್ಪರ, ಶಾವಡಿ ಇಟ್ಟೆ, ಬರು ಬರಸ್ತಾರದಿನ ನಗ್ನಕಿಟ್ರು. ಪೇಟೆಪಟ್ನ, ಗುಡಿಗಟ್ಟಿ ತನ್ನ ಹುಡುಗಿಯ ಹೊಸಬಂಟ ಶಿಪಾಯಿ ಗೆಣೆಯ್ನ ಪಟಕ್ಕೆ ನಗ್ನ ಮಾಡಿಕೊಟ್ರು. ಮೊದಲಿಕೆ ಹೆಣ್ಣು ಯಾವ ರೀತಿ ಇದ್ದೆ ಅದೇ ರೀತಿ ಬಡಗಿರ ಮನೆಗೆ ಹೋದಳು. "ಎಲಾ ಬಡಗಿರಣ್ಣ, ಇವತ್ತು ನೀ ಉಂಬೋ ಊಟ ಬಿಡಬೇಕು, ಗೆಯ್ಯು ಕೆಲಸ ಬಿಡಬೇಕು. ಹೆಣ್ಣ ರೀತಿ ಬೊಂಬೆ ಗ್ಯೆಯಬೇಕು. ಶಾಲೆ ಉಡಿಸಬೇಕು, ಮುಡಿ, ಸವರಿ ಕೂದಲಹಾಕಿ ಮಂಡೆ ಬಾಶಬೇಕು, ಮುಡಿಮೇಲೆ ದಂಡೆಹೂಗ ಮುಡಿಸ್ಬೇಕು. ಕಿಮಿಗೆ ಶಿಣ್ಣ ಇಡಬೇಕು. ಎರಡು ಅಮ್ಮೆ ಬಿಡಿಸಬೇಕು. ಹೆಣ್ಣು ಅದೇ ರೀತಿ ಮಾಡಬೇಕು" ಅಂತು.

ಬೊಂಬೆ ತಕಂಬಂತು. ಅರಮನೆ ಮುಂದನ ಕಟ್ಟೆಮೇನೆ ಕುಳ್ಳಿಸಿತು. ಕ್ಯೆಗೆ ಕರಿಬಳೆ, ಕೊಳ್ಳಿಗೆ ಶ್ಯೆನ ಎಲ್ಲಾ ಇಡಿಸಿತು. ಹಳೇ ಶಿಪಾಯರ ಎರಡು ಜನ ಕರಿಸಿತು. "ಈ ಬೊಂಬೆ ನೋಡ್ಕಂಡಿ ಯಾವೋನು ಕಣ್ಣೀರ ಬಿಟ್ಟ. ಸೆರೆಲಿ ಕೆಡಗಬೇಕು" ಅಂದ.

ಗಂಡ-ಮ್ಯೆದ್ನ ಕಾಸಿಂದ ಬಂದವರು. ನೋಡಿ, "ಮ್ಯೆದನಿಯ ಹಾಗೀ ಕಾಣ್ತಿದು" ಅಂದ. ಅರಗಿ ನೋಡತ ನಿಂತರು. ಶಿಪಾಯಿಗಳು ಅವರನ್ನು ಜ್ಯೆಲಿಗೆ ಕೂಡಿದರು. ನೀಲಾನದಿ ಅರಸ ಅದೇ ದಾರೀಲಿ ಬಂದ. ಸಾವಿರಾರು ರೂಪಾಯಿ ಕರ್ಚು ಮಾಡಿದ ಹೆಣ್ಣು ಅರರಗಿ ನೋಡಿದ. ಕುದ್ರೆ ಜಾಡಕಾರಣ್ಣ ಬಂದ, "ನನಗೆ ನೂರಾರು ರೂಪಾಯಿ ದಗ ಹಾಕಿತು ರಂಡೆಹಣ್ಣು" ಅಂದ. ಜಾಗ್ರತೆ ಬಂದು ಅವನ್ನೂ ಕೂಡಿದರು. "ನನ್ನ ಹೆಂಡ್ತಿ..." ಅಂದ ಶಿಪಾಯರು ಅರಗಿ ನೋಡತಿರು. ಅವರನ್ನೂ ಕೂಡಿದಾ.

ಆಗ ಬಾರಗೋಲು ಹಿಡಿಕಂಡ್ತು, ಗಾಡಿ ಹೊಡೆವಂಥದು. ಹೋಗಿ ಬಾಗಿಲ ಪಾರಾ ಬಿಡಿಸಿದ. ಗಂಡ-ಮ್ಯೆದ ಹೆರಬಿದ್ರು, 'ಕುಳ್ಳಿ' ಅಂತು. ಕುಂತ್ರು. ಕುಳ್ಳುರಟ್ಟಗೆ, "ನೀಲಾನದಿ ಅರಸು, ಬೊಂಬೆ ನೋಡಿ ಯಾಕೆ ಕಣ್ಣೀರು ಬಿಟ್ಟೆ" ಕೇಳಿತು. "ಸಾವಿರಾರು ರೂಪಾಯಿ ಖರ್ಚುಮಾಡಿರು." "ಕಂಡೋರ ಹೆಣ್ಣಿಗೆ ಕ್ಯೆಹಿಡಿದೆ". ಎಂದು ನಾಕು ಬಾರಕೋಲ ಹಾಕಿತು.

ಈ ಕುದ್ರೆ ಜಾಡಕಾರಣ್ಣ ಕೇಳಿತು, "ಕಂಡರ ಹೆಣ್ಣ ಮೇಲೆ ಕ್ಯೆಸಾರೆ ಮ್ಯೆಸಾರೆಯೋ? ನಡೆ" ಎಂದ. ಆಗೆ, "ಶಿಪಾಯರು ಹೆಣ್ಣ ನೋಡಿಯಾಕೆ ಕಣ್ಣೀರ ಬಿಟ್ರ?" ಕೇಳಿದ. "ನೌಕ್ರಿ ಮಣ್ಣ ತಿನ್ನಿಸಿದ ಹೆಣ್ಣ ಹಾಗೆ ಕಂಡಿತು." "ಕಂಡೂರ ಹೆಣ್ ಮೇಲೆ ಕ್ಯೆಸಾರ, ಮ್ಯೆಸಾರ ಕ್ಯೆಹಾಕಿದೋರು ನೀವೆ?" ಕೇಳಿ ಬಾರಕೋಲ ಬಿಗಿತು. ಮುಕಳಿ ತಿಕ್ಕೊತ ಹೋದ್ರು.

ಕೆಲಸಿ ಕರಕಂಡ ಬಂದಿ ಮೈದನ ಪನ್ನೆ ತಿದ್ದತು. ಪಟ್ಟಕೆ ನಗ್ನ ಮಾಡಿದ ಹುಡ್ಗಿಯ ಮೈದಗ ನಗ್ನ ಮಾಡಿಸಿತು. ಅರಸತನ, ಭೂಮಿ, ಮನೆ, ಗಂಟಿಕರಗೊಲ, ಶಿನ್ನಶಿಗರಗೋಲ... ಅಟ್ಟು ಗಂಡನ ಹೆಸರ ಮೇಲೆ ಮಾಡಿತು.

ಅಜ್ಜಿಮುದಕಿ ಮನೆಗ್ಹೋಯ್ತು. ತಾನು ಹೆಣ್ಣವೇಸದ ಸಾಹಿತ್ಯ ಕಟ್ಕಂಡಿ ಅರಸರ ಮನೆ ಮೆತ್ತು ಹತ್ತಿ ಹೋಯ್ತು. ಗಂಡೇಸ ಕಳಸಿ ಬದಿಗಿಟ್ಟು, ಹೆಣ್ಣೇಸ ತಾಳ್ಕಂಡಿ ಮೆತ್ತಾಗಿಂದ ಇಲೀತು. ಇಳಿದು ಬಂದದ್ದು ಅರಸು ಪಾದಕ್ಕೆ, ಪರದಾನಿ ಪಾದಕ್ಕೆ ನಮಸ್ಕಾರ ಮಾಡ್ತು. ಗಂಡ-ಮೈದನ ಪಾದಕ್ಕೆ ನಮಸ್ಕಾರ ಮಾಡ್ತು.

"ನಾನು ಹೆಣ್ಣು ಹೇಳ್ಹೂಕೆ ಇಟ್ಟೆಲ್ಲಾ ಕಂತ್ರಾಟ ನಡೆಸಿದಿರಿ. ನಿಮ್ಮತ್ರ ಏನು ಆಯ್ತು? ನಾನು ಹೆಣ್ಣೇ. ಅಕಾ... ಅವನನ್ನ ಮೈದ. ಅಕಾ... ಅವ ನನ್ನ ಗಂಡ." ಗಂಡ-ಮೈದನ ಕೂಡೆ, "ನಿಮ್ಮರಸತನ, ಭೂಮಿಮನೆ, ಮಾರಾಟ ಮಾಡಿದ್ರಿ ನನ್ನ ಸಲುವಾಗಿ, ತಾಯಿ-ತಂದೆಗೆ ಪತ್ರ ಬಿಡಿ ಇದೇ ಅರಸತನದಲ್ಲಿ ಉಳಿವ." ತಾಯಿ-ತಂದೆಗೆ ಪತ್ರ ಬಿಟ್ಟು ಒಟ್ಟು ಆಗಿ ಅದೇ ಅರಸತನದಲ್ಲಿ ಆಳಕಂತಿವ್ರು.

- **ಕೆಲವು ಪದಗಳ ವಿವರಣೆ**

ಗಾಳಿ ಹವಾಯಿ = ಗಾಳಿಯಲ್ಲಿ ತಿರುಗಾಡಲು
ಶಾಲೆ ಪದರ = ಸೀರೆ ಸೆರಗು
ಒಂದು ಅಳಿಗೆ = ಒಬ್ಬನಿಗೆ
ಜೈಡು = ಜೋಡಿ
ಅಪ್ತಿ = ತೃಪ್ತಿ
ಈತು = ಇದೆ
ಕೂರಾಡ = ಒಟ್ಟಿಗೆ
ಮುಂಗಡ = ಮುಂದಿನ ದಾರ
ಸೊಕ್ಷ = ಸೌಖ್ಯ
ರೊಂಡ = ರುಂಡ
ಹಾಡ = ಹಂಡೆ
ಮೆಂದ = ತಿಂದ
ಹುದಾಗಕೆ = ಸುಧಾರಿಸಲಿಕ್ಕೆ
ಅಮ್ಮೆ = ಮೊಲೆ
ದುರವಿನ = ದುಡ್ಡಿನ
ಪಾರ = ಪಾಗಾರ
ಪಾರದವರಿಗೆ = ಕಾಯುವವರಿಗೆ
ಗಂಟಿ = ದನ
ಪಿಣಿ ಪಿಣಿ = ಮಿಣಿ ಮಿಣಿ
ಏಳೇಲಿ = ವೇಳೆಯಲ್ಲಿ
ಹೆಣ್ಣೇಸ = ಹೆಣ್ಣಿನ ವೇಶ
ದಾತ್ರೆ = ರಾತ್ರಿ
ಯಲವಸ್ತ್ರ = ಉತ್ತರಿಗೆ
ಮುಂಗಾತ = ಮುಂದುಗಡೆ
ತುಂಕೆ = ತುಮುಕೆ
ಹೊಡ = ಹೊರ
ಪಟ್ಟಕ್ಕೆ = ಪಟ್ಟದ ಕತ್ತಿ
ಅರಗಿ = ಇಣಕಿ

▪ ಹೇಳಿದವರು: **ದಿ. ಪುಟ್ಟು ನಾಗು ಗೌಡ,** ದುಗ್ಗೂರು.

## ಈಗ ನಡೆಯುತ್ತಿರುವ ಚಟುವಟಿಕೆಗಳು

- **ಮಿತ್ರಮಾಧ್ಯಮದ ಟ್ರಸ್ಟೀ ಶ್ರೀ ಬೇಳೂರು ಸುದರ್ಶನ ಅವರಿಂದ ಕರ್ನಾಟಕ ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಏಕರೂಪತೆ ಸುಲಭಗ್ರಾಹ್ಯತೆ ಕುರಿತಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಗ್ರ ವರದಿ ಸಲ್ಲಿಕೆ (2017). ಈ ವರದಿಯ ಆಧಾರದಲ್ಲಿ ಸರ್ಕಾರವು ಸರ್ಕಾರದ ಏಕೀಕೃತ ವೆಬ್ ಮಾಹಿತಿ ಸಂಗ್ರಹಣಾ ವ್ಯವಸ್ಥೆಯನ್ನು ರೂಪಿಸಿದೆ (2019)**
- **ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ತಂತ್ರಾಂಶಗಳನ್ನು ಕಡ್ಡಾಯವಾಗಿ ಭಾರತೀಯ ಮಾರುಕಟ್ಟೆಗೆ ಬರುವ ಮೊಬೈಲ್ ಸಹಿತ ಎಲ್ಲಾ ಐಟಿ ಸಾಧನಗಳಲ್ಲಿ ಮಾರಾಟಕ್ಕೆ ಮುಂಚಿತವಾಗಿಯೇ ಅಳವಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಸಹಿ ಸಂಗ್ರಹ, ಮನವಿ ಸಲ್ಲಿಕೆ. (2016)**
- ಸಿದ್ಧ ಪೊಟ್ಟಣಗಳ ಮೇಲೆ ಭಾರತೀಯ ಭಾಷೆಗಳಲ್ಲಿ ಉತ್ಪನ್ನದ ಶೀರ್ಷಿಕೆ, ಮಾಹಿತಿ ಮುದ್ರಿಸಲು ಒತ್ತಾಯಿಸಿ ಅಭಿಯಾನ. (2016)
- ಕನ್ನಡದ ಓಸಿಆರ್‌ನ್ನು ಮುಕ್ತ ತಂತ್ರಾಂಶವಾಗಿ ಬಿಡುಗಡೆ ಮಾಡುವಂತೆ ಭಾರತೀಯ ವಿಜ್ಞಾನ ಸಂಸ್ಥೆಗೆ ಸೂಚಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ (2016)
- ಕನ್ನಡವೂ ಸೇರಿದಂತೆ ಕೇಂದ್ರ ಸರ್ಕಾರದ ಐಟಿ ಇಲಾಖೆಯಿಂದ ರೂಪಿಸಿರುವ ವಿವಿಧ ತಂತ್ರಾಂಶಗಳನ್ನು ಸಮಕಾಲೀನಗೊಳಿಸಿ ಮುಕ್ತ ತಂತ್ರಾಂಶಗಳಾಗಿ ಬಿಡುಗಡೆ ಮಾಡಲು ಒತ್ತಾಯ (2016)

## ಈವರೆಗೆ ಕೈಗೊಂಡ ಚಟುವಟಿಕೆಗಳು

- ವಿವಿಧ ಸೇವಾಕಾರ್ಯಗಳಿಗೆ ಧನಸಹಾಯ (2016,2018)
- ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಲು ಓಸಿಆರ್ ಕುರಿತು ಒಂದು ದಿನದ ಕಾರ್ಯಾಗಾರ ಸಂಘಟನೆ (2015)
- **ಕ್ರಿಯೇಟಿವ್ ಕಾಮನ್ಸ್ ಎಂಬ ಮುಕ್ತ ಹಕ್ಕುಸ್ವಾಮ್ಯದಡಿ ಕನ್ನಡದ ಮೊಟ್ಟಮೊದಲ ಪುಸ್ತಕ 'ಕಂಪ್ಯೂಟರ್ ಮತ್ತು ಕನ್ನಡ' ಪ್ರಕಟಣೆ (2014) ಉಚಿತ ಪುಸ್ತಕ ಸಂಸ್ಕೃತಿ ಅಭಿಯಾನ (freebookculture.com/ freebookculture.riverthoughts.com)**
- 'ಇಂಟೆಗ್ರೇಟಡ್ ಪವರ್ ಪಾಲಿಸಿ' ಕುರಿತ ಪುಸ್ತಕದ ಬಿಡುಗಡೆ ಕಾರ್ಯಕ್ರಮ, ಪ್ರಚಾರ (2013)
- ಎಂಡೋಸಲ್ಫಾನ್ ಸಂತ್ರಸ್ತರಿಗೆ ಸೂಕ್ತ ಪರಿಹಾರ ಕೊಡುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಮನವಿ, ವಿಶೇಷ ಮಾಹಿತಿ ಸಭೆ (2011)
- ರಾಜ್ಯದ ಇಂಧನ ನೀತಿಯಲ್ಲಿ ಪರಿಸರ ಸಂರಕ್ಷಣೆಗೆ ಒತ್ತು ನೀಡಲು ಮುಖ್ಯಮಂತ್ರಿಯವರಿಗೆ ಒತ್ತಾಯ; ಕನ್ನಡದ ಪ್ರಮುಖ ದಿನಪತ್ರಿಕೆಗಳಲ್ಲಿ ಹಿರಿಯ ಸಾಹಿತಿ, ಕಲಾವಿದರ ಸಹಿಯ ಬಹಿರಂಗ ಪತ್ರ ಪ್ರಕಟಣೆ (2010)
- ವಿದ್ಯುತ್ ತಜ್ಞ ಶ್ರೀ ಶಂಕರ ಶರ್ಮ, ಮಕ್ಕಳ ಮನೋವಿಜ್ಞಾನಿ ಡಾ॥ ಮಾಳವಿಕಾ ಕಪೂರ್ ಮುಂತಾದವರಿಂದ ಮಾಹಿತಿ ಸಭೆಗಳು.

# ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೩ ಹಾಲಕ್ಕಿ ಕಥೆಗಳು



ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಮಹಾಚೇತನ. ಅಧ್ಯಾಪನದಿಂದ ನಿವೃತ್ತಿಯಾದ ನಂತರ ತಮ್ಮೆಲ್ಲ ಸಮಯವನ್ನು ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂರಕ್ಷಣೆಯ ಕೆಲಸಕ್ಕೇ ಮೀಸಲಿಟ್ಟಿದ್ದ ಸಮಾಜಜೀವಿ. ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅಪೂರ್ವ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆ, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಆಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅವರ ಅಧ್ಯಯನಗಳು ಅನನ್ಯ; ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಅಸಂಖ್ಯ.

ಈಗಾಗಲೇ ಅವರ 84 ಕೃತಿಗಳು ಪ್ರಕಟಣೆ ಕಂಡಿವೆ. ಅವರ ಅಪಾರ ಸಂಗ್ರಹದಲ್ಲಿ ಪ್ರಕಟವಾಗದ ಜಾನಪದ ಸಾಹಿತ್ಯ ಇನ್ನೂ ಸಾಕಷ್ಟಿದೆ. ಅವುಗಳಲ್ಲಿ ಕೆಲವನ್ನು ಆಯ್ದು ಅಪ್ರಕಟಿತ ಸಾಹಿತ್ಯ ಸರಣಿಯನ್ನು ಈ ಮೂಲಕ ಆರಂಭಿಸಲಾಗಿದೆ. ಅವರ ಪುತ್ರಿ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ಈ ಸಂಗ್ರಹಗಳನ್ನು ನಾಡಿಗಾಗಿ ಸಂರಕ್ಷಿಸಿ, ಸಂಪಾದಿಸಿ ಕೊಟ್ಟಿದ್ದಾರೆ.

ಉಚಿತ ಪುಸ್ತಕ

ಮಿತ್ರಮಾಧ್ಯಮ
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ